

1945ರಲ್ಲಿ ಶೋಲಾಪುರದಲ್ಲಿ ಮುಷ್ಕರ ನಡೆಸಿದ ಮಹಿಳಾ ಕಾರ್ಮಿಕರು

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ12 ಸಂಚಿಕೆ36 ಸೆಪ್ಟೆಂಬರ್ 9, 1990 ರೂ 1.50

ಇಲ್ಲದ ಉದ್ಯೋಗಕ್ಕಾಗಿ ನಿಲ್ಲದ ಚಳುವಳಿ

ಮಂಡಲ್ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕೇಂದ್ರ ಸರಕಾರದ ತೀರ್ಮಾನ ರಾಜ್ಯದಲ್ಲಿಯೂ ಮೀಸಲಾತಿ ವಿರೋಧಿ ಪಡೆಗಳುವಳಿಗೆ ಎಡೆ ಕೊಟ್ಟಿದೆ. ರಾಜ್ಯದಲ್ಲಿ ಚರ್ಚಿತವಾಗುತ್ತಿರುವ ಚಿನ್ನಪ್ಪರೆಡ್ಡಿ ಆಯೋಗದ ವರದಿಯ ಹಿನ್ನೆಲೆಯು ಇದಕ್ಕಿದೆ. ಹಿಂದುಳಿದ ಜಾತಿಗಳ ಅಸಮಾನತೆಯನ್ನು ಭಾಗಶ: ತೊಡೆಯುವ ಮೀಸಲಾತಿ ಅವಶ್ಯಕವೆಂಬುದನ್ನು, ಮುಂದುವರಿದ ಜಾತಿಗಳ ಪ್ರಜಾಸತ್ತಾತ್ಮಕ ಮನೋಭಾವದ ಜನ ಮನಗಾಣಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸೆಕ್ರಟಾರಿಯೇಟ್ ಕರೆ ನೀಡಿದೆ. ಸರ್ಕಾರಿ ಉದ್ದಿಮೆಗಳಲ್ಲಿ ಎಲ್ಲ ಜಾತಿಗಳ ನಿರುದ್ಯೋಗಿ ಯುವಕರು, ನೇಮಕಾತಿ ರದ್ಧತಿ ಹಾಗೂ ಹೊಸ ಉದ್ಯೋಗ ಸೃಷ್ಟಿಗಾಗಿ ಹೋರಾಡಬೇಕಾದ ಸಂದರ್ಭದಲ್ಲಿ ಮೀಸಲಾತಿ ಪರ-ವಿರೋಧಿಗಳಾಗಿ ಒಡೆಯುವುದು ತಪ್ಪಬೇಕೆಂದು ಸೆಕ್ರಟಾರಿಯಟ್ ನೀಡಿರುವ ಪತ್ರಿಕಾ ಹೇಳಿಕೆಯೊಂದರಲ್ಲಿ ವಿನಂತಿಸಿಕೊಂಡಿದೆ.

ಸೆಪ್ಟೆಂಬರ್ 6ರಂದು ಸಭೆ ಸೇರಿದ ರಾಜ್ಯ ಸೆಕ್ರಟಾರಿಯಟ್ ಮಂಡಳಿಯ ಇತರ ಕೆಲವು ಠರಾವುಗಳು ಹೀಗಿವೆ.

ರಾಮನಗರ ಗಲಭೆಗಳು

ಬೆಂಗಳೂರು ಜಿಲ್ಲೆಯ ರಾಮನಗರದಲ್ಲಿ ಇತ್ತೀಚೆಗೆ ನಡೆದ ಎರಡು ಕೋಮುಗಳ ನಡುವಿನ ದೊಂಬಿಗಳಾಗಿ ಪರಿವರ್ತನೆಗೊಂಡುದುದಕ್ಕೆ ತೀವ್ರ ವಿಷಾದ ವ್ಯಕ್ತ ಪಡಿಸಿರುವ ರಾಜ್ಯ ಸೆಕ್ರಟಾರಿಯಟ್, ರಾಮನಗರವು ನಮ್ಮ ರಾಜ್ಯದಲ್ಲಿ ಕೋಮು ಘರ್ಷಣೆಯ ಒಂದು ಬಿಸಿ ಕೇಂದ್ರವಾಗಿರುವುದು ಸ್ಪಷ್ಟವಾಗಿದ್ದರೂ ಗಣೇಶನ ಹಬ್ಬದ ಈ ಸಂದರ್ಭದಲ್ಲಿ ರಾಜ್ಯ ಸರಕಾರವು ರಾಮನಗರದಲ್ಲಿ ತಕ್ಕ ಪೋಲೀಸು ಸಿಬ್ಬಂದಿ ವ್ಯವಸ್ಥೆ ಮಾಡದಿದ್ದುದು ಖಂಡನೀಯ ಎಂದಿದೆ. ಇದೇ ಸಂದರ್ಭದಲ್ಲಿ ರಾಜ್ಯದ ಹಲವೆಡೆ ಗಣೇಶನ ಮೂರ್ತಿ ವಿಸರ್ಜನೆಯ ಸಂದರ್ಭವನ್ನು ದುರುಪಯೋಗಪಡಿಸಿಕೊಂಡಿರುವ ಬಗ್ಗೆಯೂ ಸಾಕಷ್ಟು ಎಚ್ಚರಿಕೆ ವಹಿಸಲಿಲ್ಲ ಎಂಬುದು ಸ್ಪಷ್ಟವಾಗಿದೆ. ದೃಢವಾದ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕೆಂದೂ ರಾಜ್ಯ ಕಾರ್ಯದರ್ಶಿ ಮಂಡಳಿಯು ರಾಜ್ಯ ಸರಕಾರವನ್ನು ಒತ್ತಾಯಿಸಿದೆ. ಅಲ್ಲದೆ ಹಿಂದಿನ ವರ್ಷಗಳಲ್ಲಿ ದಸರಾ ಹಬ್ಬವನ್ನು ಇಂತಹ ಕೀಳು ಕೆಲಸಕ್ಕೆ ಉಪಯೋಗವಾಗಿದ್ದುದನ್ನು ನೆನೆದು ಮುಂದಿನ ಒಂದು ತಿಂಗಳ ಕಾಲ ರಾಜ್ಯ ಮತೀಯ ಘರ್ಷಣೆ ಕೇಂದ್ರಗಳಲ್ಲೆಲ್ಲಾ ಬಿಗು ಕಾನೂನು ಕ್ರಮಗಳನ್ನು ಮುಂದಾಗಿಯೇ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ವಿದ್ಯುತ್ ದರ ಏರಿಕೆ

ಜೀವನಾವಶ್ಯಕ ವಸ್ತುಗಳ ಬೆಲೆಗಳು ಈಗಾಗಲೇ ಗಗನಕ್ಕೇರಿದ ಪರಿಣಾಮವಾಗಿ ರಾಜ್ಯದ ಜನತೆ ತೀವ್ರ ಕಷ್ಟಕ್ಕೆ ಗುರಿಯಾಗಿರುವಾಗ ಹಾಗೂ ಇರಾಕ್ ಘರ್ಷಣೆಯ ಪರಿಣಾಮ ಈ ಬೆಲೆಗಳ ಮೇಲೆ ಯಾವ ಪರಿಣಾಮವನ್ನುಂಟುಮಾಡಬಹುದು ಎಂಬ ಚಿಂತೆಗೆ ಜನತೆ ಒಳಗಾಗಿರುವಾಗ ರಾಜ್ಯದ ಕಾಂಗೆಸ್ ಸರಕಾರವು ಈಗಾಗಲೇ ಏರಿಸಿರುವ ಬಸ್ ದರ ಏರಿಕೆಯ ಹಿನ್ನೆಲೆಯಲ್ಲಿ ಈದೀಗ ವಿದ್ಯುತ್ ದರವನ್ನು ಸುಮಾರು ಶೇಕಡ 32ರಷ್ಟು ಏರಿಸಿರುವುದು ತೀರ ಖಂಡನೀಯವಾಗಿದೆ. ವಿದ್ಯುತ್ ಮಂಡಳಿಯ ವ್ಯವಹಾರಗಳ ಕುರಿತು ಸಾರ್ವತ್ರಿಕವಾಗಿ ಟೀಕೆಗಳು ಇರುವಾಗ, ಈ ಟೀಕೆಗಳನ್ನು ಗಮನಕ್ಕೆ ತೆಗೆದುಕೊಂಡು ಕೆ.ಇ.ಬಿ.ಯನ್ನು ಶುದ್ಧಗೊಳಿಸುವ ಕ್ರಮಗಳನ್ನು ಮೊದಲು ಕೈಗೊಳ್ಳುವ ಬದಲು ವಿದ್ಯುತ್ ದರವನ್ನು ಏರಿಸಿ ಕೆ.ಇ.ಬಿ. ಆದಾಯವನ್ನು ಸುಮಾರು 250 ಕೋಟಿಯಷ್ಟು ಅಧಿಕಗೊಳಿಸಲು ರಾಜ್ಯ ಸರಕಾರವು ತೀರ್ಮಾನಿಸಿದುದನ್ನು ಖಂಡಿಸಿರುವ ರಾಜ್ಯ ಕಾರ್ಯದರ್ಶಿ ಮಂಡಳಿ ಇದು ಕಾಂಗ್ರೆಸ್ ಸರಕಾರದ ಜನವಿರೋಧಿ ನೀತಿಯನ್ನು ಸ್ಪಷ್ಟಪಡಿಸುತ್ತಿದೆ ಎಂದಿದೆ. ರಾಜ್ಯದ ಜನತೆ ಈ ವಿಷಯದಲ್ಲಿ ರಾಜ್ಯ ಸರಕಾರವು ತನ್ನ ಜನತಾ ವಿರೋಧಿ ನೀತಿಯನ್ನು ಹಿಂದೆ ತೆಗೆಯುವಂತೆ ಮಾಡುವ ಬಗ್ಗೆ ಸರಕಾರದ ವಿರುದ್ಧ ಒತ್ತಡ ಹೇರಬೇಕೆಂದು ಕರೆ ಕೊಟ್ಟಿದೆ.

'ಜನರ ಪ್ರಶ್ನೆಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗೆತ್ತಿ ಕೊಳ್ಳಬೇಕು'

ಸದ್ಯದ ಸನ್ನಿವೇಶದಲ್ಲಿ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳಬೇಕಾದದ್ದು ಸಿಪಿಐ(ಎಂ)ನ ಹೊಣೆ. ಕಾರ್ಮಿಕರು, ರೈತರು, ಶ್ರಮಜೀವಿ ವಿಭಾಗಗಳು ತಮ್ಮ ಮೇಲೆ ಹೇರಿರುವ ಸಂಕಷ್ಟಗಳ ವಿರುದ್ಧ ಎದ್ದೇಳುವುದು ಖಂಡಿತ. ಪಕ್ಷದ ಸ್ವತಂತ್ರ ಚಟುವಟಿಕೆಗಳನ್ನು ಹೆಚ್ಚಿಸಿ, ಜನತೆಯ ಈ ಹೋರಾಟಗಳಿಗೆ ನೇತೃತ್ವ ನೀಡಿದರೆ ಮಾತ್ರವೇ ದೇಶದ ವರ್ಗ ಬಲಾಬಲವನ್ನು ದುಡಿಯುವ ಜನಗಳ ಪರವಾಗಿ ಬದಲಿಸಬಹುದು. ನಮ್ಮ ಗುರಿಯತ್ತ ಸಾಗಲು ಸಾಧ್ಯವಾಗುವುದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ನವದೆಹಲಿಯಲ್ಲಿ ಆಗಸ್ಟ್ 24ರಿಂದ ಮೂರು ದಿವಸ ನಡೆದ ಕೇಂದ್ರ ಸಮಿತಿ ಸಭೆ ಕಳೆದ ಮೇ ಸಭೆಯ ನಂತರದ ರಾಷ್ಟ್ರೀಯ, ಅಂತರರಾಷ್ಟ್ರೀಯ ರಂಗದ ಬೆಳವಣಿಗೆಗಳನ್ನು ಪರಾಮರ್ಶಿಸಿತು.

ದೇಶದಲ್ಲಿ ಜಮ್ಮು,ಕಾಶ್ಮೀರ, ಪಂಜಾಬ್, ಅಸ್ಸಾಂನಲ್ಲಿ ದೇಶದ ಸಮಗ್ರತೆಗೆ, ಐಕ್ಯತೆಗೆ ಬಂದಿರುವ ಸವಾಲುಗಳನ್ನುಎದುರಿಸಲು ಯಾವುದೇ ರಾಜಕೀಯ ಅಥವಾ ಆಡಳಿತಾತ್ಮಕ ಕ್ರಮ ರೂಪಿಸುವುದು ರಾಷ್ಟ್ರೀಯ ರಂಗ ಸರಕಾರಕ್ಕೆ ಆಗಿಲ್ಲ ಎಂದು ಖೇದ ವ್ಯಕ್ತ ಪಡಿಸಿದ ಕೇಂದ್ರ ಸಮಿತಿ ದೇಶದ ಐಕ್ಯತೆ ಹಾಗೂ ಸಮಗ್ರತೆಗೆ ಬಂದಿರುವ ಧಕ್ಕೆ ಹಾಗೆಯೇ ಮುಂದುವರಿಯುತ್ತಿದೆ ಎಂದಿದೆ.

ಸ್ವಾಯತ್ತತೆ ಮೂಲಕ ಸಮಗ್ರೀಕರಣ

ಕಾಶ್ಮೀರದಲ್ಲಿ ಇತ್ತೀಚೆಗೆ ಉಗ್ರಗಾಮಿಗಳ ಉಚ್ಚ ಮುಖಂಡರನ್ನು ಬಂಧಿಸುವಲ್ಲಿ ಯಶಸ್ಸು ದೊರೆತಿದ್ದರೂ ಪಾಕಿಸ್ತಾನದಲ್ಲಿ ತರಬೇತಿ ಪಡೆದ ಯುವಕರು ದೇಶದೊಳಗೆ ನುಸುಳುವುದು ನಿಂತಿಲ್ಲ. ಅರೆ ಸೈನಿಕ ಪಡೆಗಳು, ಆಡಳಿತ ಬಹಳ ಮಿತಿಗಳ ನಡುವೆ ಕೆಲಸ ಮಾಡಬೇಕಾಗಿದೆ ಎಂಬುದು ನಿಜವಾದರೂ, ಮುಗ್ಧ ಜನರಿಗೆ ಕಿರುಕುಳ, ದಮನದ ಕೃತ್ಯಗಳನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಇವು ಪರೋಕ್ಷವಾಗಿ ಉಗ್ರಗಾಮಿಗಳ ಕೈಬಲಪಡಿಸುವಂತಾದ್ದು. ದೃಢ ಆಡಳಿತ ಕ್ರಮವೊಂದಿಗೆ ಕಾಶ್ಮೀರಿ ಜನತೆಯ ಪ್ರಜಾಪ್ರಭುತ್ವ ಆಕಾಂಕ್ಷೆಗಳನ್ನು ಈಡೇರಿಸಲು ಅವರ ನಿಜವಾದ ಸಮಸ್ಯೆಗಳನ್ನು ಪರಿಹರಿಸಲು ಕ್ರಮಗಳನ್ನು ಘೋಷಿಸುವುದೂ ಅಷ್ಟೇ ಅಗತ್ಯ. ಭಾರತದೊಳಗೆ ಕಾಶ್ಮೀರಿಗಳ ಸಮಗ್ರೀಕರಣ ಅವರಿಗೆ ಹೆಚ್ಚಿನ ಸ್ವಾಯತ್ತತೆ ನೀಡುವ ಮೂಲಕ, ಕಾಶ್ಮೀರಿ ಯುವಜನರ ನಡುವೆ ನಿರುದ್ಯೋಗ ಸಮಸ್ಯೆಯ ಪರಿಹಾರದಿಂದ ಸಾಧ್ಯವಾಗುತ್ತದೆ. ಕೇಂದ್ರ ಸೇವೆಗಳಲ್ಲಿ ಹೆಚ್ಚೆಚ್ಚು ಕಾಶ್ಮೀರಿ ಯುವಜನರು ಬರುವಂತೆ ಮಾಡಬೇಕೆಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

> 'ಕಾಶ್ಮೀರಿಗಳಿಗೆ ಹೆಚ್ಚಿನ ಸ್ವಾಯತ್ತತೆ , ಅಲ್ಲಿನ ಯುವಜನರ ನಿರುದ್ಯೋಗದ ಪರಿಹಾರ, ಕೇಂದ್ರ ಸೇವೆಗಳಲ್ಲಿ ಹೆಚ್ಚು ಕಾಶ್ಮೀರಿ ಯುವಜನರಿಗೆ ಅವಕಾಶಗಳ ಮೂಲಕ ಭಾರತೂಡನೆ ಕಾಶ್ಮೀರಿಗಳ ಸಮಗ್ರೀಕರಣ ಸಾಧ್ಯ'

ಪಂಜಾಬ್‌ನಲ್ಲಿ ರಾಷ್ಟ್ರೀಯ ರಂಗ ಸರಕಾರ ಮೊದಲಿಗೆ ಕೆಲವು ಯಶಸ್ಸು ಪಡೆದರೂ ನಂತರ ಈ ದಿಕ್ಕಿನಲ್ಲಿ ಸಾಕಷ್ಟು ಪ್ರಗತಿಯಾಗಿಲ್ಲ ಎಂದು ಅಭಿಪ್ರಾಯ ಪಟ್ಟಿರುವ ಕೇಂದ್ರ ಸಮಿತಿ ಸರಕಾರ ರಾಜೀವ್-ಲೋಂಗೋವಾಲ್ ಒಪ್ಪಂದದ ಪ್ರಕಾರ ಪಂಜಾಬ್ ಜನತೆಯ ಆಶೋತ್ತರಗಳನ್ನು ಈಡೇರಿಸುವ ಕ್ರಮಗಳನ್ನು ಏಕಪಕ್ಷೀಯವಾಗಿ ಘೋಷಿಸಬೇಕು ಎಂದು ಸಲಹೆ ಮಾಡಿದೆ ಎಂದಿನಿಂದ ಮತ್ತೆ ಆಗಸ್ಟ್ 27ರಂದು ಎಡಪಕ್ಷಗಳು ನವದೆಹಲಿಯಲ್ಲಿ ಧರಣಿ ನಡೆಸಿ ಮೊದಲಡಿಯಿಟ್ಟಿದೆ.


ಉಲ್ಫಾದ ಚಟುವಟಿಕೆಗಳು ಅಸ್ಸಾಂನಲ್ಲಿ ಅಪಾಯಕಾರಿ ಸನ್ನಿವೇಶ ಸೃಷ್ಟಿಸುತ್ತಿದೆ. ಹಾಡುಹಗಲೇ ಕೊಲೆ,ಸುಲಿಗೆ,-ಲೂಟಿಗಳ ಮೂಲಕ ಎಜಿಪಿ ಸರಕಾರ ತನ್ನ ಪೂರ್ಣ ಅಸಮರ್ಥತೆಯನ್ನು ತೋರಿಸಿಕೊಟ್ಟಿದೆ. ರಾಷ್ಟ್ರೀಯ ರಂಗದ ಅಂಗ ಪಕ್ಷವಾದ ಎಜಿಪಿ ಈ ಸವಾಲನ್ನು ಎದುರಿಸಲು ದೃಢ ಕ್ರಮ ಕೈಗೊಳ್ಳುವಂತೆ ಮಾಡಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸುತ್ತದೆ. ಕೊಲ್ಲಿ ಬಿಕ್ಕಟ್ಟಿನ ಸಂದರ್ಭದಲ್ಲಿ ತೈಲ ನಿರ್ಬಂಧದ ಎ.ಎ.ಎಸ್.ಯು. ರೀತ್ಯ ಕ್ಷದ ಚಳುವಳಿ ದೇಶದ ಹಿತಾಸಕ್ತಿಗೆ ಗಂಭೀರ ಧಕ್ಕೆ ತಂದು ಅದರ ಪ್ರತ್ಯೇಕತಾವಾದ ಸ್ವಭಾವವನ್ನು ಬಯಲಿಗೆಳೆಯುತ್ತಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ವಿ.ಹೆಚ್.ಪಿ.ಯ ಅಕ್ರಾಮಕ ನಿಲುವು

ಮಾತುಕತೆಯ ಮೂಲಕ ಅಥವಾ ನ್ಯಾಯಾಲಯದ ಮೂಲಕ ಸಮಸ್ಯೆ ಪರಿಹಾರಕ್ಕೆ ವಿಶ್ವ ಹಿಂದೂ ಪರಿಷತ್ ನಕಾರ ಸೂಚಿಸುತ್ತಲೇ ಅಕ್ಟೋಬರ್ 30ರಿಂದ ದೇವಸ್ಥಾನ ನಿರ್ಮಾಣದ ಕೆಲಸ ಆರಂಭಿಸುವ ತಯಾರಿ ಮುಂದುವರೆಸುತ್ತಲೇ ಇದೆ. ಇದಕ್ಕಾಗಿ ಉದ್ವೇಗಕಾರಿ ಪ್ರಚಾರದಲ್ಲೂ ತೊಡಗಿದೆ. ದೇಶದ ಸದ್ಯದ ಪರಿಸ್ಥಿತಿಯಲ್ಲಿ ದೇಶದ ಶತ್ರುಗಳಿಗಷ್ಟೇ ನೆರವಾಗುವ ಅಕ್ರಾಮಕ ನಿಲುವಿದು ಎಂದು ಟೀಕಿಸಿರುವ ಕೇಂದ್ರ ಸಮಿತಿ ಎಲ್ಲಾ ದೇಶಪ್ರೇಮಿ, ಜಾತ್ಯಾತೀತ ಶಕ್ತಿಗಳು ಈ ಸವಾಲಿಗೆ ತಕ್ಕ ಉತ್ತರ ನೀಡಬೇಕು ಎಂದು ಕರೆ ನೀಡಿದೆ. ಕೋಮು-

> 'ಸದ್ಯದ ಪರಿಸ್ಥಿತಿಯಲ್ಲಿ ರಾಮದೇವಸ್ಥಾನ ಕಟ್ಟುವ ಹೆಸರಿನಲ್ಲಿ ಉದ್ವೇಗಕಾರಿ ಪ್ರಚಾರ ದೇಶದ ಶತ್ರುಗಳಿಗೆ ನೆರವಾಗುವ ಆಕ್ರಾಮಕ ನಿಲುವು'

ಪುಟ 4 ನೋಡಿ



ವಿಧ್ಯಾರ್ಥಿಗಳ 'ವಿಧಾನ ಸೌಧ ಚಲೋ'

ಸೆಪ್ಟೆಂಬರ್ ತಿಂಗಳ ಮೊದಲ ದಿನ ಬೆಂಗಳೂರಿನ ಜನರು ಬಣ್ಣ ಬಣ್ಣದ ಬ್ಯಾನರ್‌ಗಳು, ಕೆಂಪು ನಕ್ಷತ್ರದ ಬಾವುಟ ಹಿಡಿದ ಹುಡುಗರು-ಹುಡುಗಿಯರ ಮೆರವಣಿಗೆಯೊಂದನ್ನು ಕಂಡರು. ಹೈಸ್ಕೂಲ್‌ನಿಂದ ಹಿಡಿದು ವೈದ್ಯಕೀಯ- ಇಂಜನಿಯರಿಂಗ್ ತನಕದ ವಿದ್ಯಾರ್ಥಿಗಳು ಒಂದು ನೂರಲ್ಲ, ಒಂದು ಸಾವಿರವಲ್ಲ, ಸುಮಾರು ಐದು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು... ತಮ್ಮ ಬಂಜಡಗಳನ್ನು ಆಳುವವರ ಕಿವಿಗೆ ಮುಟ್ಟಿಸಲು.

ಕರಾವಳಿಯ ಉತ್ತರಕನ್ನಡ, ಮಲೆನಾಡಿನ ಚಿತ್ರದುರ್ಗ, ಸಾಂಸ್ಕೃತಿಕ ರಾಜಧಾನಿ ಧಾರವಾಡ-ಹುಬ್ಬಳ್ಳಿ, ಬರದ ಬದಗೆಯ ಬೀದು ಗುಲ್ಬರ್ಗ,ಬೀದರ್,ವಿಜಾಪುರ, ಚಿನ್ನದ ಬೀಡುಕೋಲಾರ, ತೆಂಗಿನ ನಾಡು ತುಮಕೂರು, ಕಬ್ಬಿನ ಆರು ಬಳ್ಳಾರಿ, ಅರಮನೆಗಳ ತಾಣ ಮೈಸೂರು, ಪ್ರಥಕ್ಷ ಆಳರಸರ ತಾಣ ಬೆಂಗಳೂರು........ಹೀಗೆ ರಾಜ್ಯದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಭಾರತ ವಿದ್ಯಾರ್ಥಿ ಫೆಡರೇಷನ್‌ನ(ಎಸ್.ಎಫ್.ಐ.)-ರಾಜ್ಯ ಸಮಿತಿಯ ಕರೆಯ ಮೇರೆಗೆ'ವಿಧಾನ ಸೌಧ ಚಲೋ' ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದರು.

ಹಗರಿಬೊಮ್ಮನಹಳ್ಳಿಯ 9ನೇ ಇಯತ್ತೆಯ ಮಂಜುನಾಥ, ರಾಯಚೂರಿನ 8ನೇ ತರಗತಿಯ ಬಸವನಗೌಡ, ಮಲ್ಲೇಶ್ವರಂನ 10ನೇ ತರಗತಿಯ ಪ್ರಕಾಶ್ ಮೊದಲಾಗಿ ಅನೇಕಾನೇಕ ಹೈಸ್ಕೂಲ್ ವಿದ್ಯಾರ್ಥಿಗಳೂ ಸೇರಿದ್ದರು. ವಸ್ತುಶ: ಮಳೆ ಹಾಗೂ ಚಳಿಯನ್ನು ಲೆಕ್ಕಿಸದೆ ಚಳಿಯಲ್ಲಿ ನಡುಗಿ, ಮಳೆಯಲ್ಲಿ ನೆನೆದು ಕೆಲವು ವಿದ್ಯಾರ್ಥಿಗಳು ಬಂದಿದ್ದರು.

ಬೆಳಗ್ಗೆ11-15ಕ್ಕೆ ಬೆಂಗಳೂರಿನ ಸಿಟ್ಟಿಲ್ ಜ್ಯುಬಿಲಿ ಶಾಲೆಯಿಂದ ಹೊರಟು ಮೆರವಣಿಗೆ 12-45ಕ್ಕೆ ವಿಧಾನಸೌಧ ಬಳಿಯ

ಪುಟ 3 ಕ್ಕೆ

'ವಿಧಾನ ಸೌಧ ಚಲೋ'

ಪುಟ 1 ರಿಂದ

ಕಬ್ಬನ್ ಪಾರ್ಕ್ ತಲುಪಿತು. ರಾಜ್ಯದ ವಿದ್ಯಾರ್ಥಿ ಸಮುದಾಯದ 20 ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟು ರಾಜ್ಯಾದ್ಯಂತ ನಡೆಸಲಾದ ಸಹಿಸಂಗ್ರಹ ಚಳುವಳಿಯ ಮುಂದಿನ ಹಂತವಾಗಿ ಈ ಕಾರ್ಯಕ್ರಮ ನಡೆಯಿತು.

ಇತ್ತೀಚಿನ ದಿನಗಳಲ್ಲೇ ರಾಜಧಾನಿಯಲ್ಲಿ ವಿದ್ಯಾರ್ಥಿಗಳ ಈ ಬೃಹತ್ ಮೆರವಣಿಗೆ ನಾಗರೀಕರಿಗೆ ಕುತೂಹಲವನ್ನು ಕೆರಳಿಸಿತು.

ಮೆರವಣಿಗೆಯ ಕಡೆಯಲ್ಲಿ ಕಬ್ಬನ್ ಪಾರ್ಕ್‌ನಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಎಸ್.ಎಫ್.ಐ.ನ ರಾಜ್ಯ ಸಮಿತಿ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಹಿರಿಯಸ್ವಾತಂತ್ರ್ಯ ಹೋರಾಟಗಾರರೂ, ಸಿಪಿಐ(ಎಂ) ನಾಯಕರೂ ಆಗಿರುವ ಎನ್.ಕೆ. ಉಪಾಧ್ಯಾಯ ಯಾವ ಉದ್ದೇಶಗಳಿಗಾಗಿ ಅಂದಿನ ತಲೆಮಾರಿನ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದರೋ ಅದೇ ಉದ್ದೇಶಗಳಿಗಾಗಿ ವಿದ್ಯಾರ್ಥಿಗಳು ಈಗಲೂ ಬೀದಿಗಿಳಿಯಬೇಕಾದ ಪರಿಸ್ಥಿತಿಯಿದೆ ಎಂದು ವಿವರಿಸಿದರು. ಅದಕ್ಕಾಗಿ ಅವರು ವಿಷಾದಿಸಿದರು. ವಿದ್ಯಾರ್ಥಿ ಸಮುದಾಯ ಹೋರಾಟವನ್ನು ತೀಕ್ಷ್ಣಗೊಳಿಸಲು ಅವರು ಕರೆ ನೀಡಿದರು.

ಎಸ್.ಎಫ್.ಐ ಕೇಂದ್ರ ಸಮಿತಿ ಸಹ ಕಾರ್ಯದರ್ಶಿ ಬ್ರತೀನ್ ಸೇನ್‌ಗುಪ್ತಾ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಕೋಮುವಾದಿ-ಛಿದ್ರಕಾರಿ ಶಕ್ತಿಗಳನ್ನು ಸೋಲಿಸುವಲ್ಲಿ ಹಾಗೂ ದೇಶದ ಏಕೆಯತೆ-ಸಮಗ್ರತೆ ರಕ್ಷಿಸುವಲ್ಲಿ ವಿದ್ಯಾರ್ಥಿಗಳು ಮಹತ್ವದ ಪಾತ್ರ ವಹಿಸಬೇಕೆಂದು ಅವರು ಪ್ರತಿಪಾದಿಸಿದರು.

ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್, ಸಹಕಾರ್ಯದರ್ಶಿ ಎಲ್ ಮಂಜುನಾಥ, ಉಪಾಧ್ಯಕ್ಷ ಶಾಂತಾರಾಮ ನಾಯಕ್ ಅವರೂ ಮಾತನಾಡಿದರು. ಸಭೆಯ ಆರಂಭದಲ್ಲಿ ಕೆ. ಅಮಾರೆ ಮತ್ತುಮಹಾಂತೇಶ ಕ್ರಾಂತಿಕಾರಿ ಹಾಡುಗಳನ್ನು ಹಾಡಿದರು.

ಖಂಡನೆ

ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ತಮ್ಮ ಅಹವಾಲು ತಿಳಿಸಿ ಅವುಗಳ ಪರಿಹಾರಕ್ಕೆ ಒತ್ತಾಯಿಸಲು ರಾಜಧಾನಿಯವರೆಗೆ ಬಂದರೂ ರಾಜ್ಯಾದ್ಯಂತ ಸಂಗ್ರಹಿಸಿದ ಸಹಿಗಳ ಜತೆಗಿನ ಮನವಿ ಸ್ವೀಕರಿಸಲು ಆಗಮಿಸಿದ್ದ ರಾಜ್ಯದ ಶಿಕ್ಷಣ ಸಚಿವ ಕೆ.ಎಚ್.ರಂಗನಾಥರ ನಿಲುವನ್ನು ಪ್ರತಿಭಟಿಸಿದ ಸಭೆ, ಸಹಿಗಳನ್ನು ಸರಕಾರಕ್ಕೆ ತಕ್ಷಣವೇ ಒಪ್ಪಿಸದಿರಲು ಸಭೆ ನಿರ್ಧರಿಸಿತು.

ಸೆ.20ರೊಳಗೆ ಕೆಲವು ಕನಿಷ್ಠ ಬೇಡಿಕೆಗಳನ್ನು ಈಡೇರಿಸದಿದ್ದರೆ ಮರುದಿನದಿಂದ ಸಚಿವರನ್ನು ಘೇರಾವ್ ಮಾಡುವ ಹಾಗೂ ಕಪ್ಪು ಬಾವುಟಪ್ರದರ್ಶನದ ಚಳುವಳಿಯನ್ನು ನಡೆಸುವ ಕಾರ್ಯಕ್ರಮವನ್ನು ಸಭೆಯಲ್ಲಿ ಪ್ರಕಟಿಸಲಾಯಿತು.

ಬೆಂಗಳೂರು ಡೈರಿ ಅಧಿಕಾರಿಯ ಸರ್ವಾಧಿಕಾರಿ ವರ್ತನೆ ಖಂಡನೆ

ಬೆಂಗಳೂರು ಹಾಲು ಉತ್ಪಾದಕರ ಸಹಕಾರಿ ಸಂಘ ನಡೆಸುವ ಬೆಂಗಳೂರು ಡೈರಿಯ ಸಂಘಟಕ ನಿರ್ದೇಶಕ ಹನುಮಂತಪ್ಪನವರು ತಮ್ಮ ಕೈಕೆಳಗೆ ದುಡಿಯುತ್ತಿರುವ ಮಹಿಳೆಯರೊಂದಿಗೆ ಅತ್ಯಂತ ಕೆಟ್ಟ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ನಗರ ಸಂಚಾಲಕಿ ಕೆ.ಎಸ್ ವಿಮಲಾ ಹೇಳಿಕೆಯೊಂದರಲ್ಲಿ ತೀವ್ರವಾಗಿ ಖಂಡಿಸಿದ್ದಾರೆ.

ಈ ಅಧಿಕಾರಿ ಮಹಿಳಾ ನೌಕರರನ್ನು ಬೆದರಿಸಿ, ಮನಬಂದಂತೆ, ನಿಷ್ಕಾರಣವಾಗಿ ಅವರ ವರ್ಗಾವಣೆ ಮಾಡಿ ವಿಪರೀತ ಕಿರುಕುಳ ಕೊಡುತ್ತಿದ್ದಾರೆ. ಈ ಮಹಿಳಾ ನೌಕರರ ಸಂಬಂಧಿಗಳು ಕಾತುರದಿಂದ ಏನಾದರೂ ಪ್ರಶ್ನಿಸಿದರೆ ಅವರನ್ನೂ ಅವಾಚ್ಯ ಪದಗಳಲ್ಲಿ ಬೈಯುತ್ತಾರೆ. ಅಲ್ಲದೆ "ವಿಧೇಯ ಕಾರ್ಮಿಕರಿಂದ" ಅವರನ್ನು ಹೊಡೆಸುತ್ತಾರೆ ಎಂದೂ ವರದಿಯಾಗಿದೆ.

ದೇಶದಲ್ಲಿ ಮಹಿಳೆಯರ ಸ್ಥಿತಿಯನ್ನು ಸುಧಾರಿಸಲು ವಿವಿಧ ಯೋಜನೆಗಳು ಆರಂಭವಾಗುವುದರಲ್ಲಿರುವಾಗ ಪಾಳೆಯಗಾರೀ ಮನೋಭಾವದ ಇಂತಹ ಅಧಿಕಾರಿಗಳು ನಾಚಿಕೆಯಿಲ್ಲದೆ ವರ್ತನೆ ತಕ್ಷಣ ನಿಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಬೇಕು. ಮತ್ತೆ ಮಹಿಳೆಯರ ವಿರುದ್ಧ ಇಂತಹ ಆಕ್ರಮಣ ವರ್ತನೆ ನಡೆಯದಂತೆ ಸಂಬಂಧಪಟ್ಟ ಅಧಿಕಾರಿಗೆ ತಕ್ಕ ಶಿಕ್ಷೆ ವಿಧಿಸಬೇಕೆಂದು ಎ.ಐ.ಡಿ.ಡಬ್ಲ್ಯುಎ ಒತ್ತಾಯಿಸಿದೆ.

ಇದರ ವಿರುದ್ಧ ಮಹಿಳಾ ನೌಕರರು ಮುಖ್ಯ ಮಂತ್ರಿಗಳನ್ನು. ಪಶು ಸಂಗೋಪನೆ ಮಂತ್ರಿಗಳನ್ನು ಭೇಟಿಯಾಗಿ ತಿಳಿಸಿದ್ದರೂ ಪರಿಸ್ಥಿತಿಯಲ್ಲಿ ಬದಲಾವಣೆ ಕಂಡುಬಂದಿಲ್ಲ ಎಂದು ವಿಮಲಾರವರು ತಿಳಿಸಿದ್ದಾರೆ.

'ಕಿಡಿ' ಪತ್ರಿಕೆ ಪ್ರಾರಂಭ

ಎಸ್.ಎಫ್.ಐ ಉತ್ತರ ಕನ್ನಡ ಜಿಲ್ಲಾ ಸಮಿತಿಯಿಂದ 'ಕಿಡಿ' ಎಂಬ ಮಾಸ ಪತ್ರಿಕೆ ಆರಂಭಿಸಲು ಆಗಸ್ಟ್ 23 ರಂದು ಭಟ್ಕಳದಲ್ಲಿ ಸಭೆ ಸೇರಿದ್ದ ಸಮಿತಿಯ ಕಾರ್ಯದರ್ಶಿ ಮಂಡಳಿ ತೀರ್ಮಾನಿಸಿದೆ. ಸೆಪ್ಟೆಂಬರ್ ಮೊದಲ ವಾರಮೊದಲ ಸಂಚಿಕೆ ಹೊರಬಹುದೆಂದೂ ಈ ಪತ್ರಿಕೆಯಲ್ಲಿ ಜಿಲ್ಲಾ ವಿದ್ಯಾರ್ಥಿಗಳ ಚಟುವಟಿಕೆಗಳು, ವೈಜ್ಞಾನಿಕ ಲೇಖನ, ಕವನಗಳನ್ನು ಪ್ರಕಟಿಸಲಾಗುವುದೆಂದು ತಿಳಿಸಲಾಗಿದೆ.

ಔಷಧಿ ಖರೀದಿಯಲ್ಲಿ 31 ಲಕ್ಷ ರೂ. ಅವ್ಯವಹಾರದ ಬಗ್ಗೆ ತನಿಖೆ ನಡೆಸಲು ಜಿಲ್ಲಾ ಪರಿಷತ್ ನಿರ್ಣಯಿಸಿರುವುದನ್ನು ಸ್ವಾಗತಿಸಿರುವ ಸಭೆ ನಿಜವಾದ ತಪ್ಪಿತಸ್ಥರನ್ನು ಕಂಡುಹಿಡಿದು ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದೆ.

'ಕಾನೂನು ಸವಲತ್ತಿನ ಉಳಿವಿಗಾಗಿ ಬೀಡಿ ಕಾರ್ಮಿಕರು ಮುಂದಾಗಿ

ಹೋರಾಟದ ಮೂಲಕ ಪಡೆದಿರುವ ಕಾನೂನು ಸವಲತ್ತುಗಳನ್ನು ವಂಚಿಸಲು ಯತ್ನಿಸುತ್ತಿರುವ ಬೀಡಿ ಮಾಲಿಕರ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸಿ ಸವಲತ್ತುಗಳನ್ನು ಉಳಿಸಲು ಬೀಡಿ ಕಾರ್ಮಿಕರು ಮುಂದಾಗಬೇಕೆಂದು ಸಿಪಿಐ(ಎಂ) ಉಳ್ಳಾಲ ಕ್ಷೇತ್ರ ಸಮಿತಿ ಕಾರ್ಯದರ್ಶಿ ಶ್ರೀ ಜನಾರ್ಧನ ನಾಯಕ್ ಕರೆ ನೀಡಿದ್ದಾರೆ.

ಬೀಡಿ ಕಾರ್ಮಿಕರು ಎದುರಿಸುತ್ತಿರುವ ಪ್ರಸಕ್ತ ಬಿಕ್ಕಟ್ಟು ಮಾಲಿಕರೇ ಸೃಷ್ಟಿಸಿರುವಂತಹುದಾಗಿದ್ದು ಘನ ಸರಕಾರವು ಕಾರ್ಮಿಕರಿಗೆ ಕಾನೂನು ರಕ್ಷಣೆ ನೀಡುವಲ್ಲಿ ವಿಫಲವಾಗಿರುವುದಾಗಿ ಅವರು ಟೀಕಿಸಿದರು. ಇತ್ತೀಚೆಗೆ (19-8-90) ತೊಕ್ಕೋಟು, ಕೃಷ್ಣನಗರ ಏರಿಯಾದ ಬೀಡಿ ಕಾರ್ಮಿಕರ ಮಹಾ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ಬೀಡಿ ಕಾರ್ಮಿಕರಿಗೆ ಜ್ಯಾರಿಗೊಂಡಿರುವ ಕಾನೂನು ಸವಲತ್ತುಗಳ ಬಗ್ಗೆ ಕೋಟೆಕಾರು ಸರ್ಕಲ್ ಬೀಡಿ ಲೇಬರ್ ಯೂನಿಯನ್(ಸಿಐಟಿಯು) ಕಾರ್ಯದರ್ಶಿ ಸುಕುಮಾರ್ ಅವರು ವಿವರಣೆ ನೀಡಿದರು. ಸಭೆಯಲ್ಲಿ ಸಂಘದ ಸಹಕಾರ್ಯದರ್ಶಿ ಬಾಬು ಪಿಲಾರ್ ಹಾಗೂ ಟಿ. ವಿಠಲ ಶ್ರೀಯಾನ್ ಅವರು ಮಾತನಾಡಿದರು. ಶ್ರೀಮತಿ ಸುಕನ್ಯ ಅವರು ಮಂಡಿಸಿದ ವಾರ್ಷಿಕ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀಕೆ.ನಾರಾಯಣ ಶೆಟ್ಟಿಯವರು ವಹಿಸಿದ್ದರು. ಉಳ್ಳಾಲ ಮಂಡಲ ಪಂಚಾಯತ್ ಸದಸ್ಯೆ ಶ್ರೀಮತಿ ಜನಿಂತಾ ಲೋಬೋ , ದೇವಕಿ, ಸುಂದರ ಕುಂಪಲ, ಜಯಂತ ನಾಯಕ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀಮತಿ ಸರೋಜಿನಿ ಕಾರ್ಯದರ್ಶಿ ಹಾಗೂ ದೇವಕಿ ಸಹ ಕಾರ್ಯದರ್ಶಿಯಾಗಿರುವ 15 ಜನರ ಏರಿಯಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಮೂರ್ತೆದಾರರ ಚಳುವಳಿ

ಸೆಪ್ಟೆಂಬರ್ 8 ರಂದು ಪೇಟೆಯಲ್ಲಿ ಬಹಿರಂಗವಾಗಿ ಶೇಂದಿ ಮಾರಾಟ ಮಾಡಿ ಮೂರ್ತೆದಾರರು ಕಾನೂನುಭಂಗ ಚಳುವಳಿ ನಡೆಸಬೇಕೆಂದು ದ.ಕ. ಜಿಲ್ಲೆಯ ಕುಪ್ಪೆಪದವಿನ ಮೂರ್ತೆದಾರರ ಸಂಘ ನಿರ್ಧರಿಸಿದೆ. ಆಗಸ್ಟ್ 28ರಂದು ಸಂಘದ ಅಧ್ಯಕ್ಷ ದೂಮಣ್ಣ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸರ್ವಸದಸ್ಯರ ಸಭೆ ಈ ತೀರ್ಮಾನ ಕೈಗೊಂಡಿತು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಿ.ಪಿ.ಐ(ಎಂ) ಗುರುಪುರ ಪ್ರದೇಶ ಸಮಿತಿ ಕಾರ್ಯದರ್ಶಿ ಯು.ಬಿ.ಲೋಕಯ್ಯನವರು ಮೂರ್ತೆ ದಾರರನ್ನು ಬೀದಿ ಪಾಲಾಗಿಸುವ ಸರ್ಕಾರದ ಕಾನೂನನ್ನು ಮುರಿಯುವುದು ಅನಿವಾರ್ಯವಾಗಿದೆ ಎಂದರು.

ಶೇಂದಿ ಬಳಕೆದಾರರ ವೇದಿಕೆಯ ಅಧ್ಯಕ್ಷ ವಾಸುದೇವ ಆಚಾರಿಯವರು ಸ್ವಾಗತಿಸಿದರು. ಸಂಘದ ಸಂಚಾಲಕ ಹಿರಣ್ಯಕ್ಷ ಕೋಟ್ಯಾನ್‌ರವರು ಧನ್ಯವಾದಅರ್ಪಿಸಿದರು.

ನನ್ನ ಕವನ

-ಸಿದ್ದಲಿಂಗಯ್ಯ

ಬದುಕ ಪ್ರೀತಿಸುವ ಬಡವರ ಮಗಳು
ನಿರಾಭರಣೆ ಕವನ
ಜನಗಳು ತಿನ್ನುವ ಅನ್ನದ ಅಗುಳು
ಜೀವ ನನ್ನ ಕವನ
ಚಿಮ್ಮಿ ಹರಿಯುವ ರಕ್ತದ ಕೋಡಿ
ಕೆಂಪು ಕಡಲು ಕವನ
ಹೆಣ್ಣು ತುಳಿಕಿಸಿದ ಕಣ್ಣೀರಿನ ಹನಿ
ನನ್ನ ಪುಟ್ಟ ಕವನ

ಪುಟ್ಟ ವಿಧವೆ.

— ದ.ರಾ.ಬೇಂದ್ರೆ.

ಆಕೆಯಿದ್ದಳು ಕೂಸು; ಈತನಿನ್ನೂ ಹುಡುಗ
ಅವರ ತಾಯ್ತಂದೆಗಳ ಹಿಗ್ಗು ಎಷ್ಟು!
ಧರ್ಮದಾ ಹೆಸರಿನಲಿ ಅವರ ಕೈ ಕೂಡಿಸಲು
ಇವರಿಗೆನಿಸಿತು ಹರ್ಷ ಹಬ್ಬದಷ್ಟು.
ಕೊರಳ ಕರಿಮಣಿ, ಗಲ್ಲದರಿಷಿಣವು ಮುಗಬೊಟ್ಟು
ಆಮೇಲೆ ಉದ್ದುಕುಂಕುಮದ ಅಂದ!
ಆ ಪುಟ್ಟ ಮುತ್ತೈದೆ ಪುಟಪುಟನೆ ನೆಗದಾಡೆ
ಅಷ್ಟೆ ಕಂಡಿತು ಕಣ್ಣಿಗೆಷ್ಟೋ ಚಂದ.
ಆಕೆ ದೊಡ್ಡವಳಾಗಿ, ಈತ ಚಿಕ್ಕವನಿದ್ದು
ಶೋಭನವ ಮಾಡಿದ್ದು ಊರಿಗೂಟ,
ಪೆಚ್ಚು ಮೋರೆಯ ಅಳಿಯ-ದೇವರಿದಿರಲಿ ಜನಕೆ
ಕಡಿಮೆ ಸಿಹಿಯೆನಿಸಿತ್ತೆ ಪ್ರಸ್ಥದೂಟ?
ವರ್ಷವೆಂಬುದರೊಳಗೆ ಜೊಚ್ಚಲದ ಸಂಭ್ರಮವು
ದೈವದಾಟವು ಎಂದಿತಿಡಿಯ ಊರು.
ಮಗನು ಬಂದಿರೆ ಇಹಕೆ, ತಂದೆ ಏರಿದ ಪರಕೆ;
'ಕ್ಷೀರಸಾಗರವಾಯ್ತು ಉಪ್ಪುನೀರು.
ತಂದೆ ಹಿಡಿದಿಹ ಹಾದಿ ಒಂದೆರಡು ದಿನದಲ್ಲಿ
ಕೂಸು ಹಿಡಿದಿತು, ತಾಯಿಗುಳಿದಿತೇನು?
ಮೈಗೋರಿಯಲಿ ಮಡಗಿ ಜೀವ, ಜೀವನವಾಯ್ತು
ಜೇನುಹುಳ ಉಳಿದಂತೆ ಕಳೆದು ಜೇನು.
ಸತ್ತೆನೆಂದಳು ಕೂಸು-ತಾಯಿ ಅಯ್ಯೋ ಎಂದು
ಭೋರೆಂದು ಗೋಳಿಟ್ಟು ಹೊಟ್ಟೆ ಹೊಸೆದು
ಹುಚ್ಚೆದ್ದು ಹೌಹಾರಿ ಹುಯ್ಯಲಿಟ್ಟಳು ಏಕೆ
ತನ್ನ ತಾ ಶಪಿಸಿದಳು ಹಲ್ಲ ಮಸೆದು.
ಹತ್ತು ದಿವಸಕೆ ಹಾಳು ಮುತ್ತೈದೆತನ ಹೋಗಿ
ವೈಧವ್ಯ ಸಂಪತ್ತು ಪಡೆದಳಾಕೆ;
ಮನೆಯವರು ವೈದಿಕರು, ಊರು ಧರ್ಮದ ತವರು;
ಶಾಸ್ತ್ರವಿರೆ ಬೇರೆಯವರ ವಿಚಾರವೇಏಕೆ?
ತಲೆಭಾರ ಇಳಿದಿತ್ತು, ಅಂಗಾರ ಬೆಳೆದಿತ್ತು;
ಮೈಯನ್ನು ಮುಚ್ಚಿತ್ತು ಕೆಂಪು ಸೀರೆ;
ಅದರಯ್ಯೋ ಪಾಪ! ಆಕೆಯಿನ್ನು ಮಗುವು
ಸಿಂಗಾರವಿರದೆ! ಆಮಾತೆ ಬೇರೆ.
ಹಿಟ್ಟು ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೋ,
ಹೂಬತ್ತಿ ಹೊಸೆಯಲಿಕೆ ಮೈತಳೆದಳೋ,
ಎಂಬಂತೆ ಬಾಳ ಕಳೆದಳು ಬಾಲೆ, ಹೊಮಾಲೆ
ಮುಳ್ಳು ಕಂಬಿಯ ಮೇಲೆ ತಾನೆಳೆದಳೋ!
ನಿಟ್ಟುಸಿರ ಸರದಲ್ಲಿ ಕಂಬನಿಯ ಪೋಣಿಸುತ
ಉರುಲಿಕ್ಕಿದಂತೆ ಬಿಗಿದಿತ್ತು ಕೊರಲು.
ಕುರುಡು ಧರ್ಮಕ್ಕೆ ಸ್ಮಾರಕವು ನಿಂತಂತಾಕೆ
ಮೈಮರೆತು ನಿಂತಾಗ್ಗೆ ಗೂಗೆ ಹಾಡಿತ್ತು.
ಮುದ್ರೆಯೊತ್ತುವ ಕಣ್ಣು ಮೋರೆ ನೋಡಿಕ್ಕೊಮ್ಮೆ
ಜಾರ ಕೃಷ್ಣನ ಕಥೆಗೆ ಕೋಡು ಮೂಡಿತ್ತು!

"ಮಾನವೀಯ ವರ್ತನೆಗಾಗಿ ಮುಷ್ಕರ ಮಾಡುತ್ತಿದ್ದೇವೆ"

ನವಂಬರ್ 22,1990 ನ್ಯೂಯಾರ್ಕಿನ ಕೂಪರ್ ಯೂನಿಯನ್ ಸಭಾಂಗಣ . ಬಹುಪಾಲು ಮಹಿಳೆಯರೇ ಇದ್ದ ಅಮೆರಿಕಾದ ಎರಡು ಪ್ರಮುಖ ಉಡುಪು ಉತ್ಪಾದನಾ ಅಂಗಡಿಗಳ ಕಾರ್ಮಿಕರ ಸಭೆ ನಡೆಯುತ್ತಿತ್ತು. ಭಾಷಣಗಳ ಮೇಲೆ ಭಾಷಣಗಳ ಸುರಿಮಳೆಯಾಗುತ್ತಿತ್ತು ಆದರೆ ಕಾರ್ಯ ಚರಣೆಯ ಸುಳಿವು ಮಾತ್ರ ಇರಲಿಲ್ಲ. ಇದ್ದಕ್ಕಿದ್ದಂತೆ ಒಬ್ಬ ಯುವತಿ ವೇದಿಕೆಯತ್ತ ಭರದಿಂದ ಸಾಗಿದಳು. ಮಾತು ಆರಂಭಿಸಿಯೇ ಬಿಟ್ಟಳು -

"ನಾನೊಬ್ಬ ದುಡಿಯುವ ಹುಡುಗಿ ಅಸಹ್ಯ ಪರಿಸ್ಥಿತಿಗಳ ವಿರುದ್ಧ ಮುಷ್ಕರದಲ್ಲಿರುವವರಲ್ಲಿ ಒಬ್ಬಳು. ಗಾಳಿಯಲ್ಲಿ ಮಾತಾಡುವ ಭಾಷಣ ಕಾರರನ್ನು ಕೇಳಿ ನನಗೆ ಸಾಕಾಗಿದೆ. ನಾವಿಲ್ಲಿ ನೆರೆದಿರುವುದು ನಾವು ಮುಷ್ಕರ ಮಾಡಬೇಕೇ, ಬೇಡವೇ ಎಂದು ನಿರ್ಧರಿಸಲು.ನಾನೊಂದು ನಿರ್ಣಯ ಮಂಡಿಸುತ್ತೇನೆ - ಒಂದು ಸಾರ್ವತ್ರಿಕ ಮುಷ್ಕರ ಘೋಷಿಸಬೇಕು - ಈಗಲೇ" ಸಭಿಕರು ದೀರ್ಘಕರತಾಡನ ಮಾಡಿದರು ಅದುವರೆಗೆ ಒಣ ಭಾಷಣಗಳಿಂದ ಕೂಡಿದ್ದ ಸಭೆ ನಡೆಸುತ್ತಿದ್ದ ಸಭಾಧ್ಯಕ್ಷ ಕೂಡಾ ಉತ್ಸಾಹಿತನಾಗಿ "ಈ ಮುಷ್ಕರಕ್ಕೆ ವಿಶ್ವಾಸಘಾತ ಮಾಡಿದರೆ ನನ್ನ ಕೈ ಕೊಳೆತು ಹೋಗಲಿ" ಎಂದು ಪ್ರತಿಜ್ಞೆ ಮಾಡಿ ಎಂದ. ಇಡೀ ಸಭೆಯೇ ಎದ್ದು ನಿಂತಿತು.

ಆ ಹುಡುಗಿ ಹದಿಹರೆಯದವಳಾದರೂ ಈ ಹಿಂದೆ ಧೀರ ಮುಷ್ಕರ ನಡೆಸಿದ್ದ ಅನುಭವವಿದ್ದ ಕ್ಲಾರಾ ಲಿಮ್‌ಲಿಚ್.

ಪ್ರಮುಖ ಉಡುಪು ತಯಾರಿಕಾ ಸಂಸ್ಥೆಗಳಾದ ಲೈಸರ್‌ಸನ್ ಅಂಡ್ ಕಂಪೆನಿ, ಟ್ರಯಾಂಗಲ್ ವೇಯಿಸ್ಟ್ ಕಂಪೆನಿ ಮತ್ತು ಇನ್ನೂ ಹಲವಾರು ಅಂಗಡಿಗಳಲ್ಲಿ ಕೆಲಸದ ಪರಿಸ್ಥಿತಿ ಅತ್ಯಂತ ಅಸಹನೀಯವಾಗಿತ್ತು. ಮಹಿಳೆಯರೇ ಬಹುಪಾಲು ಇದ್ದ ಕಾರ್ಮಿಕರಲ್ಲಿ ಹೆಚ್ಚಿನವರು ಬೇರೆ ಬೇರೆ ದೇಶಗಳಲ್ಲಿ ಉದ್ಯೋಗ ಅರಸಿ ಈ ದೇಶಕ್ಕೆ ಬಂದವರು. ಎಂದೂ ಶುದ್ಧಗೊಳಿಸದ, ಬೆಳಕಿನ ಕಣವೂ ಬರಲಾರದ ಕೋಣೆಗಳಲ್ಲಿ ಕಿವಿ ಕಿವುಡಾಗಿಸುವ ಯಂತ್ರಗಳ ನಡುವೆ ಅತೀ ಕಮ್ಮಿಕೂಲಿಗೆ ಕೆಲಸ ಮಾಡಬೇಕಾಗಿತ್ತು. ತುಸು ತಪ್ಪಿದರೂ ದಂಡ.

ಅಮೆರಿಕನ್ ಮಹಿಳಾ ಕಾರ್ಮಿಕರ ಮೊದಲ ಮುಷ್ಕರ

ದಂಡಗಳ ಸರಮಾಲೆಯೇ.

1903 ಮತ್ತು 1917 ರ ನಡುವೆ ಮಹಿಳೆಯರೇ ಬಹು ಸಂಖ್ಯೆಯಲ್ಲಿದ್ದ ಕಾರ್ಮಿಕ ಸಂಘಗಳು ಹುಟ್ಟಿಕೊಳ್ಳಲಾರಂಭಿಸಿದ್ದವು. ಸಹಜವಾಗಿಯೇ ಉಡುಪು ತಯಾರಿಕಾ ವಲಯದಿಂದ ಇದು ಆರಂಭವಾಯಿತು. ಸಪ್ಟೆಂಬರ್ 1909 ರಲ್ಲಿ ಮೇಲೆ ಹೇಳಿದ ಎರಡು ದೊಡ್ಡ ಹಾಗೂ ಮುಂದೆ

ಇತಿಹಾಸದ ಪುಟಗಳಿಂದ

ಕುಪ್ರಸಿದ್ಧ ಕಂಪೆನಿಗಳಲ್ಲಿ ಮುಷ್ಕರ ಆರಂಭವಾಯಿತು. ಅದು ಮುಂದುವರಿದು ಎಲ್ಲಾ ಉಡುಪು ತಯಾರಿಕಾ ಕಾರ್ಮಿಕರ ಸಾರ್ವಜನಿಕ ಸಭೆ ಕರೆಯಲಾಗಿತ್ತು. ಸಮರ ಧೀರ ಕಾರ್ಮಿಕರ ಒತ್ತಡದಿಂದಾಗಿ ಕ್ಲಾರಾ ಲಿಮ್‌ಲಿಚ್‌ಳಿಂದಾಗಿ ಸಾರ್ವತ್ರಿಕ ಮುಷ್ಕರದ ನಿರ್ಣಯ ಕೈಗೊಂಡದ್ದು ಇದೇ ಸಭೆ.

ಇದು ಮಹಿಳಾ ಕಾರ್ಮಿಕರ ಮೊದಲ ಮಹತ್ವದ ಮುಷ್ಕರವಾಗಿತ್ತು. ಸುಮಾರು 2-3 ಸಾವಿರ ಕಾರ್ಮಿಕರಷ್ಟೇ ಪಾಲುಗೊಳ್ಳಬಹುದೆಂಬ ನಿರೀಕ್ಷೆಯಿದ್ದ ಈ ಮುಷ್ಕರದಲ್ಲಿ ನಿಜವಾಗಿ ಪಾಲುಗೊಂಡವರು 20-30 ಸಾವಿರ ಕಾರ್ಮಿಕರು! ಮೂವತ್ತು ಸಾವಿರ ಕಾರ್ಮಿಕರ ಬಂಡಾಯ ಎಂದೇ ಇದು ಹೆಸರಾಯಿತು. ನ್ಯೂಯಾರ್ಕಿನಲ್ಲಿ ಮುಷ್ಕರಕಾರರ ಸಭೆ ನಡೆಸಲೆಂದೇ 24 ಸಭಾಂಗಣಗಳು ಬೇಕಾದವು. ಯಿಡ್ಡಿಶ್, ಇಟಾಲಿಯನ್, ಇಂಗ್ಲೀಷ್ ಭಾಷೆಯ ಭಾಷಣಕಾರರ ಅಗತ್ಯ ಬಿತ್ತು. ಮಾಲಕರು ,ಆಳರಸರು ತೀವ್ರ ದಮನಹರಿಯಬಿಟ್ಟರು 16 ರಿಂದ 25 ವರ್ಷದ ಹುಡುಗಿಯರು ಅತ್ಯಂತ ನಡುಗುವ ಚಳಿಯ,

ಹಸಿವೆಯ ನಡುವೆಯೂ ಹದಿಮೂರು ವಾರ ಈ ದಮನಗಳನ್ನು ಎದುರಿಸಿದರು. ಪೊಲೀಸರ ಕಪ್ಪು ವಾಹನಗಳು ಅವರನ್ನು ಬೆಳಿದೊಯ್ದರೂ ಮನಬಂದಂತೆ ಲಾರಿ ಪ್ರಹಾರ ಮಾಡದರೂ ಪ್ರತಿದಿನ ಮಹಿಳಾ ಕಾರ್ಮಿಕರ ಪಿಕೆಟಿಂಗ್ ಮುಂದುವರೆಯಿತು. "ನಾವು ಮಾನವೀಯ ವರ್ತನೆಗಾಗಿ ಮುಷ್ಕರ ಹೂಡುತ್ತಿದ್ದೇವೆ". "ನ್ಯಾಯಕ್ಕಾಗಿ ಮುಷ್ಕರ" ಎಂಬ ಪ್ಲಕಾರ್ಡ್‌ಗಳನ್ನು ಹೊತ್ತು ಪಿಕೆಟಿಂಗ್ ನಡೆಸಿದರು.

ಇದು ಮೊದಲ 'ಸಾರ್ವತ್ರಿಕ ಮುಷ್ಕರ ಮಾತ್ರವಷ್ಟೇ ಅಲ್ಲ, ಮಹಿಳಾ ಕಾರ್ಮಿಕರ ಮೊದಲ ದೊಡ್ಡ ಮುಷ್ಕರವಾಗಿತ್ತು.

ಮಹಿಳೆಯರನ್ನು ಸಂಘಟಿಸಲು ಸಾಧ್ಯವಿಲ್ಲ, ದೀರ್ಘ, ಕಠಿಣ ಹೋರಾಟಗಳಲ್ಲಿ ಅವರು ಜತೆಗೆ ಬರಲಾರರು ಎಂಬ ವಾದಗಳನ್ನೆಲ್ಲಾ ಈ ಮುಷ್ಕರ ಮಣ್ಣು ಮುಕ್ಕಿಸಿತು. ನಂತರ ಚಿಕಾಗೋದ ಉಡುಪು ವ್ಯಾಪಾರರಂಗದಲ್ಲಿ ನಡೆದ ದೊಡ್ಡ ಐತಿಹಾಸಿಕ ಮುಷ್ಕರಕ್ಕೆ ಪ್ರೇರಣೆ ನೀಡಿದ ಹೋರಾಟ ಕೂಡಾ ಇದೇ.

ಇಂತಹ ಧೀರ ಹೋರಾಟದ ಬಗ್ಗೆ ಅಮೆರಿಕನ್ ನ್ಯಾಯಾಂಗದ ಅಭಿಪ್ರಾಯ ಬಂಡವಾಳಶಾಹಿ ಸಮಾಜದ ನಿಜರೂಪವನ್ನು ತೋರಿಸಿಕೊಟ್ಟಿತು.

"ನೀವು ದೇವರ ವಿರುದ್ಧ, ಪ್ರಕೃತಿಯ ವಿರುದ್ಧ ಮುಷ್ಕರ ನಡೆಸುತ್ತಿದ್ದೀರಿ. ಏಕೆಂದರೆ ದೇವರ, ಪ್ರಕೃತಿಯ ಪ್ರಾಥಮಿಕ ನಿಯಮವೆಂದರೆ ಗಂಡಸು ಬೆವರು ಸುರಿದು ರೊಟ್ಟಿ ಸಂಪಾದಿಸಬೇಕು."

ವಿನೋದ ಪ್ರವೃತ್ತಿಯ ಜಾರ್ಜ್ ಬರ್ನಾಡ್‌ಶಾ ಇಂಗ್ಲೆಂಡಿನಿಂದ ಇದಕ್ಕೆ ಕೇಬಲ್ ಸಂದೇಶ ಕಳಿಸಿದರು - " ಆಹಾ: ಎಷ್ಟು ಆನಂದಮಯ! ಮಧ್ಯಕಾಲೀನ ಅಮೆರಿಕಾ ಸದಾ ಸರ್ವಶಕ್ತನ ವೈಯಕ್ತಿಕ ಕೃಪೆ ಪಡೆದಿದೆ!"

ಇದು ನಿಮಗೆ ಗೊತ್ತೆ?

ಅಮೆರಿಕಾದ ಸ್ವಾತಂತ್ರ್ಯ ಯುದ್ಧದಲ್ಲಿ ನೆರವಾದ, ಗುಲಾಮತನದ ನಿವಾರಣೆಗೆ ಹೆಗಲು ಕೊಟ್ಟು ಹೋರಾಡಿದ ಅಮೆರಿಕನ್ ಮಹಿಳೆಯರು ಮತದಾನದ ಹಕ್ಕು ಪಡೆದದ್ದು. 1920 ರಲ್ಲಷ್ಟೇ 13 ದಶಕಗಳ ನಂತರ. ಅದೂ ದೀರ್ಘ ಕಠಿಣ ಹೋರಾಟದ ಫಲವಾಗಿ.

ಬೆಲೆ ಏರಿಕೆಯ ವಿರುದ್ಧ ಕಾರ್ಮಿಕರಿಂದ ಪ್ರತಿಭಟನೆ

ಸಿ.ಐ.ಟಿ.ಯುನ ಅಖಿಲ ಭಾರತ ಜನರಲ್ ಕೌನ್ಸಿಲಿನ ಕರೆಯ ಪ್ರಕಾರ ರಾಜ್ಯದ ಹಲವೆಡೆ ಸಿ.ಐ.ಟಿ.ಯು ನೇತೃತ್ವದ ಕಾರ್ಮಿಕರು ತಾ : 23-8-90 ರಂದು ಬೆಲೆ ಏರಿಕೆಯ ವಿರುದ್ಧ ಅಖಿಲ ಭಾರತ ಪ್ರತಿಭಟನಾ ದಿನವನ್ನು ಆಚರಿಸಿದರು. ಮಂಗಳೂರಿನಲ್ಲಿ ಪುರಭವನದ ಬಳಿಯಿಂದ ಮೆರವಣಿಗೆಯಲ್ಲಿ ಹೊರಟ ಕಾರ್ಮಿಕರು ಬೆಲೆ ಏರಿಕೆಗೆ ಕಾರಣವಾದ ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ಧೋರಣೆಗಳ ವಿರುದ್ಧ ಜಿಲ್ಲಾಧಿಕಾರಿಗಳ ಕಚೇರಿ ಎದುರು ಮತಪ್ರದರ್ಶನ ನಡೆಸಿ ಘೋಷಣೆಗಳನ್ನು ಕೂಗಿದರು.

ಸಿ.ಐ.ಟಿ.ಯು ಜಿಲ್ಲಾ ಸಮಿತಿಯ ಅಧ್ಯಕ್ಷ ಕೆ.ಮೂಸಬ್ಬ, ಪ್ರಧಾನ ಕಾರ್ಯದರ್ಶಿ ಬಿ.ಮಾಧವ, ಸಿ.ಪಿ.ಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್. ಶ್ರೀಯಾನ್, ಸಿ.ಐ.ಟಿ.ಯು ಜಿಲ್ಲಾ ಉಪಾಧ್ಯಕ್ಷೆ ಕೆ.ಪದ್ಮಾವತಿ, ಹಾಗೂ ಕಾರ್ಯದರ್ಶಿಗಳಾದ ಕಮಲಾಕ್ಷ ಬಂಗೇರ, ಮತ್ತು ಪಿ.ಉಮೇಶ್ ಭಂಡಾರಿಯವರನ್ನು ಒಳಗೊಂಡ ನಿಯೋಗವು ಜಿಲ್ಲಾಧಿಕಾರಿಯವರ ಅನುಪಸ್ಥಿತಿಯಲ್ಲಿ ಅವರ ಆಪ್ತ ಸಹಾಯಕರನ್ನು ಭೇಟಿಯಾಗಿ ಮನವಿ ಅರ್ಪಿಸಿತು.

ಕೇಂದ್ರ ಮತ್ತು ರಾಜ್ಯ ಸರಕಾರದ ಮುಂಗಡ ಪತ್ರಗಳು ಹಾಗೂ ರೈಲ್ವೇ ಮುಂಗಡ ಪತ್ರದಲ್ಲಿ ಜನರ ಮೇಲೆ ಹೇರಲಾದ ಹೊರೆಗಳಿಂದಾಗಿ ಬೆಲೆ ಏರಿಕೆ ತೀವ್ರವಾಗಿದೆ ಎಂದು ಎತ್ತಿ ತೋರಿಸಿದ ಮನವಿಯು, ಪಡಿತರ ಅಕ್ಕಿಯ ಬೆಲೆ ಏರಿಕೆ ಮತ್ತು ಸರಕಾರಿ ಬಸ್ ಪ್ರಯಾಣದರ 'ಏರಿಕೆಯ ಮೂಲಕ ಕರ್ನಾಟಕ ಸರ್ಕಾರವು ಜನ ಸಾಮಾನ್ಯರ ಸಂಕಷ್ಟಗಳನ್ನು ಉಲ್ಬಣಗೊಳಿಸಿದೆ ಎಂದು ಹೇಳಿದೆ. ಬೆಲೆ ಏರಿಕೆಯಿಂದ ಉದ್ಭವಿಸಿದ ಗಂಭೀರ ಸಂಕಷ್ಟದಿಂದ ಜನತೆಯನ್ನು ರಕ್ಷಿಸಲು ಸರಕಾರವು ಅಕ್ಕಿ, ಚಾ ಪುಡಿ, ಸಕ್ಕರೆ, ಧಾನ್ಯಗಳು, ಅಡುಗೆ ಎಣ್ಣೆ ರವೆ, ಜೀನಸುಗಳು, ಸಾಮಾನು, ಸೀಮೆಎಣ್ಣೆ ಇತ್ಯಾದಿ ನಿತ್ಯೋಪಯೋಗಿ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ, ಕಡಿಮೆ ಬೆಲೆಯಲ್ಲಿ , ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಹಳ್ಳಿ ಪಟ್ಟಣವೆಂಬ ಭೇದವಿಲ್ಲದೆ ವಿತರಣೆ ಮಾಡಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಪ್ರದರ್ಶನಕಾರರನ್ನು ಉದ್ದೇಶಿಸಿ ಸಿ.ಐ.ಟಿ.ಯು ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ.ಮಾಧವ, ಅವರು ಮಾತನಾಡುತ್ತಾ, ಬೆಲೆ ಏರಿಕೆಯನ್ನು ತಡೆಗಟ್ಟಲು ಸರಕಾರವು ವಿಫಲವಾದರೆ ಮುಂದಿನ ದಿನಗಳಲ್ಲಿ ತೀವ್ರರೂಪದ ಹೋರಾಟಗಳಿಗೆ ಸಿದ್ಧರಾಗಬೇಕೆಂದು ಕಾರ್ಮಿಕರಿಗೆ ಕರೆ ನೀಡಿದರು.

ಕುಂದಾಪುರ

ಕುಂದಾಪುರದಲ್ಲಿ ಸಿ.ಐ.ಟಿ.ಯು.ವಿಗೆ ಸೇರಿದ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆದು ತಾಲೂಕು ತಹಸೀಲ್ದಾರ್ ರವರ ಮೂಲಕ ರಾಜ್ಯದ ಮುಖ್ಯ ಮಂತ್ರಿ ಹಾಗೂ ಪ್ರಧಾನ ಮಂತ್ರಿಯವರಿಗೆ ಮನವಿ ಅರ್ಪಿಸಲಾಯಿತು.

ಕೇಂದ್ರ ಸರಕಾರವು ಈ ವರ್ಷ ಹೊಸ ತೆರಿಗೆ ಹಾಗೂ ರೈಲ್ವೆ ಪ್ರಯಾಣ, ಸರಕು ಸಾಗಾಟ, ಅಂಚೆ ದರ ಏರಿಕೆಯ ಮೂಲಕ 3 ಸಾವಿರ ಕೋಟಿ ರೂಪಾಯಿಗಳ ಹೆಚ್ಚುವರಿ ಹೊರೆಯನ್ನು ದೇಶದ ಜನತೆಯ ಮೇಲೆ ಹೇರಿ, 7,206 ಕೋಟಿ ರೂಪಾಯಿಗಳಷ್ಟು ಅಭೂತಪೂರ್ವ ಕೊರತೆಯನ್ನು ಸೃಷ್ಟಿಸಿರುವುದರಿಂದ ಎಲ್ಲಾ ಅವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿವೆ ಅಂತ ಮನವಿಯಲ್ಲಿ ನಮೂದಿಸಲಾಗಿದ್ದು, ಬೆಲೆ ಏರಿಕೆಯನ್ನು ತಡೆಗಟ್ಟಿ, ಜೀವನಾವಶ್ಯಕ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಸಾರ್ವಜನಿಕ ವಿತರಣೆಯನ್ನು ವ್ಯವಸ್ಥಿತವಾಗಿ ಮಾಡಲು ಒತ್ತಾಯಿಸಲಾಗಿದೆ.

ರಾಜ್ಯ ಸರಕಾರ ಕೂಡಾ ಪಡಿತರ ಅಕ್ಕಿಯ ಬೆಲೆ ಹಾಗೂ ಸರಕಾರಿ ಬಸ್ ಪ್ರಯಾಣ ದರಗಳನ್ನು ಏರಿಸಿ ಜನಸಾಮಾನ್ಯರ ಹೊಟ್ಟೆಗೆ ನೇರವಾಗಿ ಹೊಡೆದಿದೆ ಎಂದು ಅಂತ ಸಿ.ಐ.ಟಿಯು ಮುಖಂಡರು ಹೇಳಿರುತ್ತಾರೆ.

ಸಿ.ಐ.ಟಿ.ಯು ಮುಖಂಡರಾದ ಅಬ್ರಹಾಂ ಕರ್ಕಡ, ಕೆ.ಶಂಕರ, ಸಿ.ನಾರಾಯಣ, ವಿ.ನರಸಿಂಹ, ಹೆಚ್.ನರಸಿಂಹ ಮತ್ತು ಯು.ದಾಸ ಭಂಡಾರಿಯವರನ್ನೊಳಗೊಂಡ ಸಿ.ಐ.ಟಿ.ಯು ಕಾರ್ಯಕರ್ತರ ತಂಡ, ತಾಲೂಕು ತಹಸೀಲ್ದಾರವರನ್ನು ಭೇಟಿ ಮಾಡಿ ಮನವಿ ಅರ್ಪಿಸಿರುತ್ತಾರೆ.

ಬೆಂಗಳೂರು

ಸಂಜೆ 5-30ಕ್ಕೆ ಸಿಐಟಿಯುಗೆ ಸೇರಿದ ಕಾರ್ಮಿಕರು ಚಿಕ್ಕ ಲಾಲ್‌ಬಾಗ್‌ನಿಂದ ಮೈಸೂರು ಬ್ಯಾಂಕ್ ವೃತ್ತದವರೆಗೆ ಬೆಲೆಯೇರಿಕೆ ವಿರುದ್ಧ ಘೋಷಣೆ ಕೂಗುತ್ತಾ ಪ್ರತಿಭಟನಾ ಮೆರವಣಿಗೆ ನಡೆಸಿದರು. ಮೆರವಣಿಗೆಯ ಕೊನೆಯಲ್ಲಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕಾರ್ಮಿಕರನ್ನುದ್ದೇಶಿಸಿ ಸಿಐಟಿಯು ನೇತಾರರಾದ ಎನ್.ಕೆ.ಉಪಾಧ್ಯಾಯ, ಕೆ.ಎಸ್.ಸುಬ್ರಹ್ಮಣ್ಯ ಹಾಗೂ ಆರ್. ಶ್ರೀನಿವಾಸ್ ಮಾತನಾಡುತ್ತಾ ಕೇಂದ್ರ ಸರಕಾರದ ಆರ್ಥಿಕ ನೀತಿಯನ್ನು ಉರಿಯುತ್ತಿರುವ ಬೆಂಕಿಗೆ ತುಪ್ಪ ಹೊಯ್ದಂತೆ ಎಂದು ಟೀಕಿಸಿದರು. ಕೇಂದ್ರ ಸರಕಾರವು ಈ ಜನ ವಿರೋಧಿ ಆರ್ಥಿಕ ನೀತಿಯನ್ನು ಕೈ ಬಿಡದಿದ್ದರೆ ಕಾರ್ಮಿಕರು ತೀವ್ರ ಚಳುವಳಿ ನಡೆಸುವರೆಂದು ಎಚ್ಚರಿಸಿದರು.

ಗೋಗಟೆ ಟೆಕ್ಸ್‌ಟೈಲ್ ಕಾರ್ಮಿಕರ ಯಶಸ್ವೀ ಮುಷ್ಕರ

ಸೆಪ್ಟೆಂಬರ್ 1 ರಂದು ಬೆಳಗಾವಿಯ ಗೋಗಟೆ ಟೆಕ್ಸ್‌ಟೈಲ್‌ನ ಕಾರ್ಮಿಕರ ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿದರು. ಸಿ.ಐ.ಟಿ.ಯು.ಗೆ ಸೇರಿದ ಗೋಗಟೆ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ನೀಡಿದ ಈ ಹೋರಾಟದ ಕರೆಗೆ 95%ಕ್ಕಿಂತಲೂ ಹೆಚ್ಚು ಕಾರ್ಮಿಕರು ಓಗೊಟ್ಟು ಮುಷ್ಕರ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಕೆಲಸದಿಂದ ವಜಾ ಮಾಡಿದ ಕಾರ್ಮಿಕ ಮುಖಂಡರನ್ನು ಮತ್ತೆ ತೆಗೆದುಕೊಳ್ಳಬೇಕು, ಗುಪ್ತಮತದಾನದ ಮೂಲಕ ಸಂಘಕ್ಕೆ ಮಾನ್ಯತೆ ಹಾಗೂ ಬೋನಸ್ ಮತ್ತು ಕೆಲಸದ ಹೊರೆ ಬಗ್ಗೆ ಮಾತುಕತೆಯಿಂದ ನಿರ್ಧಾರ. ಇದು ಕಾರ್ಮಿಕರ ಮೂರು ಪ್ರಮುಖ ಬೇಡಿಕೆಗಳು ಎಂದು ಮುಷ್ಕರದ ದಿನ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷರಾದ ವಿ.ಜೆ.ಕೆ.ನಾಯರ್ ತಿಳಿಸಿದರು.

ಇಲ್ಲಿ ಎ.ಐ.ಟಿ.ಯು.ಸಿ. ನಾಯಕತ್ವದ ಸಂಘಟನೆಯೊಂದು ಸಹಿಹಾಕಿದ ವೇತನ ಒಪ್ಪಂದದ ಪ್ರಕಾರ ಕಾರ್ಮಿಕರ ಕೆಲಸದ ಹೊರೆ ವಿಪರೀತ ಹೆಚ್ಚಿದ್ದು ಅದರ ಪ್ರಕಾರ ಕೆಲಸವಾಗಿಲ್ಲವೆಂದು ಆಡಳಿತವರ್ಗ ವೇತನ ಕಡಿತಆರಂಭಿಸಿತ್ತು. ಇದನ್ನು ಕಾರ್ಮಿಕರು ಪ್ರತಿಭಟಿಸಿದರು. ಸಿ.ಐ.ಟಿ.ಯು. ನೇತೃತ್ವದಲ್ಲಿ ಬೇರೆ ಸಂಘಟನೆಯನ್ನು ಕಟ್ಟಿ ಹೋರಾಟ ಆರಂಭಿಸಿದರು. ಇದನ್ನು ಸಹಿಸಲಾರದ ಆಡಳಿತ ಸಂಘದ ಎಲ್ಲಾ ಪದಾಧಿಕಾರಿಗಳನ್ನು ಹಾಗೂ ಸಕ್ರಿಯ ಕಾರ್ಯಕರ್ತರನ್ನು ಕೆಲಸದಿಂದ ವಜಾ ಮಾಡಿದ್ದಲ್ಲದೆ ಸಂಘದ ಬೇಡಿಕೆಯನ್ನು ತಿರಸ್ಕರಿಸಿ ಕನಿಷ್ಠ ಬೋನಸ್ (8.35%) ನಷ್ಟೇ ಘೋಷಿಸಿದೆ.

ಕಾರ್ಮಿಕರು ಇದನ್ನು ತೀವ್ರವಾಗಿ ಪ್ರತಿಭಟಿಸಿದರು. ಆಗಸ್ಟ್ 17 ರಂದು ಮತಪ್ರದರ್ಶನ ನಡೆಸಿದರು. ಸೆಪ್ಟೆಂಬರ್ 1ರ ಮುಷ್ಕರ ಈ ಹೋರಾಟದ ಭಾಗವಾಗಿತ್ತು. ಕಾರ್ಯಾಚರಣೆಯ ಮುಂದಿನ ಹಂತವಾಗಿ ಸೆಪ್ಟೆಂಬರ್ 2ರಿಂದ 9 ರವರೆಗೆ ಸರದಿ. ಅನ್ನ ಸತ್ಯಾಗ್ರಹ ಆರಂಭವಾಗಿದೆ. ಮುಂದೆ ಸೆಪ್ಟೆಂಬರ್ 10 ರಿಂದ 16 ರವರೆಗೆ 72ಗಂಟೆಗಳ ಉಪವಾಸ ಮುಷ್ಕರ, ಅದಕ್ಕೂ ಜಗ್ಗದಿದ್ದರೆ "ಆಮರಣ ಉಪವಾಸ" ನಡೆಸಲು ನಿರ್ಧರಿಸಲಾಗಿದೆ. "ಆಮರಣ ಉಪವಾಸ" ಕೂಡವರನ್ನು ಒತ್ತಾಯದಿಂದ ... 1 ಆನೇ ದಿನದಿಂದ ... ಅವಧಿಯ ಮುಷ್ಕರ ... ನಿರ್ಧರಿಸಲಾಗಿದೆ.

ಸಾಂಕೇತಿಕ ಮುಷ್ಕರದಂದು ಸಭೆಯನ್ನುದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು. ಕಾರ್ಯದರ್ಶಿ ಎಂ.ಬಿ. ಕಲ್ಯಾಣಿಯವರು ಐಕ್ಯತೆಯನ್ನು ಕಾಪಾಡಿಕೊಂಡು ಹೋರಾಟ ಯಶಸ್ವಿಯಾಗಿ ಮುಂದುವರಿಸಿ, ಆಡಳಿತ ವರ್ಗಕ್ಕೆ ತಕ್ಕ ಪಾಠ ಕಲಿಸಬೇಕೆಂದು ಕೇಳಿಕೊಂಡರು. ಸಂಘದ ಉಪಾಧ್ಯಕ್ಷರಾದ ಅಬ್ದುಲ್‌ರಹೂಫ್ ಭಿಸ್ತಿ ವಂದನಾರ್ಪಣೆ ಮಾಡಿದರು.

ಬಳ್ಳಾರಿ ಸ್ಟೀಲ್ ಅಲಾಯ್ಸ್ ಕಾರ್ಮಿಕರ ಹೋರಾಟಕ್ಕೆ ಜಯ

ಬಳ್ಳಾರಿ ಸ್ಟೀಲ್ಸ್ ಅಂಡ್ ಅಲಾಯ್ಸ್ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ 30 ಜನ ಕಾರ್ಮಿಕರು ತಮಗೆ 3 ತಿಂಗಳ ವೇತನ ನೀಡಿಲ್ಲವೆಂದು ಕೂಡಲೇ ತಮ್ಮನ್ನು ಕೆಲಸಕ್ಕೆ ನೇಮಿಸಿ ಕೊಳ್ಳಬೇಕೆಂದು ಒತ್ತಾಯಿಸಿ 26-7-90 ರಿಂದ ಕಾರ್ಖಾನೆ ಎದುರು ಧರಣಿ ಸತ್ಯಾಗ್ರಹ ನಡೆಸಿದ್ದರು. ಕಾರ್ಮಿಕ ಅಧಿಕಾರಿಗಳ ಮಧ್ಯ ಪ್ರವೇಶದಿಂದ 8-8-90 ರಂದು ಕಾರ್ಮಿಕರ ಮುಖಂಡರಾದ CITU ಜಿಲ್ಲಾ ಸಂಚಾಲಕರಾದ ಕಾಂ|| ಎಸ್. ಪ್ರಸನ್ನಕುಮಾರ್ ಹೋರಾಟ ನಿರತ ಕಾರ್ಮಿಕರ ಪರವಾಗಿ ಹಾಗೂ ಮಾಲೀಕರ ಪರವಾಗಿ ಕೊಂಡಯ್ಯನವರು ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ಕಾರ್ಮಿಕರಿಗೆ ಜಯ ದೊರೆತಿದೆ. ಈ ಹಿಂದೆ 1-7-90 ರಂದು ನಡೆದ ಮಾತುಕತೆಯಲ್ಲಿ ಕಾರ್ಮಿಕರಿಗೂ ತಮ್ಮ ಕಾರ್ಖಾನೆಗೂ ಯಾವುದೇ ಸಂಬಂಧ ಇಲ್ಲವೆಂದು ಅವರು ಕಾರ್ಖಾನೆಯ ಕೆಲಸಗಾರರಲ್ಲವೆಂದೇ ಲಿಖಿತ ಹೇಳಿಕೆ ನೀಡಿದ್ದ ಮಾಲೀಕರು ಕಾರ್ಮಿಕರ ದಿಟ್ಟ ಹೋರಾಟದ ಮುಂದುವರಿಕೆಗೆ ಹಾಗೂ ಕಾರ್ಮಿಕರ ಹೋರಾಟ ಬೆಂಬಲಿಸಿದ ವಿವಿಧ ಸಂಘ ಸಂಸ್ಥೆಗಳ ಒತ್ತಡಕ್ಕೆ ಮಣಿದುದೇ ಈ ಯಶಸ್ಸಿನ ಫಲವೆಂದು ತಿಳಿದು ಬಂದಿದೆ. ಕಾರ್ಖಾನೆ ಮಾಲೀಕರ ಪರವಾಗಿ ಸಂಘಟನೆಯನ್ನು ಮುರಿಯಲು ಅಧಿಕಾರಿಗಳು ಶಾಮೀಲಾಗಿ ನಮ್ಮ ಕಾರ್ಮಿಕರೇ ಅಲ್ಲವೆಂದು ದಾಖಲೆ ನೀಡಲು ಮಾಲೀಕರಿಗೆ ತಿಳಿಸಿದುದನ್ನು ಈ ಮಧ್ಯೆ ಖಂಡಿಸಿ ಪತ್ರಿಕಾ ಹೇಳಿಕೆ ನೀಡಲಾಗಿತ್ತು. ನಂತರ ಬೆಂಗಳೂರಿನಿಂದ ಕಾರ್ಮಿಕರನ್ನು ಕರೆತಂದು ಕಾರ್ಖಾನೆ ನಡೆಸಲು ಯೋಜಿಸಲಾಗಿತ್ತು. ಕಾರ್ಮಿಕರು ಕೂಡಲೇ ಜಿಲ್ಲಾಧಿಕಾರಿಗಳು, ಪೊಲೀಸ್ ಅಧಿಕಾರಿಗಳ ಗಮನಕ್ಕೆ ತಂದು ತಡೆಹಿಡಿಯಲಾದ ನಂತರ 8-8-90 ರಂದು 2 ತಿಂಗಳ ವೇತನ ಓ.ಟಿ.ಗಳನ್ನು ನೀಡಲು ಮಾಲೀಕರು ಒಪ್ಪಿದರಲ್ಲದೇ ಕೂಡಲೇ ಕೆಲಸಕ್ಕೆ ಸೇರಿಸಿಕೊಳ್ಳುವ ವ್ಯವಸ್ಥೆಮಾಡುವುದಾಗಿ ಒಪ್ಪಿಕೊಂಡಿದ್ದಾರೆಂದು ಎಸ್. ಪ್ರಸನ್ನಕುಮಾರ್ ಪತ್ರಿಕೆಗೆ ತಿಳಿಸಿರುತ್ತಾರೆ.

ವೇತನ ಪಡೆದ ಎಲ್ಲಾ ಕಾರ್ಮಿಕರು ತಮ್ಮ ವೇತನದ ಶೇ 2 1/2ಯಷ್ಟು CITU ಸಂಘಟನೆಗೆ ಹಾಗೂ ಶೇ 21/2ರಷ್ಟು ಪಕ್ಷದ ನಿಧಿಗೆ ಸಹಾಯ ನೀಡಿರುತ್ತಾರೆ. ಒಂದು ಸಾವಿರದ ಎರಡು ನೂರು ಹದಿನೈದು ರೂಪಾಯಿಗಳು ಪಕ್ಷದ ನಿಧಿಯನ್ನು ಸ್ವೀಕರಿಸಿದ ಸ್ಥಳೀಯ ಸಮಿತಿ ಕಾರ್ಯದರ್ಶಿ ಕಾಂ|| ಯು. ಬಸವರಾಜ್ ಅಭಿನಂದಿಸಿ ಹೋರಾಟವನ್ನು ಮುಂದುವರಿಸಿ CITU ಬಲಿಷ್ಠವಾಗಿ ಬೆಳೆಸುವಂತೆ ಕಾರ್ಮಿಕರಿಗೆ ಕರೆ ನೀಡಿದ್ದಾರೆ.

ಪಕ್ಷದ ನಿಧಿಯನ್ನು ಸ್ವೀಕರಿಸಿದ ಕಾರ್ಯದರ್ಶಿ ಕಾಂ|| ಯು. ಬಸವರಾಜ್ ... ಸಾವಿರ ರೂಪಾಯಿಗಳನ್ನು ರಾಜ್ಯದ ಪಕ್ಷದ ಫಂಡ್‌ಗೆ ಜಿಲ್ಲಾ ಸಮಿತಿ ಕಾರ್ಯದರ್ಶಿಯಾದ ಕಾಂ|| ಎಸ್. ಪ್ರಸನ್ನಕುಮಾರ್ ಅವರಿಗೆ ನೀಡಿದರು.

ಪಕ್ಷದ ನಿಧಿಯನ್ನು ನೀಡಿದ ಕಾರ್ಮಿಕರು

1.	ಬಷೀರ್	90-00
2.	ದಸ್ತಗಿರಿ	61-00
3.	ವೆಂಕಟೇಶ್	92-00
4.	ಹನುಮಂತಪ್ಪ	92-00
5.	ಕೆ. ನಾಗರಾಜ್	92-00
6.	ರಾಮಮೂರ್ತಿ	94-00
7.	ಪಿ.ವಿರ್‍ರಪ್ಪ	94-00
8.	ಚಂದ್ರಶೇಖರ್	100-00
9.	ರಾಮ್‌ಜಾನಿ	25-00
10.	ಮಲ್ಲಪ್ಪ	54-00
11.	ರಮೇಶ್	91-00
12.	ಎರ್‍ರಿಸ್ವಾಮಿ	65-00
13.	ಬಸಣ್ಣ	60-00
[illegible]	[illegible]	65-00
15.	ಗಂಗಣ್ಣ	60-00
16.	ಭವಾನಿಶಂಕರ್	65-00

ನಿಮಗಿದು ಗೊತ್ತೇ?

ಹೆಚ್ಚಿನ ಪ್ರಜಾಪ್ರಭುತ್ವ ದೇಶಗಳಲ್ಲಿ ಮಹಿಳೆಯರ ಸಮಾನತೆಗೆ ಸಂವಿಧಾನದಲ್ಲೇ ಭರವಸೆ ದೊರೆತಿದೆ. ಆದರೆ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವೆಂದು ಹೇಳಿಕೊಳ್ಳುವ ಅಮೆರಿಕಾದ ಸಂವಿಧಾನ ಈ ಭರವಸೆ ನೀಡಿಲ್ಲ. ಸಮಾನಹಕ್ಕಿನ ತಿದ್ದುಪಡಿಯನ್ನು ಸತತವಾಗಿ ವಿಫಲಗೊಳಿಸಲಾಗಿದೆ.

ಶ್ರೀಮಂತ ಅಮೆರಿಕಾದಲ್ಲಿ ಬಡತನದ ರೇಖೆಯ ಕೆಳಗಿರುವವರ ಸಂಖ್ಯೆ 3.2 ಕೋಟಿ. ವಯಸ್ಕ ಬಡವರಲ್ಲಿ ಪ್ರತಿ ಮೂವರಲ್ಲಿ ಇಬ್ಬರು ಮಹಿಳೆಯರು. ಮಹಿಳೆಯರು ಕುಟುಂಬದ ಮುಖ್ಯಸ್ಥರಾಗಿರುವ ಮಕ್ಕಳಿರುವ ಕುಟುಂಬಗಳಲ್ಲಿ 39% ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ.

ವಿಶ್ವದಲ್ಲೆಲ್ಲಾ ಬುದ್ಧಿ ಮಾರುವ ಇಲ್ಲಿಯ ಪತ್ರಿಕೆಗಳ ಮಹಿಳಾ ಪತ್ರಿಕೋದ್ಯಮಿಗಳಿಗೆ ಹೆಂಗೆ ಸೌಲಭ್ಯಗಳಿಲ್ಲ ಎಂದು 'ಕೊಲಂಬಿಯಾ ಜರ್ನಲಿಸಂ ರಿವ್ಯೂ' ಪತ್ರಿಕೆ ಬರೆದಿದೆ. ಗರ್ಭಿಣಿಯಾಗಿದ್ದಾಗಲೂ ಅವರನ್ನು ಕಠಿಣ ಶ್ರಮದ ಕೆಲಸಗಳಿಗೆ ಕಳಿಸಲಾಗುತ್ತದೆ. ತಾಯ್ತನ ಎಂದರೆ ಅಮೆರಿಕನ್ ಮಹಿಳಾ ಪತ್ರಿಕೋದ್ಯಮಿಯು ಕೆಲಸದ ಅಂತ್ಯ ಅಥವಾ ಮಗು ಹುಟ್ಟಿದ ಸ್ವಲ್ಪ ದಿನಗಳಲ್ಲೇ ಮತ್ತೆ ದುಡಿತ. ಪ್ರಮುಖ ಕೈಗಾರಿಕಾ ದೇಶಗಳಲ್ಲಿ ಹೆರಿಗೆ ಸೌಲಭ್ಯವಿಲ್ಲದ ದೇಶ ಅಮೆರಿಕಾವೊಂದೇ. ಅಮೆರಿಕನ್ ಪತ್ರಿಕೋದ್ಯಮಿಗಳಲ್ಲಿ 54% ಮಹಿಳೆಯರು!

ನಿಮ್ಮ ಪ್ರಶ್ನೆ–ನಮ್ಮ ಉತ್ತರ

ನಕ್ಸಲೈಟ್‌ಗಳು ಈಗೀಗ ಬಹಳ ಸುದ್ದಿಯಲ್ಲಿದ್ದಾರೆ. ಕಾಡನ್ನು ಬಿಟ್ಟು ಅವರು ನಾಡಿಗೆ ಬಂದು ಎಡಪ್ರಜಾಪ್ರಭುತ್ವ ಚಳವಳಿಯ ನಾಯಕರನ್ನು ಕೊಲ್ಲುತ್ತಿದ್ದಾರೆ. ಅವರು ಬಹಿರಂಗ ಸಭೆಗಳನ್ನು ನಡೆಸುತ್ತಾರೆ. ಆದರೆ ಪೊಲೀಸರು ಸರಕಾರ ಅವರನ್ನು ಹಿಡಿಯುತ್ತಿಲ್ಲ ಏಕೆ? ಅಲ್ಲದೆ ಅವರು ಇಷ್ಟು ಅನ್ಯಾಯಗಳನ್ನು ಮಾಡುತ್ತಿದ್ದರೂ ಕೆಲವು ಅವರ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಇದು ಏಕೆ ಹೇಗೆ?

-ರಾಮದಾಸ್, ಮಂಗಳೂರು.

ನಕ್ಸಲ್‌ವಾದಿ ಚಳುವಳಿಯನ್ನು ಹಿಂದಿನಿಂದಲೂ ಬೂರ್ಜ್ವಾ-ಭೂಮಾಲಕ ಪ್ರಭುತ್ವ, ಪಕ್ಷಗಳು ಎಡ ಪ್ರಜಾಪ್ರಭುತ್ವ ಪಕ್ಷಗಳು ಎಡಪ್ರಜಾಪ್ರಭುತ್ವ ಚಳುವಳಿಯನ್ನು ಸದೆಬಡಿಯಲು, ಉಪಯೋಗಿಸುತ್ತಿತ್ತು. 70 ರ ದಶಕದಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆದದ್ದು ಇದೇ. 1100 ಕ್ಕೂ ಹೆಚ್ಚು ಸಿ.ಪಿ.ಐ.(ಎಂ) ಕಾರ್ಯಕರ್ತರನ್ನು 70ರ ದಶಕದಲ್ಲಿ ಕೊಲ್ಲಲಾಯಿತು. ಅದರಲ್ಲಿ ನಕ್ಸಲೈಟ್‌ರದ್ದು ದೊಡ್ಡ ಪಾಲು ಇತ್ತು. ಆಂಧ್ರ ಪ್ರದೇಶದಲ್ಲಿ ಈಗಿನ ಕಾಂಗ್ರೆಸ್ ಸರಕಾರಕ್ಕೆ ನಕ್ಸಲೈಟ್‌ರ ಜತೆ ಶಾಮೀಲಾಗಿರುವುದರಿಂದ ಅವರನ್ನು ಸರಕಾರ ಹಿಡಿಯುತ್ತಿಲ್ಲ. ಹಿಂದೆನೂ ಕೇಂದ್ರದಲ್ಲಿದ್ದ ಆಗಿನ ಕಾಂಗ್ರೆಸ್ ಸರಕಾರ ಇವರನ್ನು ಬಳಸುತ್ತಿತ್ತು. ಕುಮ್ಮಕ್ಕು ಕೊಡುತ್ತಿತ್ತು. ಆದ್ದರಿಂದ ನಕ್ಸಲೈಟರು ಈ ರೀತಿ ಸುದ್ದಿ ಮಾಡುವಷ್ಟು ಬೆಳೆಯಲು ಸಾಧ್ಯವಾಗಿದೆ. ಹಿಂದೆ ತೆಲುಗು ದೇಶಂ ಸರ್ಕಾರವನ್ನು 'ಕಾನೂನು ವ್ಯವಸ್ಥೆ ಹದಗೆಟ್ಟಿದೆ' ಎಂಬ ಹುಯಿಲಿನ ಮೇಲೆ ವಜಾ ಮಾಡಲು ನಕ್ಸಲೈಟರು ಉಪಯೋಗವಾಗುತ್ತಿದ್ದರು.

ಆದರೆ ನಕ್ಸಲ್‌ವಾದಿ ಚಳುವಳಿ ಇನ್ನೂ ಯುವಜನರು. ಹಾಗು ನಿಜವಾದ ಆದರ್ಶವಾದಿಗಳನ್ನು ಆಕರ್ಷಿಸಲು ಶಕ್ಯವಾಗಿದೆ ಎಂಬುದು ನಿಜ. ಪುಟ್ಟ ಬೂರ್ಜ್ವಾ ಬುದ್ಧಿಜೀವಿಗಳು, ವಿದ್ಯಾರ್ಥಿಗಳು ಈಗಿನ ಆರ್ಥಿಕ ರಾಜಕೀಯ ವ್ಯವಸ್ಥೆಯಿಂದ ರೋಸಿ ಹೋಗಿರುತ್ತಾರೆ. ಆದರೆ ಅದನ್ನು ಬದಲಾಯಿಸುವ ಬಗ್ಗೆ ವೈಜ್ಞಾನಿಕವಾಗಿ ವಿಶ್ಲೇಷಿಸುವಷ್ಟು ಜನತೆಯನ್ನು ಇಂತಹ ಹೋರಾಟಕ್ಕೆ ಅಣಿಮಾಡುವ ಸುದೀರ್ಘ ಕಾರ್ಯದಲ್ಲಿ ಭಾಗವಹಿಸುವಷ್ಟು ತಾಳ್ಮೆ, ವ್ಯವಧಾನ ಇಲ್ಲ. ಯಾವುದೇ ಸಾಮೂಹಿಕ ಸಂಘಟನೆ ಕಟ್ಟುವ ಅಗತ್ಯ ಇಲ್ಲದೆ ಕ್ರಾಂತಿಕಾರಿ ಗುಂಪಿನ ಸಶಸ್ತ್ರ ಹೋರಾಟದಿಂದ ಕ್ರಾಂತಿ ಸಾಧ್ಯ. ಅಂದರೆ ಸ್ವಾಭಾವಿಕವಾಗಿಯೇ ಆಕರ್ಷಿತರಾಗುತ್ತಾರೆ ಇಂತಹ ಆಕರ್ಷಣೆ.ಗೆ ಪುಟ್ಟ ಬೂರ್ಜ್ವಾಗಳಿಗೆ ಮಾತ್ರವಲ್ಲ . ಇದರ ಜತೆಗೆ ಬಂದೂಕು ಹಿಡಿದು ಢಿಶಂ ಢಿಶಂ ಎನ್ನುವ ಥ್ರಿಲ್ಲು ಸೇರಿದೆ. ಬಂದೂಕದ ಬಲದಿಂದ ಬೂರ್ಜ್ವಾ ವ್ಯವಸ್ಥೆಯೊಳಗೆ ಅವರಿಗೆ ಭ್ರಷ್ಟಾಚಾರದ ರುಚಿಯೂ ಹತ್ತಲು ಆರಂಭವಾದಂತಿದೆ. ಈಗೀಗ ಇವರು ನಿಜವಾಗಿಯೂ 'ಧರಾಯಿತರಾಗುತ್ತಿರುವುದು ಅವರ ಆಕರ್ಷಣೆಯನ್ನು ಹೆಚ್ಚಿಸಿರಬೇಕು. ಇಂತಹ ಎಲ್ಲಾ ಆಕರ್ಷಣೆಗಳಿಗೆ ಹೆಂಗಸರೂ ಹೊರತಲ್ಲ.

ಪಕ್ಷದ ಸ್ವತಂತ್ರ ಚಟುವಟಿಕೆಗಳನ್ನು ಹೆಚ್ಚಿಸಬೇಕು

ಗಳ ಸಮಿತಿನ ಕಂದರವನ್ನು ಹೆಚ್ಚಿಸುವ ಈ ಪ್ರಯತ್ನಗಳ ವಿರುದ್ಧ ಕೇಂದ್ರ ಮತ್ತು ಉತ್ತರ ಪ್ರದೇಶ ಸರಕಾರಗಳು ದೃಢ ನಿಲುವು ಹಾಗೂ ಕ್ರಮ ಕೈಗೊಳ್ಳಬೇಕೆಂದು ಅದು ಹೇಳಿದೆ.

ತ್ರಿಪುರಾದ ಕಾಂಗ್ರೆಸ್(ಐ) ಸರಕಾರ ಎಲ್ಲಾ ನಾಗರಿಕ ಮೌಲ್ಯಗಳನ್ನು ಗಾಳಿಗೆ ತೂರಿ ಅಭೂತಪೂರ್ವ ಭಯೋತ್ಪಾದನೆಯಲ್ಲಿ ತೊಡಗಿದೆ. ರಾಷ್ಟ್ರೀಯ ರಂಗ ಸಂಸತ್ ಸದಸ್ಯರ ನಿಯೋಗ ಇದನ್ನು ಕಣ್ಣಾರೆ ಕಂಡು ವರದಿ ಮಾಡಿದೆ. ಈ ವರದಿಯನ್ನು ಲೋಕಸಭೆ ಮತ್ತು ರಾಜ್ಯಸಭೆಗಳ ಮುಂದೆ ಮಂಡಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಕಾಂಗರೆಸ್(ಐ) ಅಲ್ಲಿ ಆಳ್ವಿಕೆ ನಡೆಸುವ ಎಲ್ಲಾ ನೈತಿಕ ಹಕ್ಕುಗಳನ್ನು ಕಳಕೊಂಡಿದೆಯದ್ದರಿಂದ ತ್ರಿಪುರಾದ ಜನತೆಯ ಪ್ರಾಥಮಿಕ ನಾಗರಿಕ ಸ್ವಾತಂತ್ರ್ಯಗಳನ್ನು ರಕ್ಷಿಸಲು ಕೇಂದ್ರ ಸಮಿತಿ ಒತ್ತಾಯಿಸಿದೆ. ಧಾಷ್ಟ್ಯ ಸರಕಾರ

> 'ದೇಶದ ಆರ್ಥಿಕ ಸ್ವಾವಲಂಬನೆ ರಕ್ಷಿಸಲು, ಸಾಮ್ರಾಜ್ಯಶಾಹಿ ಬಂಡವಾಳಕ್ಕೆ ದೇಶದ ಆಥಿರ್ಕವನ್ನು ಒತ್ತೆಯಿಡುವ ಯಾವುದೇ ಕ್ರಮವನ್ನು ವಿರೋಧಿಸಲು ಜನಗಳನ್ನು ಸ್ವತಂತ್ರವಾಗಿ ಅಣಿನೆರೆಸುತ್ತೇವೆ ಎಂದು ಎಡಶಕ್ತಿಗಳು ಸ್ಪಷ್ಟ ಎಚ್ಚರಿಕೆ ನೀಡಬೇಕು.'

ಆಕ್ಷೆ ಮಾಡಿರುವ ಹೇಯ ತಣ್ಣ ಅರೆ-ಫ್ಯಾಸಿಸ್ಟ್ ಹಲ್ಲೆಗಳನ್ನು ಅಧಮ್ಯಧೈರ್ಯದಿಂದ ಎದುರಿಸುತ್ತಿರುವ ತ್ರಿಪುರಾದ ಸಂಗಾತಿಗಳನ್ನು ಕೇಂದ್ರ ಸಮಿತಿ ಅಭಿನಂದಿಸಿದೆ.

ಇನ್ನೊಂದು ಕಾಂಗ್ರೆಸ್(ಐ) ರಾಜ್ಯ ಆಂಧ್ರ ಪ್ರದೇಶದಲ್ಲಿ ಎಲ್ಲಾ ರಂಗಗಳಲ್ಲಿ ಪರಿಸ್ಥಿತಿಹದಗೆಟ್ಟದೆ-ಕಾನೂನು ವ್ಯವಸ್ಥೆ ಮುರಿದು ಬಿದ್ದಿದೆ. ಕಲ್ಯಾಣಗಳ ಕಾರ್ಯಕ್ರಮಗಳನ್ನು ರದ್ದುಮಾಡಿ ಜನರ ಮೇಲೆ ಕಷ್ಟ--ಕಾರ್ಪಣ್ಯಗಳ ಹೊರೆ ಹಾಕಲಾಗುತ್ತಿದೆ ಎಂದು ಕೇಂದ್ರ ಸಮಿತಿ ಟೀಕಿಸಿದೆ.

ಆರ್ಥಿಕ ರಂಗದಲ್ಲಿ

ಬೆಲೆಯೇರಿಕೆ ಮುಂದುವರಿಯುತ್ತಲೇ ಇದೆ. ಜನಗಳ ಮೇಲೆ ಇಂತಹ ಹೊರೆ ಹೇರಿದ ಸರಕಾರದ ಧೋರಣೆಗಳ ಬಗ್ಗೆ ಭ್ರಮನಿರಸನ ಆರಂಭವಾಗಿದೆ. ಸಿಪಿಐ(ಎಂ) ಒತ್ತಾಯಿಸಿರುವಂತೆ 14 ಜೀವನಾವಶ್ಯಕ ಸಾಮಗ್ರಿಗಳನ್ನು ನಿಶ್ಚಿತ ಬೆಲೆಯಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಹಂಚುವ ಕೆಲಸ ತುರ್ತಾಗಿ ನಡೆಯದಿದ್ದರೆ ಜನರ ನಡುವೆ ಹರಡಿರುವ ಭ್ರಮನಿರಸನ ತಡೆಯಲಾಗಲಿ, ಜನರ ಜೀವನ ಮಟ್ಟ ಮತ್ತಷ್ಟು ಹದಗೆಡುವುದನ್ನು ತಡೆಯುವುದಾಗಲೀ ಅಸಾಧ್ಯ ಎಂದು ಕೇಂದ್ರ ಸಮಿತಿ ಎಚ್ಚರಿಸಿದೆ

ಆರ್ಥಿಕ ರಂಗದಲ್ಲಿ ರಾಷ್ಟ್ರೀಯ ರಂಗ ಸರಕಾರ ಘೋಷಿಸಿರುವ ವಿವಿಧ ಧೋರಣೆಗಳು ಈಗಾಗಲೇ ಸಿಪಿಐ(ಎಂ), ಟೀಕಿಸಿರುವಂತೆ ಹಳೆಯ ಕಾಂಗ್ರೆಸ್(ಐ) ಹಾದಿಯಲ್ಲೇ ಇದೆ. ಈ ಧೋರಣೆಗಳನ್ನು ನಾವು ವಿರೋಧಿಸುತ್ತೇವೆ. ದೇಶದ ಆರ್ಥಿಕದ ಸ್ವಾವಲಂಬನೆ ರಕ್ಷಿಸಲು ಸಾಮ್ರಾಜ್ಯಶಾಹಿ ಬಂಡವಾಳಕ್ಕೆ ನಮ್ಮ ಆರ್ಥಿಕವನ್ನು ಒತ್ತೆಯಿಡುವ ಯಾವುದೇ ಕ್ರಮವನ್ನು ವಿರೋಧಿಸಲು ಸ್ವತಂತ್ರವಾಗಿ ಜನಗಳನ್ನು ಅಣಿನೆರೆಯುತ್ತೇವೆ ಎಂದು ಸ್ಪಷ್ಟವಾಗಿ ಎಚ್ಚರಿಸಬೇಕು ಎಂದು ಕೇಂದ್ರ ಸಮಿತಿ ದೇಶದ ಎಡಶಕ್ತಿಗಳಿಗೆ ಕರೆ ನೀಡಿದೆ.

ಕೇಂದ್ರ ಸಮಿತಿ ಕರೆ

ಜನತಾ ದಳದ ಆಡಳಿತ ಸ್ಥಿತಿ-ಗತಿಗಳಬಗ್ಗೆಯೂ ಆತಂಕ ವ್ಯಕ್ತಪಡಿಸಿರುವ ಕೇಂದ್ರ ಸಮಿತಿ ಈ ಸನ್ನಿವೇಶದಲ್ಲಿ ಒಂದು ಸಕಾರಾತ್ಮಕ ಅಂಶವೆಂದರೆ ದೇಶಾದ್ಯಂತ ಜನರ ಮನೋಭಾವ ಇನ್ನೂ ಕಾಂಗ್ರೆ-ವಿರೋಧಿಯಾಗಿಯೇ ಉಳಿದಿದೆ. ಜನತಾದಳ ಈಗಲಾದರೂ ತಮ್ಮ ಒಳಜಗಳ ಕೊನೆಗೊಳಿಸಿ ಜನಗಳ ಹತ್ತು ಹಲವು ಸಮಸ್ಯೆಗಳನ್ನು ಎದುರಿಸುವ ಗಂಭೀರ ಪ್ರಯತ್ನ ನಡೆಯಬೇಕೆಂದು ಅದು ಹೇಳಿದೆ.

ಈ ಹಿನ್ನಲೆಯಲ್ಲಿ ಮಂಡಲ್ ಆಯೋಗದ ಶಿಫಾರಸುಗಳನ್ನು ಜ್ಯಾರಿಗೊಳಿಸುವ ನಿರ್ಧಾರಗಳನ್ನು ಕೇಂದ್ರ ಸರಕಾರ ಪ್ರಕಟಿಸಿದೆ. ಇದಕ್ಕೆ ವಿರುದ್ಧವಾಗಿ ಮೇಲ್ಜಾತಿಯ ವಿಭಾಗಗಳು ಪ್ರತಿಭಟನಾ ಕಾರ್ಯಾಚರಣೆ, ಹಿಂಸಾತ್ಮಕ ರೂಪ ತಳೆದು ಜೀವ-ಆಸ್ತಿ-ಹಾನಿಯಾಗಿದೆ.

ಸಂಪತ್ತನ್ನು ಕೆಲವೇ ಕೈಗಳಲ್ಲಿ ಕೇಂದ್ರೀಕರಿಸುವ, ಉದ್ಯೋಗ ಸೀಮಿತಗೊಳಿಸುವ ಸದ್ಯದ ಅಸಮಾನ ವ್ಯವಸ್ಥೆಯನ್ನು ಬದಲಿಸಲು ಎಲ್ಲರೂ ಸೇರಿದ ಐಕ್ಯ ಹೋರಾಟ ಅಗತ್ಯ. ಮೀಸಲಾತಿಯಿಲ್ಲದ ವಿಭಾಗಗಳ ಪ್ರಜ್ಞಾಶೀಲ ಜನ ಹಿಂದುಳಿದ ವಿಭಾಗಗಳಿಗೆ ಮೀಸಲಾತಿ ಸೀಮಿತ ಪರಿಹಾರವಷ್ಟೆ ಎಂದು ಮನಗಾಣಬೇಕು ಎಂದು ಮನವಿ ಮಾಡಿಕೊಂಡಿರುವ ಕೇಂದ್ರ ಸಮಿತಿ ಮೀಸಲಾತಿ ಈ ಕೋಮುಗಳ ಹೋರಾಟಶೀಲ ವಿಭಾಗಗಳೊಂದಿಗೆ ಕೈಜೊಡಿಸಿ ಸದ್ಯದ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆ ತರುವ ಒಂದು ಶಕ್ತಿಶಾಲಿ ಆಂದೋಲನ ಕಟ್ಟುವಲ್ಲಿ ಅಡ್ಡಿಯಾಗಬಾರದು ಎಂದಿದೆ.

ರಾಷ್ಟ್ರೀಯ ರಂಗ ಸರಕಾರ ತನ್ನ ಆಂತರಿಕ ಕಿತ್ತಾಟ ಬಿಟ್ಟು ದೇಶದ, ಜನರ ಸಮಸ್ಯೆಗಳನ್ನು ಪರಿಹರಿಸುವತ್ತ ಪ್ರಾಮಾಣಿಕ ಯತ್ನ ನಡೆಸಬೇಕು. ಇಲ್ಲದಿದ್ದರೆ ಜನರ ವಿಶ್ವಾಸ ಅದಕ್ಕೆ ಮುಂದುವರಿಯಲಾರದು. ರಾಷ್ಟ್ರೀಯ ರಂಗ ಈ ಎಚ್ಚರಿಕೆಯನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಕೇಂದ್ರ ಸಮಿತಿ ಒತ್ತಾಯಿಸಿದೆ.

ಈ ಹಿನ್ನೆಲೆಯಲ್ಲಿ ಎಡ, ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳ ಐಕ್ಯತೆಗ ಇನ್ನಷ್ಟು ಮಹತ್ವ ಬಂದಿದೆ. ಇದನ್ನು ಸಾಧಿಸಬೇಕಾದರೆ ವಿಧಾನ ಮಂಡಲಗಳು, ಸಂಸತ್ತಿನೊಳಗಡೆ ಹಾಗೂ ಮತ್ತಷ್ಟು ಬಲಗೊಳ್ಳಬೇಕು. ಎಡ ಐಕ್ಯತೆಯನ್ನು ಮತ್ತಷ್ಟು ಬಲಗೊಳಿಸಬೇಕು. ಎಡ ಐಕ್ಯತೆ ಬಲಗೊಳ್ಳಬೇಕಾದರೆ ಪಕ್ಷದ ಸ್ವತಂತ್ರ ಚಟುವಟಿಕೆಗಳನ್ನು ಬಲಗೊಳಿಸುವುದು ಅತ್ಯಂತ ಅನಿವಾರ್ಯ. ಜನರ ಹೋರಾಟಗಳನ್ನು ಸಂಘಟಿಸುವಲ್ಲಿ, ಸಮಾಜಿಕ-ಆರ್ಥಿಕ ಪರಿಸ್ಥಿತಿಗಳು ಹೇರಿರುವ ಸಂಕಷ್ಟಗಳ ವಿರುದ್ಧ ಅವರನ್ನು ಅಣಿನೆರೆಸುವಲ್ಲಿ ಸಿಪಿಐ(ಎಂ) ಅಗ್ರಣಿ ಪಾತ್ರ ವಹಿಸಬೇಕೆಂದು ಕೇಂದ್ರ ಸಮಿತಿ ಪಕ್ಷದ ಎಲ್ಲಾ ಸದಸ್ಯರಿಗೆ, ಘಟಕಗಳಿಗ ಕರೆ ನೀಡಿದೆ

> 'ಜನರ ಹೋರಾಟಗಳನ್ನು ಸಂಘಟಿಸುವಲ್ಲಿ, ಸಾಮಾಜಿಕ--ಆರ್ಥಿಕ ಪರಿಸ್ಥಿತಿಗಳು ಅವರ ಮೇಲೆ ಹೇರಿರುವ ಸಂಕಷ್ಟಗಳ ವಿರುದ್ಧ ಅವರನ್ನು ಅಣಿನೆರೆಸುವಲ್ಲಿ ಸಿಪಿಐ(ಎಂ) ಅಗ್ರಣಿ ಪಾತ್ರ ವಹಿಸಬೇಕು'

ಅಖಿಲ ಭಾರತ ಕಿಸಾನ್ ಸಭಾ ಕರೆ

ಅಕ್ಟೋಬರ್ 8ರಂದು ರೈತರ ಬೇಡಿಕೆ ದಿನಾಚರಣೆ

ಅಖಿಲ ಭಾರತ ಕಿಸಾನ್ ಸಭಾ ಪಟ್ಟಿ ಮಾಡಿ ಚಳವಳಿ ನಡೆಸಿದ ಬೇಡಿಕೆಗಳು, ಹಾಗೂ ಆಯಾ ರಾಜ್ಯಗಳ ರೈತರನ್ನು ಬಾದಿಸುವ ಬೇಡಿಕೆಗಳನ್ನು ಸೇರಿಸಿ ಅಕ್ಟೋಬರ್ 8-1990 ರಂದು ರಾಷ್ಟ್ರಾದ್ಯಂತ ಬೇಡಿಕೆ ದಿನಾಚರಣೆಯನ್ನು ಆಚರಿಸಲು ಕರೆ ಕೊಡಲಾಯಿತು.

ಆಯಾ ರಾಜ್ಯ ಸಮಿತಿಗಳು ಸೇರಿ ಧರಣಿ ಸತ್ಯಾಗ್ರಹ ಸಮಾವೇಶ, ಜಾಥಾ ಮತ್ತಿತರ ರೀತಿಯಲ್ಲಿ ಮಾಡುವ ಕುರಿತು ಯೋಜಿಸಿ ಭಾರಿ ದೊಡ್ಡ ಸಂಖ್ಯೆಯಲ್ಲಿ ಸಾಹಿತ್ಯ, ಪುಸ್ತಕ, ಕರಪತ್ರ, ಪೋಸ್ಟರುಗಳ, ಬಹಿರಂಗ ಸಭೆಗಳ ಮುಖಾಂತರ ಬೇಡಿಕೆಗಳನ್ನು ರಾಷ್ಟ್ರವ್ಯಾಪಿಯಾಗಿ ವ್ಯಾಪಕ ಪ್ರಚಾರ ಮಾಡುವಂತಾಗಬೇಕು.

ಸೆಮಿನಾರ್:

ಅಖಿಲ ಭಾರತ ಕಿಸಾನ್ ಸಭಾ, ಇತರ ಎಡಪಕ್ಷಗಳ, ಸಾಮೂಹಿಕ ಸಂಘಟನೆಗಳ ಜೊತೆ ಸೇರಿ ನಡೆಸಿದ ಚಳವಳಿ ಹಾಗೂ ಬೇಡಿಕೆಗಳು ಹಾಗೂ ರಾಷ್ಟ್ರೀಯ ರಂಗದ ಚುನಾವಣೆ ಪ್ರಣಾಳಿಕೆ ಆಶ್ವಾಸನೆ ಹಾಗೂ ಈಡೇರಿಕೆ ಕುರಿತು ವ್ಯಾಪಕವಾದ ತಾಲೂಕು ಜಿಲ್ಲಾ ಮಟ್ಟದಲ್ಲಿ ಸೆಮಿನಾರ್‌ಗಳನ್ನು ನಡೆಸಿ ಜನತೆಯನ್ನು ಹೆಚ್ಚು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು.

ಭೂಮಿ ಚಳವಳಿ

ಪಾಟ್ನಾದಲ್ಲಿ ನಡೆದ 25 ನೇ ಅಖಿಲ ಭಾರತ ಸಮ್ಮೇಳನದ ರಾಷ್ಟ್ರವ್ಯಾಪಿ ಚಳವಳಿಯ ಕರೆಗೆ ಮಿಲಿಯಗಟ್ಟಳೆ ಗ್ರಾಮೀಣ ಬಡಜನತೆ, ಹರಿಜನ ಗಿರಿಜನ ಕೃಷಿಕೂಲಿಗಾರರು, ಬಡರೈತರು ಪಾಲ್ಗೊಂಡು ವೀರೋಚಿತವಾಗಿ ತಮ್ಮ ಆಸಕ್ತಿಯನ್ನು ತೋರಿಸಿಕೊಟ್ಟರು. ಈ ಅನುಭವದಲ್ಲಿ 26 ನೇ ಸಮ್ಮೇಳನ ಖಮ್ಮಮ್ ನಲ್ಲಿ ಸೇರಿ ಭೂಮಿಗಾಗಿ ನೇರ ಚಳವಳಿಗೆ ಕರೆಕೊಟ್ಟಿತು. ಆಯಾ ರಾಜ್ಯಗಳ ಪರಿಸ್ಥಿತಿಯ ಆಧಾರದಲ್ಲಿ ನೇರ ಚಳವಳಿಯನ್ನು ತೀವ್ರಗತಿಯಲ್ಲಿ ನಡೆಸಲಾಯಿತು. ಭೂರಹಿತರ ಹೊಸ ಚೈತನ್ಯವನ್ನು ಗುರುತಿಸಲಾಯಿತು. ಸಂಘಟನೆಯ ಹಲವಾರು ಹಂತದ ಕಾರ್ಯಕರ್ತರು, ನಾಯಕತ್ವದ ಹೊಸ ಅನುಭವವನ್ನು ಪಡೆಯಲಾಯಿತು.

ಪಾರ್ಲಿಮೆಂಟ್ ಹಾಗೂ ವಿಧಾನ ಸಭೆ ಇತರ ಸ್ಥಳೀಯ ಚುನಾವಣೆಗಳು ನಡೆದು ಈ ಚಳವಳಿ ತಡೆಯಾಗಿದೆ

ಈಗ ಬದಲಾದ ಪರಿಸ್ಥಿತಿಯಲ್ಲಿ ರಾಷ್ಟ್ರೀಯರಂಗ ಸರಕಾರ ಭೂಮಿಯಲ್ಲಿ ಸುಧಾರಣೆ ತರುವ ಕುರಿತು ಸಾಕಷ್ಟು ಮಾತಾನಾಡುವ ಈ ಸಂದರ್ಭದಲ್ಲಿ ಅದನ್ನು ಜಾರಿಗೊಳಿಸುವಂತೆ ಭೂರಹಿತ ಬಡರೈತರನ್ನು ಭೂಮಿಗಾಗಿ ನೇರ ಕಾರ್ಯಆಚರಣೆಗೆ ಇಳಿಸುವ ಅವಶ್ಯಕತೆಯಿದೆ, ಗ್ರಾಮೀಣ ಪ್ರದೇಶದ ಎಲ್ಲಾ ರೈತರಲ್ಲಿ ಒಗ್ಗಟ್ಟನ್ನು ತರಬೇಕಾದರೆ, ಕೃಷಿಕೂಲಿಗಾರ, ಬಡರೈತರ ಪ್ರತ್ಯೇಕ ಬೇಡಿಕೆಗಳಿಗಾಗಿ ಹಿಂದೇಟು ಹಾಕದೆ ತೀವ್ರಗತಿಯ ಸಂಘರ್ಷಾತ್ಮಕ ಚಳವಳಿಯನ್ನು ನಡೆಸುವ ಮುಖಾಂತರ, ಗ್ರಾಮೀಣ ಬಡವರ ತಳಹದಿಯನ್ನು ನಿರ್ಮಾಣ ಮಾಡುತ್ತಾ ಇತರ ವಿಶಾಲ ವಿಭಾಗದ ರೈತರ ಸಮಸ್ಯೆಗಳ ಬೇಡಿಕೆಗಳಿಗಾಗಿ ಚಳವಳಿ ನಡೆಸುವ ಮುಖಾಂತರ ರೈತಾಪಿ ಐಕ್ಯತೆಯನ್ನು ತಂದು ಪ್ರಜಾಪ್ರಭುತ್ವ ಶಕ್ತಿಗಳನ್ನು, ಎಡ ಶಕ್ತಿಗಳ ಬೆಳವಣಿಗೆಯನ್ನು ಸಾಧಿಸಲಾಗುತ್ತದೆ.

ಪ್ರಗತಿಪರ ಭೂ ಸುಧಾರಣೆಗಾಗಿ ಒತ್ತಾಯಿಸುತ್ತಲೇ ಸರಕಾರಿ,ಬಂಜರು ಅರಣ್ಯ ಭೂಮಿಗಾಗಿ, ನಿರ್ದಿಷ್ಟವಾಗಿ ನೇರವಾದ ಸಂಘರ್ಷಾತ್ಮಕ ಚಳವಳಿಯನ್ನು ರಾಜ್ಯ ಸಮಿತಿಗಳು ಕೆಳ ಸಮಿತಿಗಳಿಗೆ ಸಹಾಯ ಕೊಟ್ಟು ನಡೆಸಲು ಕರೆ ಕೊಡುತ್ತದೆ.

ಸಾಲಮನ್ನಾ

ಬೇಷರತ್ತಾಗಿ 10000 ರೂ ವರೆಗಿನ ಎಲ್ಲರ ಸಾಲವನ್ನು ಅಕ್ಟೋಬರ್ 2-89 ರವರೆಗೆ ಬೇಷರತ್ತಾಗಿ ಮನ್ನಾ ಮಾಡಬೇಕೆಂದು ಹಾಗೂ ಹೊಸ ಸಾಲವನ್ನು ಅವರಿಗೆ ಕೊಡುವಂತಾಗಬೇಕು.

ಸಾಲದ ಕಾರಣದಿಂದ ಬಂಧಿಸಿರುವವರನ್ನು ಬಿಡುಗಡೆ ಮಾಡಬೇಕು, ಇದಕ್ಕಾಗಿ ಜಪ್ತಿ ಮಾಡಿದ ಆಸ್ತಿಯನ್ನು ಮರಳಿಸಬೇಕು, ಇಂತಹ ದಬ್ಬಾಳಿಕ ಕ್ರಮಗಳನ್ನು ಕೈಗೊಂಡ ಅಧಿಕಾರಿಗಳನ್ನು ಶಿಕ್ಷೆಗೆ ಒಳಪಡಿಸಬೇಕು.

ಸಾಲದ ನೀತಿಯನ್ನು ಸರಳಗೊಳಿಸಬೇಕು. ರೈತರಿಗೆ, ಗೇಣಿದಾರರಿಗೆ, ಹಾಗೂ ಪಾಟುದಾರರಿಗೆ, ಅವಶ್ಯಕ ಸಾಲವನ್ನು ಜೀವನ ನಿರ್ವಹಣೆಗೆ ಹಾಗೂ ಉತ್ಪಾದನೆಗಾಗಿ ನೀಡಬೇಕು, ಬಡರೈತರು ಯಾವುದೇ ಪ್ರಕೃತಿ ವಿಕೋಪಗಳಿಗೆ ತುತ್ತಾಗಿ ಸಾಲ ಮರಳಿಸಲು ಅಸಾಧ್ಯವಾದ ಪರಿಸ್ಥಿತಿಯಲ್ಲಿ ಸಾಲಮನ್ನಾವಾಗುವ ಶರತ್ತುಗಳನ್ನು ಒಳಗೊಳಿಸಬೇಕು.

ಸಂಘಟನೆ:

ಗ್ರಾಮ ಘಟಕಗಳನ್ನು ಹೆಚ್ಚು ರಚಿಸಲು, ಚುರುಕುಗೊಳಿಸಲು, ಪ್ರಜಾಸತ್ತಾತ್ಮಕವಾಗಿ ಕಾರ್ಯಾಚರಣೆ ಮಾಡುವಂತೆ ಪ್ರಯತ್ನಿಸಲು ಕರೆ ಕೊಡಲಾಯಿತು. ಕೆಳ ಘಟಕಗಳು ಯಾವುದೇ ರಾಜಕೀಯ ಪಕ್ಷದ ಅಂಗಗಳಂತೆ ಕೆಲಸ ಮಾಡುವುದಿಲ್ಲ, ಬದಲಾಗಿ ರೈತಾಪಿ ಜನತೆಯನ್ನು ಹೋರಾಟ, ಚಟುವಟಿಕೆಯಲ್ಲಿ ಪಾಲುಗೊಳ್ಳುವುದರ ಜೊತೆ ಗ್ರಾಮ ಸಮಿತಿಯ ಕಾರ್ಯಾಚರಣೆಯಲ್ಲಿ ಪಾಲುಗೊಳ್ಳುವ ವಿಶೇಷ ಮುತುವರ್ಜಿ ವಹಿಸಿದಾಗಲೇ ಸಂಘಟನೆ ರೈತರದನ್ನಾಗಿಸಲು ಸಾಧ್ಯವೆಂದು ಕರೆಕೊಡಲಾಯಿತು.

ಇವುಗಳನ್ನು ಕಾರ್ಯಾಚರಣೆಗೆ ಇಳಿಸಲು ಬೇಕಾದ ತಾಲೂಕು ಸಮಿತಿ, ಜಿಲ್ಲಾ ಸಮಿತಿಗಳನ್ನು ಚುರುಕುಗೊಳಿಸಲು ಗಮನಹರಿಸುವುದು, ಅದಕ್ಕಾಗಿ ತಾಲೂಕು ಮಟ್ಟದ,ಜಿಲ್ಲಾ ಮಟ್ಟದ ಕಾರ್ಯಕರ್ತರಿಗೆ ತರಬೇತಿಗೆ ವಿಶೇಷ ಗಮನಕೊಡುವುದು, ತಾಲೂಕು ಸಮಿತಿ, ಜಿಲ್ಲಾ ಸಮಿತಿಗಳಿಗೆ ಪ್ರತಿವರ್ಷ ಸಮಾವೇಶ, ಸಮ್ಮೇಳನಗಳನ್ನು ನಡೆಸುವಂತೆ ಕರೆಕೊಡಲಾಯಿತು

ಇವುಗಳ ಉಸ್ತುವಾರಿಯನ್ನು ರಾಜ್ಯ-ಸಮಿತಿ ನಡೆಸಲು ಸಾಧ್ಯವಾಗಬೇಕು, ರೈತ ಸಂಘಟನೆಗಾಗಿಯೇ ಕೆಲಸ ಮಾಡಲು ಪೂರ್ಣಾವಧಿ ಕಾರ್ಯಕರ್ತರನ್ನು ನೇಮಕ ಮಾಡಬೇಕು.

ರಾಜ್ಯ, ಜಿಲ್ಲಾ, ಪ್ರದೇಶ, ಸಮಸ್ಯೆಗಳಾಧಾರದಲ್ಲಿ ವಿಶೇಷ ಅಧ್ಯಯನ ನಡೆಸಲು ರಾಜ್ಯ ಸಮಿತಿಗಳು ಮುತುವರ್ಜಿ ವಹಿಸಬೇಕು, ಇದಕ್ಕೆ ಬೇಕಾದ ಸಹಾಯವನ್ನು ಕಿಸಾನ್ ಸಭಾ ಕೇಂದ್ರದಿಂದ, ರಾಜ್ಯ ಸಮಿತಿಯ ವಿಸ್ತೃತ ಸಭೆಗಳಿಗ ಪದಾಧಿಕಾರಿಗಳು ಹಾಜರಾಗಿ ನೀಡುವುದು, ಹಿಂದುಳಿದ ರಾಜ್ಯಗಳಿಗೆ ವಿಶೇಷ ಸಹಾಯವನ್ನು ನೀಡಲು ತೀರ್ಮಾನಿಸಲಾಯಿತು.

ರಾಷ್ಟ್ರ ಮಟ್ಟದಲ್ಲಿ ಎರಡು ಶಾಲೆಗಳನ್ನು ನಡೆಸಲು ಕರೆಕೊಡಲಾಯಿತು, ಹಾಗೂ ಒಂದು ಮಾಸಿಕ ಪತ್ರಿಕೆಯನ್ನು ಕಿಸಾನ್ ಸಭಾದ ಕೇಂದ್ರದಿಂದ ಪ್ರಕಟಿಸಲು ಅನುಭವೀ ರಾಜ್ಯಗಳ ಅನುಭವವನ್ನು ರಾಷ್ಟ್ರದ ಎಲ್ಲಾ ಭಾಗಕ್ಕೆ ನೀಡಲು ಯೋಜಿಸಲಾಗುವುದು.

1989-90 ನೇ ಸಾಲಿಗೆ 1,15,41,055 ಸದಸ್ಯತ್ವ ನೊಂದಾಯಿಸಲಾಗಿದ್ದು, 1990-91 ನೇ ವರ್ಷಕ್ಕಾಗಿ 1,34,50,000 ಕೋಟಾ ರಾಜ್ಯಗಳ ಸ್ವಘೋಷಣೆ ಮುಖಾಂತರ ಕೊಡಲಾಗಿದ್ದು, ಕರ್ನಾಟಕ ರಾಜ್ಯಕ್ಕೆ 1,50,000 ಕೋಟಾ ಕೊಡಲಾಗಿದೆ.

ಬೆಲೆ ಏರಿಕೆ ಹಾಗೂ ಇತರೆ ಗೊತ್ತುವಳಿಗಳು

ಹೆಚ್ಚುತ್ತಿರುವ ಬೆಲೆಏರಿಕೆಯನ್ನು ತಡೆಯಲು, ನೆರೆಹಾವಳಿಗೆ ಪರಿಹಾರ ಒದಗಿಸಲು, ಮೀಸಲಾತಿ ವಿರೋಧಿ ಚಳವಳಿಯನ್ನು ತಡೆಯಲು, ತ್ರಿಪುರಾದಲ್ಲಿ ನಡೆಯುತ್ತಿರುವ ಕಾಂಗ್ರೆಸ್-ಟಿಯುಜೆಎಸ್ ಸರಕಾರದ ಅರೆಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಬಯಲಿಗೆಳೆಯಲು, ಕೋಮುವಾದಿ ವಿಚ್ಛಿದ್ರಕಾರಿ ಶಕ್ತಿಗಳಿಂದ ಜನರನ್ನು ಬೇರ್ಪಡಿಸಲು ಕಿಸಾನ್ ಸಭಾ ಘಟಕಗಳು ಹೋರಾಟಗಳನ್ನು ರೂಪಿಸಲು ಸರಕಾರಗಳ ಮೇಲೆ ಒತ್ತಡ ತರುವ ಮುಖಾಂತರ ರಾಷ್ಟ್ರವ್ಯಾಪಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಸ್ಥಳೀಯ ಬೇಡಿಕೆಗಾಗಿ, ಮೇಲಿನ ಚಾರ್ಟರ್ ಬೇಡಿಕೆಗಳಿಗಾಗಿ ಧೀಮಂತ ಚಳವಳಿಗಳನ್ನು ನಡೆಸುವ ಮುಖಾಂತರ ಜನರ ಸಮಸ್ಯೆಗಳಿಗೆ ಪರಿಹಾರಮನ್ನು ಪಡೆಯುತ್ತಲೇ ಜನರ ಐಕ್ಯತೆ, ರಾಷ್ಟ್ರದ ಐಕ್ಯತೆಯ ರಕ್ಷಣೆಗೆ ಕಿಸಾನ್ ಸಭಾ ಕರೆಕೊಟ್ಟಿತು.

ತ್ರಿಪುರಾ ನೋವು ತಂದಿತು ಕಣ್ಣೀರು.....

ಆಗಸ್ಟ್27ರಿಂದ 31ರವರೆಗೆ ನಡೆದ ಸಂಸತ್ ಕಲಾಪಗಳಲ್ಲಿ ಮಂಡಲ್ ಆಯೋಗದ ವರದಿಯ ಶಿಫಾರಸುಗಳ ಜಾರಿ ಕುರಿತ ವಿವಾದ ಮತ್ತೆ ಪ್ರಸ್ತಾಪ. ಐತಿಹಾಸಿಕ ಎನ್ನಲಾದ ಪ್ರಸಾರ ಭಾರತಿ ಮಸೂದೆಯ ಅಂಗೀಕಾರ, ಮೊದಲಾದವುಗಳು ಪ್ರಧಾನ ಅಂಶಗಳು.

ವಾರದ ಕಲಾಪಗಳಲ್ಲಿ ನಮ್ಮ ಪಕ್ಷದ ಸದಸ್ಯರ ಪಾಲ್ಗೊಳ್ಳುವಿಕೆಯ ಮಾಹಿತಿ ಹೀಗಿದೆ.

ಪ್ರಸಕ್ತ ಮುಂಗಾರು ಅಧಿವೇಶನದ ಮೊದಲ ದಿನ ಪ್ರಧಾನಿ ವಿಪಿ ಸಿಂಗ್‌ರು ಸ್ವಯಂಪ್ರೇರಣೆಯಿಂದ ಮಂಡಲ್ ವರದಿ ಶಿಫಾರಸುಗಳ ಜಾರಿ ಬಗ್ಗೆ ಹೇಳಿಕೆ ನೀಡಿದಂತೆಯೇ ಆರ್ಥಿಕವಾಗಿ ಹಿಂದುಳಿದ ವಿಭಾಗಗಳಿಗೆ ಸರಕಾರಿ ಉದ್ಯೋಗಗಳಲ್ಲಿ 5ರಿಂದ10 ಶೇಕಡ ಮೀಸಲಿಡುವ ಪ್ರಸ್ತಾಪವನ್ನು ಆ.27ರಂದು ಪ್ರಕಟಿಸಿದ್ದು ಚರ್ಚೆಗೆ ಬಂದಿತು. ಈ ವಿಷಯದ ಮೇಲೆ ಸ್ಪಷ್ಟನೆ ಕೇಳಬಹುದೇ ಬಾರದೇ ಎನ್ನುವ ಬಗ್ಗೆ ಆಳುವ ಪ್ರತಿಪಕ್ಷ ಸದಸ್ಯರ ಮಡುವೆ ನಿಯಮಕ್ಕೆ ಸಂಬಂಧಿಸಿದಂತೆಯೇ ಸುಮಾರು ಅರ್ಧಗಂಟೆ ಕಾಲ ವಾಗ್ವಾದ ನಡೆಯಿತು.

ಚರ್ಚೆ ನಡೆಯಬೇಕೆಂಬುದು ಸಿಪಿಐ(ಎಂ)ನ ದೀಪೇನ್ ಘೋಷ್ ರಜ್ಯಸಭೆಯಲ್ಲಿ ಪ್ರತಿಪಾದಿಸಿದರು. ಪಂಜಾಬ್‌ನ ಸಾವಿರಾರು ಜನರು ದಿಲ್ಲಿಯಲ್ಲಿ 27ರಂದು ನಡೆಸಿದ ಮತ ಪ್ರದರ್ಶನದ ಬಗ್ಗೆ ಲೋಕಸಭೆಯಲ್ಲಿ ಕಾಂ. ಸೋಮನಾಥ ಚಟರ್ಜಿ ಪ್ರಸ್ತಾಪಿಸಿದಾಗ ಬಹುತೇಕ ಎಲ್ಲಾ ಪಕ್ಷಗಳ ಸದಸ್ಯರು ಅದನ್ನು ಬೆಂಬಲಿಸಿದರು. ಸಮಸ್ಯೆ ಪರಿಹಾರಕ್ಕೆ ಹೊಸದಾಗಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಪಕ್ಷಭೇದ ಮರೆತು ಒತ್ತಾಯಿಸಿದರು.

ಸಂಸತ್ತಿನಲಿ ನಮ್ಮ ವರದಿ -ವಿಶ್ವ



ಸರಕಾರಿ ನಿಯಂತ್ರಣದ, ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಸುಮಾರು ಒಂದು ವರ್ಷದ ಹಿಂದಿನವರೆಗೆ 'ರಾಜೀವ್ ವಾಣಿ'-ಮತ್ತು'-ರಾಜೀವ್ ದರ್ಶನ'ಆಗಿದ್ದ ರೇಡಿಯೋ ಮತ್ತು ಟಿವಿಗಳಿಗೆ ಸ್ವಾಯತ್ತ ತೆ ನೀಡುವ ಕುರಿತಾದ್ಯತಿಹಾಸಿಕ ಮಹತ್ವದ ಮಸೂದೆಯನ್ನು ಲೋಕಸಭ ಈ ವಾರ ಅಂಗೀಕರಿಸಿತು.(ಆಗಸ್ಟ್ 30 ರಂದು) ಈ ಮಸೂದೆಗೆ ಸಿಪಿಐ(ಎಂ)ನ ಮಾಲಿನಿ ಭಟ್ಟಾಚಾರ್ಯ ಸುಚಿಸಿದ್ದ ಮಹತ್ವದ ತಿದ್ದುಪಡಿಯನ್ನ ಸರಕಾರ ಅಂಗೀಕರಿಸಿತು. ಈ ಎರಡು ಇಲೆಕ್ಟ್ರಾನಿಕ್ ಮಾಧ್ಯಮಗಳ ಆಡಳಿತ ವರ್ಗಗಳು ನೌಕರರ ಮೇಲೆ ಏಕಪಕ್ಷೀಯವಾಗಿ ಕೈಗೊಳ್ಳಬಹುದ್ಯದಾದಂತಹ ದಂಡನೀಯ ಕ್ರಮಗಲು ಕೆಟ್ಟದಿದ್ದ. ಅದನ್ನು ತೆಗೆದು ಹಾಕಬೇಕೆಂದು ಮಾಲಿನಿ ತಿದ್ದು ಪಡಿ ಸೂಚಿಸಿದ್ದರು. ಚರ್ಚೆಯಲ್ಲಿ ಭಾಗವಹಿಸಿದ್ದ ಯಲ್ಲವರು ಮಾಧ್ಯಮದ ಮೇಲೆ ಸರಕಾರ, ಆಳುವ ಪಕ್ಷ ಮತ್ತು ದೊಡ್ಡ ಉದ್ಯಮಗಳ ಕೂಟ ನಿಯಂತ್ರಣ ಸಾಧಿಸುವುದನ್ನು ತಪ್ಪಿಸಬೇಕು ಎಂದರು.

ಸಾರ್ವಜನಿಕ ರಂಗದಲ್ಲಿರುವ 28 ಬ್ಯಾಂಕುಗಳ ಪೈಕಿ ಕೆಲವನ್ನು ಖಾಸಗಿ ರಂಗಕ್ಕೆ ಒಪ್ಪಿಸುವ ಪ್ರಶ್ನೆಯೇ ಇಲ್ಲವೆಂದು ಹಣಕಾಸು ಸಚಿವ ಮಧು ದಂಡವತೆ ರಾಜ್ಯ ಸಭೆಯಲ್ಲಿ ಹಾಗೂ ಸಹಾಯಕ ಸಚಿವ ಅನಿಲ್ ಶಾಸ್ತ್ರಿ ಲೋಕಸಭೆಯಲ್ಲಿ ಆ. 28 ರಂದು ಸ್ಪಷ್ಟಪಡಿಸಿದರು. ಈ ಬಗ್ಗೆ ನಿರ್ಮಲ್ ಚಟರ್ಜಿ ಮತ್ತಿತರರು ಪ್ರಸ್ತಾಪಿಸಿದ್ದರು.

ಸಾವಂಜನಿಕ ಪ್ರಜೆಕ್ಟ ಕನ್ಸ್ರಕ್ಷನ್ - ಕಂಪನಿಯ 1000 ಕಾರ್ಮಿಕರನ್ನು ರಿಟ್ರೆಂಚ್ ಮಾಡಲಾಗಿದ್ದು ಅವರಿಗೆ ಒಂದು ವರ್ಷದಿಂದ ಕೆಲಸವಿಲ್ಲ, ಅವರನ್ನ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಆ.29ರಂದು ಲೋಕಸಬೆಯಲ್ಲಿ ಬಸುದೇವ ಆಚಾರ್ಯ ಒತ್ತಾಯಿಸಿದರು. ಸರಕಾರದ ಸಂಸ್ಥೆಯಾದ

ಪುಟ 8 ಕ್ಕೆ

'ಏನು ಜಾದು ಮಾಡಿದಿರಯ್ಯಾ ನೀವು ಕಮ್ಯುನಿಸ್ಟರು'



ಪ್ರತಿಯೊಬ್ಬ ಕಮ್ಯುನಿಸ್ಟನೂ ಪಕ್ಷಕ್ಕೆ ಆಕರ್ಷಿತವಾದ, ಪಕ್ಷಕ್ಕೆ ಸೇರಿದ ದಾರಿ ವಿಶಿಷ್ಟವಾದದ್ದು. ಪಕ್ಷದ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಂ. ಸಿ. ನಂಡುಂಡಪ್ಪ 50-60ರ ದಶಕದ ರಾಜ್ಯದ ರಾಜಕೀಯ ಪರಿಸರವನ್ನೂ ಜೊತೆ ಜೊತೆಗೆ ನೀಡುತ್ತಾರೆ.

ಸಿ.ನಂಜುಂಡಪ್ಪ

— ನಾನು ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಸಂದರ್ಭದ ಕುರಿತು 'ಲಕ್ಷರಂಗ'ದಿಂದ ಒತ್ತಾಯ ಬರುತ್ತಿದೆ. ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗಬೇಕೆಂದು ಅಭಿಪ್ರಾಯವನ್ನು ನನ್ನ ತಲೆಗೆ ಹಾಕಿದವರು ಕ್ಯಾಸಂಬಳ್ಳಿಯ ನಾರಾಯಣ, ಅದೂ 1958ರಲ್ಲಿ. ಆದರೆ ನನ್ನನ್ನು ಪಕ್ಷದ ಸದಸ್ಯನನ್ನಾಗಿ ಸೇರಿಸಿದವರು ಕೃಷ್ಣಸ್ವಾಮಿ, 1965ರಲ್ಲಿ. ಹೀಗಾಗಿ ನಾನು ಒಂದೂವರೆ ದಶಕದ ಬೆಳವಣಿಗೆಗಳನ್ನು ಪ್ರಸ್ತಾಪಿಸಬೇಕಾಗುತ್ತದೆ.

ನನ್ನ ಮಾಧ್ಯಮಿಕ ಶಿಕ್ಷಣ ಮುಗಿಯುವ ವೇಳೆಗೆ ನಾನು ರಾಮಾಯಣ, ಮಹಾಭಾರತ ಮತ್ತು ಕೆಲವು ಪುರಾಣಗಳನ್ನು ಓದಿದ್ದೆ. ಆಗ ನನಗೆ ಓದುವುದಕ್ಕೆ ಒಳ್ಳೆಯ ಪ್ರೋತ್ಸಾಹ, ಉತ್ತೇಜನ ಸಿಕ್ಕುತ್ತಿದ್ದುವು. ಮುತ್ತೂರಿನಲ್ಲಿದ್ದ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕ ಭಂಡಾರದಿಂದಲೂ ಪುಸ್ತಕಗಳನ್ನು ತೆಗೆದುಕೊಂಡು ಓದುತ್ತಿದ್ದೆ. ಈ ಓದಿನ ಪರಿಣಾಮವಾಗಿ ಮಾಧ್ಯಮಿಕ ಶಿಕ್ಷಣ ಮುಗಿಯುವ ವೇಳೆಗೆ ನನಗೆ ದೇವರು, ಧರ್ಮಗಳಲ್ಲಿ ನಂಬಿಕೆ ಹೊರಟುಹೋಯಿತು. ಆ ತರುವಾಯದ ವರ್ಷಗಳಲ್ಲಿ ಮನುಷ್ಯ ತನ್ನ ಅನುಕೂಲಕ್ಕಾಗಿ ದೇವರು, ಸ್ವರ್ಗ, ನರಕಗಳನ್ನು ಸೃಷ್ಟಿಸಿಕೊಂಡ ಎಂಬ ಭಾವನೆ ಬಂದಿತು.

ನನ್ನ ಮಾಧ್ಯಮಿಕ ಶಿಕ್ಷಣದ ಕಾಲದಲ್ಲಿ ತೆಲಂಗಾಣಾ ಹೋರಾಟದ ವಾರ್ತೆಗಳು ಹಿರಿಯರ ಸಂಭಾಷಣೆಗಳಿಂದ ಕಿವಿಗೆ ಬೀಳುತ್ತಿದ್ದುವು. ಕೆ.ಜಿ.ಎಫ್. ಚಿನ್ನದ ಗಣಿ ಕಾರ್ಮಿಕರ ಚಳುವಳಿಯ ಸುದ್ದಿಗಳೂ ಕಿವಿಗೆ ಬೀಳುತ್ತಿದ್ದುವು.

ಆಗ ಲೋಯರ್ ಸೆಕೆಂಡರಿ ಪರೀಕ್ಷೆ ರಾಜ್ಯಮಟ್ಟದ ಪಬ್ಲಿಕ್ ಪರೀಕ್ಷೆಯಾಗಿರುತ್ತಿದ್ದಿತು. ನಾನು 1952ರಲ್ಲಿ ಮೇಲೂರು ಮಾಧ್ಯಮಿಕ ಶಾಲೆಯಿಂದ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ರಾಂಕ್ ಪಡೆದು ಪಾಸಾದೆ. ಕೆಲವು ದಶಕಗಳಿಂದ ಆ ಶಾಲೆ ಅಸ್ತಿತ್ವದಲ್ಲಿದ್ದಿತಾದರೂ ಆ ಶಾಲೆಗೆ ರಾಂಕ್ ಸಿಕ್ಕಿದ್ದು ಅದೇ ಮೊದಲ ಬಾರಿ. ಹೀಗಾಗಿ ನನ್ನ ಹೆಸರು ಆಗ ಅಲ್ಲಿ ಮಾತ್ರವಲ್ಲದೆ ಸುತ್ತಮುತ್ತಲಿನ ಹಲವಾರು ಊರುಗಳಲ್ಲಿ, ಶಾಲೆಗಳಲ್ಲಿ ಹರಡಿ ಜನಪ್ರಿಯತೆಯನ್ನು ಗಳಿಸಿತು.

1952ರಲ್ಲಿ ನಾನು ವಿಜಯಪುರದ ಪ್ರೌಢಶಾಲೆಗೆ ಸೇರಿದೆ. ಪಠ್ಯಪುಸ್ತಕಗಳ ಅಭ್ಯಾಸಕ್ಕಿಂತಲೂ ಹೆಚ್ಚಾಗಿ ನನ್ನ ಓದು ಕನ್ನಡ ಸಾಹಿತ್ಯದ ಎಲ್ಲಾ ಪ್ರಾಕಾರಗಳನ್ನೂ ಮುಟ್ಟಿತು. ಆಗ ನಾನು ಸ್ಥಳೀಯವಾಗಿ ಲಭ್ಯವಿದ್ದ ಪುಸ್ತಕಗಳನ್ನಲ್ಲದೆ ಧಾರವಾಡದ 'ಸಮಾಜ ಪುಸ್ತಕಾಲಯ', 'ಮನೋಹರ ಗ್ರಂಥ ಮಾಲೆ'ಗಳಿಂದಲೂ ಪುಸ್ತಕಗಳನ್ನು ವಿ.ಪಿ.ಪಿ. ಮೂಲಕ ತರಿಸಿ ಓದುತ್ತಿದ್ದೆ. ಈ ವ್ಯಾಸಂಗದಲ್ಲಿ ಕಮ್ಯುನಿಸಂ, ಕಮ್ಯುನಿಸ್ಟ್, ಸೋವಿಯತ್ ರಷ್ಯ, ಚೀನ, ಸ್ಟಾಲಿನ್, ಮಾವೋ, ಮೊದಲಾದ ಹೆಸರುಗಳ ಪರಿಚಯವಾಯಿತು. ಬಸವರಾಜ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ', ಅ.ನ.ಕೃ.ರವರ ಕೆಲವು ಬರಹಗಳು, ತ.ರಾ.ಸು. ರವರ 'ಕೇದಿಗೆ ವನ', ನಿರಂಜನರ 'ಚಿರಸ್ಮರಣೆ' ಮತ್ತು ಇತರ ಕೃತಿಗಳು ಕಮ್ಯುನಿಸಮಿನಲ್ಲಿ, ಕಮ್ಯುನಿಸ್ಟ್ ಪಕ್ಷದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿದ್ದವು. ಕನ್ನಡದಲ್ಲಿ ಲಭ್ಯವಿದ್ದ ಕಮ್ಯುನಿಸ್ಟ್ ಸಾಹಿತ್ಯವನ್ನು ಓದಲಾರಂಭಿಸಿದೆ.

1953 ರಲ್ಲಿ ಸ್ಟಾಲಿನ್ನರ ನಿಧನದ ಸುದ್ದಿ ಆಕಾಶವಾಣಿ ಬಿತ್ತರಿಸಿದಾಗ ನಾನು ವಿಜಯಪುರದ ಜೈಹಿಂದ್ ಕಾಫಿ ಕ್ಲಬ್ಬಿನಲ್ಲಿ ಕೂತು ಕಾಫಿ ಕುಡಿಯುತ್ತಿದ್ದೆ. ಆ ಹೋಟೆಲ್ ಮಾಲೀಕ ಮತ್ತು ಸೇವಕ ಬಸಪ್ಪನವರು ಮತ್ತು ಸುತ್ತಮುತ್ತಲಿಂದ ಅಲ್ಲಿ ಬಂದು ನೆರೆದ ಜನರು ಸ್ಟಾಲಿನ್ನರ ಸಾವಿನ ಬಗ್ಗೆ ವ್ಯಕ್ತಪಡಿಸಿದ ದುಃಖ ನನ್ನ ಮೇಲೆ ಪರಿಣಾಮ ಮಾಡಿತು. ಆಶ್ಚರ್ಯವೆಂದರೆ ವಿಜಯಪುರದಲ್ಲಿ ಕಮ್ಯುನಿಸ್ಟ್ ಪಕ್ಷವಿರಲಿಲ್ಲ. ಬಹುಶಃ ಇಂದೂ ಇರಲಿಕ್ಕಿಲ್ಲ. ಸ್ವಲ್ಪ ಕಾಲದಲ್ಲಿಯೇ ಇಂದಿರಾ ಶ್ರೀಕಂಠಯ್ಯನವರು ಭಾಷಾಂತರಿಸಿದ್ದ 'ಜೋಸೆಫ್ ಸ್ಟಾಲಿನ್'ರ ಜೀವನ ಚರಿತ್ರೆಯನ್ನು ಓದಿದೆ. ಪ್ರೌಢ ಶಾಲೆಯಲ್ಲಿದ್ದಾಗ ಯಾವಾಗಲೂ ಮೊದಲ ದರ್ಜೆಯ ವಿದ್ಯಾರ್ಥಿಯಾಗಿದ್ದು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ತೇರ್ಗಡೆಯಾದೆ. ಆಗ ನನಗೆ ಒಮ್ಮೊಮ್ಮೆ ಕೆ.ಜಿ.ಎಫ್‌ಗೆ ಹೋಗಬೇಕು ಎನ್ನಿಸುತ್ತಿದ್ದಿತು. ಒಬ್ಬನೆ ಹೋಗುವುದು ಹೇಗೆ? ನನ್ನ ಸಹಪಾಠಿಗಳು 'ಬ್ಲ್ಯಾಕ್ ಡ್ರೈವರ್' ಸಿನಿಮಾ ನೋಡಲು ರಾತ್ರಿ ಸೈಕಲ್‌ಗಳ ಮೇಲೆ ವಿಜಯಪುರದಿಂದ ಚಿಕ್ಕಬಳ್ಳಾಪುರಕ್ಕೆ ಬರಲು ಸಿದ್ಧರಿದ್ದರೇ ಹೊರತು ಕೆ.ಜಿ.ಎಫ್.ಗೆ ಹೋಗಲು ಯಾರೂ ತಯಾರಿರಲಿಲ್ಲ.

ನನ್ನ ಶಾಲಾ ವಿದ್ಯಾರ್ಥಿ ದೆಸೆಯಲ್ಲಿ ನಾನು ಸಂಚರಿಸಿದ್ದ ಕೋಲಾರ ಜಿಲ್ಲೆಯ ಊರುಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ, ಪಕ್ಷದ ಕಾರ್ಯಕರ್ತರ ಬಗ್ಗೆ ಆದರಾಭಿಮಾನಗಳಿದ್ದುದನ್ನು, ಗೌರವವಿದ್ದುದನ್ನು ಗುರುತಿಸಿದ್ದೆ.

1955 ರಲ್ಲಿ ಬೆಂಗಳೂರಿನಲ್ಲಿ ನಾನು ಕಾಮರ್ಸ್ ಕಾಲೇಜು ಸೇರುವ ವೇಳಗೆ ವರ್ಗಗಳು, ವರ್ಗಹೋರಾಟ, ಸಮಾಜವಾದ, ಸಮತಾವಾದ, ರಾಷ್ಟ್ರೀಕರಣ, ಉತ್ಪಾದನಾ ಸಾಧನೆಗಳ ಸಾಮೂಹಿಕ ಒಡೆತನ ಇಷ್ಟರಮಟ್ಟಿಗಿನ ತಿಳುವಳಿಕೆ ಇದ್ದಿತು. ಕಾಲೇಜಿನಲ್ಲಿ ಮೊದಲನೆಯ ವರ್ಷ ಮುಗಿಯುವ ವೇಳೆಗೆ ನನಗೆ ಎರಡು ಹೆಸರುಗಳು ಬಂದವು. ಸಹಪಾಠಿ ಆನಂದಕುಮಾರ್ ನನ್ನನ್ನು 'ಫಿಲಾಸಫರ್' ಎಂದು ಕರೆಯಲಾರಂಭಿಸಿದರು. ಸಹಪಾಠಿ ಸುಂದರನ್ ನನ್ನನ್ನು 'ಕಮ್ಯುನಿಸ್ಟ್' ಎಂದು ಕರೆಯಲಾರಂಭಿಸಿದರು. ಕಾಲೇಜಿನಲ್ಲಿ ನಡೆದ 'ಮಾಕ್ ಪಾರ್ಲಿಮೆಂಟ' ನಲ್ಲಿ ಕಮ್ಯುನಿಸ್ಟ್ ಎಂ.ಪಿ.ಯಾಗಿ ರಾಷ್ಟ್ರೀಕರಣವನ್ನು ಸಮರ್ಥಿಸಿ ಮಾತನಾಡಿದೆ. ನಾನು ಕಾಲೇಜಿನಲ್ಲಿದ್ದಾಗ ಸೋವಿಯತ್ ಒಕ್ಕೂಟದ ಪ್ರಧಾನ ಮಂತ್ರಿ ಬುಲ್ಗಾನಿನ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ನಿಕಿಟಾ ಕ್ರುಶ್ಚೇವ್ ಬೆಂಗಳೂರಿಗೆ ಭೇಟಿಕೊಟ್ಟರು. ಅವರು ತೆರೆದ ಜೀಪಿನಲ್ಲಿಯೇ ನಮ ಕಾಲೇಜಿನ ಪಕ್ಕದ ರೇಸ್ ಕೋರ್ಸ್ ರಸ್ತೆಯಲ್ಲಿಯೇ ಹೋದುದು. ನಮ್ಮ ವಿದ್ಯಾರ್ಥಿ ಸಂಘದಿಂದ ಅವರಿಗೆ ದೊಡ್ಡ ಹೂಮಾಲೆಯನ್ನು ಹಾಕಿದುದು ನನಗೆ ಈಗಲೂ ನೆನಪಿದೆ. ಮುಂದಿನ ವರ್ಷ ಚೀನದ ಪ್ರಧಾನಿ ಚೌ ಎನ್ ಲೈ ಬೆಂಗಳೂರಿಗೆ ಭೇಟಿಕೊಟ್ಟರು. ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿ ಅವರ ಭಾಷಣವನ್ನು ಕೇಳಿದೆ.

ಬೆಂಗಳೂರಿಗೆ ಬಂದ ನಂತರ ಕಮ್ಯುನಿಸ್ಟ್ ಸಾಹಿತ್ಯ ಸಿಕ್ಕುವ ಜಾಗಗಳನ್ನು ಹುಡುಕಿದೆ. ಮೈಸೂರು ಬ್ಯಾಂಕಿನ ಮುಂದೆ ಲೋಕಪ್ಪ ಶೆಟ್ಟಿ ಎಂಬುವರು(ಈಗ ಅವರು ಮಂಗಳೂರಿನಲ್ಲಿದ್ದಾರೆ, ಆದರೆ ಪಕ್ಷದಲ್ಲಿಲ್ಲ) ಸೋವಿಯತ್ ಪ್ರಕಟಣೆಗಳನ್ನಿಟ್ಟುಕೊಂಡು ಮಾರುತ್ತಿದ್ದರು. ಮೆಜೆಸ್ಟಿಕ್ ಸರ್ಕಲಿನಲ್ಲಿ ಹಿಮಾಲಯ ಟಾಕೀಸಿನ ಸಾಲಿನಲ್ಲಿ ಒಂದು ಪುಸ್ತಕದಂಗಡಿಯಲ್ಲಿ ಸೋವಿಯತ್ ಪುಸ್ತಕಗಳನ್ನು ಮಾರುತ್ತಿದ್ದರು. ಈ ಎರಡು ಅಂಗಡಿಗಳಿಂದ ಮಾರ್ಕ್ಸ್, ಏಂಗೆಲ್ಸ್, ಲೆನಿನ್‌ರ ಕೃತಿಗಳನ್ನು ಕೊಂಡು ಓದಲಾರಂಭಿಸಿದೆ. ಈ ಇಂಗ್ಲಿಷ್ ಪುಸ್ತಕಗಳು ಆಗ ನನಗೆ ಕಠಿಣವಾಗಿ ಕಂಡವು. ಆದರೂ ಹಟದಿಂದ ಅವುಗಳನ್ನು ಓದಿದೆ.

ಈ ವ್ಯಾಸಂಗಕ್ಕೆ ಸಹಾಯಕವಾಗುವ ಘಟನೆಗಳು ಕಾಲೇಜಿನಲ್ಲಿ ನಡೆಯುತ್ತಿದ್ದವು. ಕೇಂದ್ರ ಸರ್ಕಾರದಲ್ಲಿ ಉಪಸಚಿವರಾಗಿದ್ದ ಎಂ.ವಿ. ಕೃಷ್ಣಪ್ಪ ನವರು ನಮ್ಮ ಕಾಲೇಜಿಗೆ ಭೇಟಿ ಕೊಟ್ಟು ವಿದ್ಯಾರ್ಥಿಗಳ ಸಭೆಯಲ್ಲಿ ತಮ್ಮ ಚೀನದ ಭೇಟಿಯ ಬಗ್ಗೆ ಮಾತನಾಡುತ್ತಾ ಚೀನದಲ್ಲಿ ತಾವು ಎಲ್ಲಿಯೂ ಒಬ್ಬ ಭಿಕ್ಷುಕನನ್ನು ನೋಡಲಿಲ್ಲವೆಂದೂ, ಕಳ್ಳತನವಾಗುವುದಿಲ್ಲವೆಂದೂ, ತಾವು ಮರೆತುಬಿಟ್ಟು ಹೊರಟಿದ್ದ ವಸ್ತು ತಮ್ಮನ್ನೇ ಹುಡುಕಿಕೊಂಡು ಬಂದುದು, ಅಲ್ಲಿಯ ಸಹಕಾರಿ ಕೃಷಿಗಳ ಬಗ್ಗೆ ಹೇಳಿದರು. ಚೀನದ ವಿದ್ಯಾರ್ಥಿ ನಿಯೋಗವೊಂದು ನಮ್ಮ ಕಾಲೇಜಿಗೆ ಭೇಟಿ ಕೊಟ್ಟಾಗ ನನ್ನ ಆನಂದ ಎಲ್ಲೆ ಮೀರಿತು. ನಮಗೆ ಇಂಗ್ಲಿಷ್ ಪಾಠ ಮಾಡುತ್ತಿದ್ದ ನಂಜುಂಡ ಶಾಸ್ತ್ರಿಗಳು ಬ್ರಿಟನ್ ನಾಲ್ಕು ಶತಮಾನಗಳ ಪ್ರಜಾಸತ್ತೆಯಲ್ಲಿ ಸಾಧಿಸಲಾಗದುದನ್ನು ಸೋವಿಯತ್ ರಷ್ಯ ನಾಲ್ಕು ದಶಕಗಳ ಕಾರ್ಮಿಕ ವರ್ಗದ ಸರ್ವಾಧಿಕಾರದಲ್ಲಿ ಸಾಧಿಸಿದುದನ್ನು, ಚೀನದಲ್ಲಿ ಮಾವೋ ನಾಯಕತ್ವದಲ್ಲಿ 'ಲಾಂಗ್ ಮಾರ್ಚ್' ಕುರಿತು ಹೇಳುತ್ತಿದ್ದುದು ನನ್ನ ಮನಸ್ಸಿನ ಮೇಲೆ ಆಳವಾದ ಪರಿಣಾಮಗಳನ್ನು ಮಾಡಿತು.

ಕಾಲೇಜಿಗೆ ಬಂದ ಸ್ವಲ್ಪಕಾಲದಲ್ಲಿಯೇ ನಡೆದ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದೆ.

1957ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷವು ಗೆದ್ದು ಅಧಿಕಾರಕ್ಕೆ ಬಂದುದು ಸಂತೋಷವನ್ನೂ, ಆಶ್ಚರ್ಯವನ್ನೂ ಉಂಟುಮಾಡಿತು. 1957ರಲ್ಲಿ ಕೆಲವು ತಿಂಗಳು ಚಾಮರಾಜಪೇಟೆಯ ರೆಡ್ಡಿ ಹಾಸ್ಟೆಲಿನಲ್ಲಿದ್ದಾಗ ನನಗೆ ಕ್ಯಾಸಂಬಳ್ಳಿಯ ನಾರಾಯಣರ ಪರಿಚಯವಾಯಿತು. ಅವರು ಆಗಲೇ ಪಕ್ಷದ ಸದಸ್ಯರಾಗಿದ್ದರು.ಕಮ್ಯುನಿಸ್ಟ್ ಚಳುವಳಿಯ ಕುರಿತು ವಿಚಾರವಿನಿಮಯ ಮಾಡಲು, ಹಿಂದಿನ ವರ್ಷ ಹಂಗೇರಿಯಲ್ಲಿ ನಡೆದ ಪ್ರತಿಕ್ರಾಂತಿಯನ್ನು ಚರ್ಚಿಸಲು, ಕ್ರುಶ್ಚೇವರ 'ಶಾಂತಿಯುತ ಸಹಬಾಳ್ವೆ, ಶಾಂತಿಯುತ ಪೈಪೋಟಿ ಮತ್ತು ಶಾಂತಿಯತ ಪರಿವರ್ತನೆ'ಗಳನ್ನು ಚರ್ಚಿಸಲು ಅವರ ಪರಿಚಯ ಸಹಾಯ ಮಾಡಿತು. ಅವರ ಮತ್ತು ನನ್ನ ಭೇಟಿ ಕೆಲವೇ ಬಾರಿ ಆದದ್ದು. 1958ರ ಪ್ರಾರಂಭದಲ್ಲಿ ಭೇಟಿಯಾದಾಗ ಅವರು ನನಗೆ ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗುವುದರ ಮಹತ್ವದ ಬಗ್ಗೆ ಹೇಳಿದರು. ಆಮೇಲೆ ಅವರು ನನ್ನನ್ನು ಭೇಟಿಯಾಗಲೇ ಇಲ್ಲ. ಆಗ ನನಗೆ ಕಮ್ಯುನಿಸ್ಟ್ ಪಕ್ಷದ ಬೇರೆ ಸದಸ್ಯರ ಪರಿಚಯವಿರಲಿಲ್ಲ. ಆದ್ದರಿಂದ ಆ ವಿಷಯ ಅಲ್ಲಿಗೇ ನಿಂತಿತು.

ಕಮ್ಯೂನಿಸ್ಟ್ ಆಂದೋಲನ ಸೇರಿದ ಬಗೆ

ನನಗೆ ಆವರೆವಿಗೆ ಸಿಕ್ಕಿದ್ದ ತಿಳುವಳಿಕೆಯ ಪ್ರಕಾರ ಕ್ರುಶ್ಚೇವರ 'ಶಾಂತಿಯುತ ಪರಿವರ್ತನೆ' ವಾಸ್ತವವಾಗಿ ಸಾಧ್ಯವಿಲ್ಲ ಎಂಬುದು 1959ರಲ್ಲಿ ನೆಹರು ಸರ್ಕಾರವು ಕೇರಳದ ಕಮ್ಯುನಿಸ್ಟ್ ಸರ್ಕಾರವನ್ನು ವಜಾ ಮಾಡಿದುದು ಈ ನಂಬಿಕೆಯನ್ನು ಸಮರ್ಥಿಸಿತು.

1958ರಲ್ಲಿ ನನ್ನ ವಿದ್ಯಾರ್ಥಿ ಜೀವನದಲ್ಲಿ ಒಂದು ವಿಶೇಷ ಘಟನೆ ನಡೆಯಿತು. ನನ್ನ ವಿದ್ಯಾರ್ಥಿ ಜೀವನದ ವೆಚ್ಚಕ್ಕೆ ಆ ವರ್ಷ ಎಲ್ಲಿಂದಲೂ ಹಣ ಸಿಕ್ಕುವ ಸಂಭವವಿರಲಿಲ್ಲ. ಹಿಂದಿನ ವರ್ಷ ಪೌಷ್ಟಿಕ ಆಹಾರದ ಕೊರತೆಯಿಂದಾಗಿ ನನಗೆ 'ಅನೀಮಿಯಾ'ಆಗಿದ್ದಿತು. ಆಗ ಪ್ರತಿವರ್ಷವೂ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಮೆಡಿಕಲ್ಎಕ್ಸಾಮಿನೇಷನ್ ನಡೆಯುತ್ತಿತ್ತು. ನನ್ನನ್ನು ಪರೀಕ್ಷಿಸಿದ ಡಾಕ್ಟರುಗಳು 'ಅನೀಮಿಯಾ' ಎಂದು ಬರೆದುದಲ್ಲದೆ ನಾಲ್ಕು ತಿಂಗಳುಗಳ ಟ್ರೀಟ್‌ಮೆಂಟ್ ಬರೆದು ಕೊಟ್ಟರು. ನನ್ನ ಹಣದ ಕೊರತೆಯನ್ನು ತಿಳಿದ ದಿವಂಗತ ಎಂ.ಸಿ. ಕೆಂಪಯ್ಯನವರು ನನ್ನನ್ನು ಮುತ್ತೂರಿಗೆ ಕರೆದುಕೊಂಡು ಹೋಗಿ ಊರಿನ ಜನರ ಸಭೆಯನ್ನು ಕರೆದು ನನ್ನ ವಿದ್ಯಾಭ್ಯಾಸಕ್ಕೆ ಪ್ರತಿಯೊಬ್ಬರೂ ಧನಸಹಾಯ ಮಾಡಬೇಕೆಂದು ಮನವಿ ಮಾಡಿದರು. ರೈತರು, ಕೃಷಿಕೂಲಿಕಾರರು ಧನ ಸಹಾಯ ಮಾಡಿದರು. ಮೇಲೂರಿನಿಂದ ಹೆಲ್ತ್ ಇನ್ಸ್‌ಪೆಕ್ಟರನ್ನು ಕರೆಸಿ ಎರಡು ವಾರಗಳ ಕಾಲ ವಿಟಮಿನ್, ಕ್ಯಾಲ್ಸಿಯಂ ಮತ್ತು ಮಿನರಲ್‌ಗಳ ಇಂಜೆಕ್ಷನ್ ಕೊಡಿಸಿದರು. ಬೆಂಗಳೂರಿನಲ್ಲಿ ನಾನು ಇದ್ದ ಸ್ಥಳದಿಂದ ಕಾಲೇಜಿಗೆ ಹೋಗಲು ದೂರವೆಂದು ಮುತ್ತೂರಿನ ಕಾಶಿಯವರ ತಮ್ಮಯ್ಯನವರು ನನಗೆ ಒಂದು ಬೈಸಿಕಲ್ಲನ್ನು ಕೊಟ್ಟರು. ಇವರು ಯಾರೂ ನನ್ನ ರಕ್ತ ಸಂಬಂಧಿಗಳಲ್ಲ. ನನಗೆ ಸಹಾಯ ಮಾಡುವುದರಲ್ಲಿ ಇವರಿಗೆ ಯಾವ ಸ್ವಾರ್ಥವೂ ಇರಲಿಲ್ಲ. ಇದರ ಕುರಿತು ನಾನು ಬಹುವಾಗಿ ಯೋಚಿಸಿ ಒಂದು ನಿರ್ಧಾರಕ್ಕೆ ಬಂದೆ. ನಾನು ನಮ್ಮ ದೇಶದ ಜನರ ಏಳಿಗೆಗಾಗಿ ದುಡಿಯಬೇಕು, ಸೋವಿಯತ್ ಒಕ್ಕೂಟದಲ್ಲಿರುವಂತೆ, ಚೀನದಲ್ಲಿರುವಂತೆ, ಭಾರತದಲ್ಲಿಯೂ ಸಮಸ್ತಜನರೂ ಸುಖವಾಗಿರಲು ಸಾಧ್ಯ ಮಾಡುವ ಸಮಾಜವಾದಿ ಸಮಾಜವನ್ನು ಸ್ಥಾಪಿಸಲು ದುಡಿಯಬೇಕು ಎಂದು ನಿರ್ಧಾರ ಮಾಡಿದೆ. 1958ರಲ್ಲಿ ಮಾಡಿದ ಆ ನಿರ್ಧಾರ ಮೂವತ್ತೆರಡು ವರ್ಷಗಳ ನಂತರವೂ ದೃಢವಾಗಿ ಹಾಗೆಯೇ ಉಳಿದಿದೆ. ಆದರೆ ಈ ನಿರ್ಧಾರವನ್ನು ನನ್ನ ಬಿ.ಕಾಂ. ವಿದ್ಯಾಭ್ಯಾಸ ಮುಗಿಯುವವರೆವಿಗೆ ಬಹಿರಂಗ ಪಡಿಸಲಿಲ್ಲ.

1960ರಲ್ಲಿ ಕೇಂದ್ರ ಸರ್ಕಾರದ ನೌಕರರ ಮುಷ್ಕರ ನಡೆಯಿತು. ಈ ಮುಷ್ಕರವನ್ನು ಕಾಂಗ್ರೆಸ್ ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸಿತು. ಈ ಮುಷ್ಕರವನ್ನು ದಮನ ಮಾಡಲು ಸರ್ಕಾರದ ಕಡೆಯವರು ಹಾಸ್ಟೆಲುಗಳಿಗೆ ಬಂದು ವಿದ್ಯಾರ್ಥಿಗಳನ್ನು ದಿನದ ಸಂಬಳದ ಮೇಲೆ ಬಂದು ಕೆಲಸ ಮಾಡಬೇಕೆಂದೂ, ಈಗ ಕೆಲಸ ಮಾಡಿದರೆ ವಿದ್ಯಾಭ್ಯಾಸ ಮುಗಿದ ನಂತರ ಅದೇ ಕೆಲಸ ಖಂಡಿತವಾಗಿ ಸಿಕ್ಕುವುದೆಂದು ಆಸೆ ಹುಟ್ಟಿಸಿ ಕಂಗಾಲುಗಳಾಗಿ ಕೆಲಸ ಮಾಡಲು ಪುಸಲಾಯಿಸುತ್ತಿದ್ದರು. ಆಗ ನಾನು ಶೇಷಾದ್ರಿಪುರದ ಒಂದು ಹಾಸ್ಟೆಲಿನಲ್ಲಿದ್ದೆ. ಅಲ್ಲಿಗೂ ಅವರು ಬಂದು ಹೋದರು. ಅವರು ಬಂದಾಗ ನಾನಿರಲಿಲ್ಲ. ನನಗೆ ವಿಷಯ ತಿಳಿದ ಕೂಡಲೆ ರಾತ್ರಿಯಿಡೀ ಪ್ರತಿಯೊಂದು ಕೊಠಡಿಗೂ ಹೋಗಿ ಕೇಂದ್ರಸರ್ಕಾರದ ನೌಕರರ ಮುಷ್ಕರದ ಮಹತ್ವವನ್ನು ವಿವರಿಸಿ ಕಾಂಗ್ರೆಸ್ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಹೇಳಿ ಯಾರೂ ಕೆಲಸಕ್ಕೆ ಹೋಗಕೂಡದೆಂದು ಮನವಿ ಮಾಡಿಕೊಂಡೆ. ಮಾರನೆಯ ದಿನ ಅದೇ ಹಾಸ್ಟೆಲಿನಲ್ಲಿದ್ದ ವೆಂಕಟಸುಬ್ಬರೆಡ್ಡಿ'ನೀವು ಕಮ್ಯುನಿಸ್ಟಲು ಏಮಿ ಜಾದೂ ಚೇಸ್ತಿರಯ್ಯಾ, ಒಕ್ಕರೂ ಪನಿಕಿ ಪೋಲೇದೇ'(ನೀವು ಕಮ್ಯುನಿಸ್ಟರು ಏನು ಜಾದೂ ಮಾಡಿದಿರಯ್ಯಾ, ಒಬ್ಬರೂ ಕೆಲಸಕ್ಕೆ ಹೋಗಲಿಲ್ಲವೇ) ಎಂದು ಹೇಳಿದಾಗಲೇ ಹಿಂದಿನ ರಾತ್ರಿಯ ನನ್ನ ಪ್ರಯತ್ನ ಸಂಪೂರ್ಣಫಲ ಕೊಟ್ಟಿದ್ದು ತಿಳಿಯಿತು.

1960ರಲ್ಲಿ ನನ್ನ ನಿರ್ಧಾರವನ್ನು ಪ್ರಕಟಿಸಿದಾಗ ಗೆಳೆಯರು ಹಿತೈಷಿಗಳೂ ನನ್ನ ನಿರ್ಧಾರವನ್ನು ವಿರೋಧಿಸಿದರು. ಈಗಲೇ ನೀವು ಈ ರೀತಿ ಕೆಲಸ ಮಾಡಲು ಹೋದರೆ ಒಬ್ಬ ನಿರುದ್ಯೋಗಿ ಹೊಟ್ಟೆಪಾಡಿಗಾಗಿ ವಿರೋಧ ಮಾಡುತ್ತಿದ್ದಾನೆ ಎಂದು ಅರ್ಥಮಾಡಿಕೊಳ್ಳುತ್ತಾರೆ. ಆದ್ದರಿಂದ ಸ್ವಲ್ಪಕಾಲ ಕೆಲಸ ಮಾಡಿ ಆಮೇಲೆ ಈ ಬಗ್ಗೆ ವಿಚಾರ ಮಾಡಿ ಎಂದು ಹೇಳಿದ್ದಲ್ಲದೆ ಬೆಂಗಳೂರು ನಗರ ಸಭೆಯ ನೀರು ಸರಬರಾಜು ವಿಭಾಗದಲ್ಲಿ ಒಂದು ಹಂಗಾಮಿ ಕೆಲಸವನ್ನು ಕೊಡಿಸಿದರು.

ಕ್ಯೂಬಾದ ಘಟನೆ, ಭಾರತ-ಚೀನ ಗಡಿವಿವಾದಗಳು, ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ನಡೆಯುತ್ತಿದ್ದ ಚರ್ಚೆ ನನ್ನ ಮನಶ್ಶಾಂತಿಯನ್ನು ಕೆಡಿಸಿದ್ದವು. ಕನಸಿನಲ್ಲೆಲ್ಲಾ ಕ್ರುಶ್ಚೇವ್, ಕೆನಡಿ ಕಾಣಿಸಲಾರಂಭಿಸಿದರು.

ನಾನು ಕಾಲೇಜಿಗೆ ಸೇರಿದಂದಿನಿಂದಲೂ ರೈತರು ಮತ್ತು ಕಾರ್ಮಿಕರ ದುಡಿಮೆಯಿಂದ ಎಲ್ಲರಿಗೂ ಊಟ ಬಟ್ಟೆ ಸಿಕ್ಕುತ್ತದೆಂದೂ, ದೇಶದ ಅಭಿವೃದ್ಧಿ ಆಗುತ್ತದೆಂದೂ ಆದರೆ ಅವರ ದುಡಿಮೆಗೆ ತಕ್ಕ ಪ್ರತಿಫಲ ಸಿಕ್ಕುತ್ತಿಲ್ಲವೆಂದೂ, ಅವರು ನ್ಯಾಯವಾದ ಪ್ರತಿಫಲಕ್ಕಾಗಿ ಒಗ್ಗಟ್ಟಾಗಿ ಹೋರಾಡಬೇಕೆಂದೂ ಹೇಳುತ್ತಿದ್ದೆ. ಇದನ್ನು ಯಾರೂ ವಿರೋಧಿಸುತ್ತಿರಲಿಲ್ಲ. ಆದರೆ ಕಾರ್ಲ್‌ಮಾರ್ಕ್ಸ್ ಹೀಗೆ ಹೇಳಿದ್ದಾರೆ ಎಂದು ಹೇಳಲು ಹೋದರೆ ಕೆಲವರು ವಿರೋಧಿಸುತ್ತಿದ್ದರು. ಅದು ಪರದೇಶದವರ ವಿಚಾರ ಎಂದು ಬಿಟ್ಟುಬಿಡುತ್ತಿದ್ದರು.

1960ರ ವೇಳೆಗೆ ಕಾಂಗ್ರೆಸ್ ಪಕ್ಷವು ಬಂಡವಾಳಗಾರರ ಗ್ರಾಮೀಣ ಶ್ರೀಮಂತರ ಪಕ್ಷವೆಂದೂ ಆ ಪಕ್ಷವನ್ನು ಕಿತ್ತು ಹಾಕದೇ ದೇಶದ ಏಳಿಗೆಸಾಧ್ಯವಿಲ್ಲವೆಂಬ ತಿಳುವಳಿಕೆ ನನಗೆ ಬಂದಿದ್ದಿತು. ಆದರೆ ಕಮ್ಯುನಿಸ್ಟ್ ಪಕ್ಷವು ಕಾಂಗ್ರೆಸ್ಸನ್ನು ದೃಢವಾಗಿ ವಿರೋಧಿಸುತ್ತಿಲ್ಲ ಎಂಬ ಅನುಮಾನ ಬರಲು ಆರಂಭವಾಯಿತು.

ಆದ್ದರಿಂದ ನಗರಸಭೆಯಲ್ಲಿನ ಕೆಲಸ ಮುಗಿದ ಕೂಡಲೇ ಕಮ್ಯುನಿಸ್ಟ್ ಪಕ್ಷವನ್ನು ಸಂಪರ್ಕಿಸಲು ಹೋಗಲಿಲ್ಲ. ಅಲ್ಲದೆ 1960 ಮತ್ತು ಅದರ ನಂತರದ ವರ್ಷ ನನ್ನ ನಿರ್ಧಾರಕ್ಕೆ ಅನುಗುಣವಾಗಿ ನಡೆಯಲು ವಿವಿಧ ದಿಕ್ಕುಗಳಿಂದ ಪ್ರಭಲವಾದ ವಿರೋಧ ವ್ಯಕ್ತವಾಗತೊಡಗಿದವು.

1960ರ ಡಿಸೆಂಬರ್ ಕೊನೆಯಲ್ಲಿ ನನಗೆ ರಾಜ್ಯ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬೀದರ್ ಪಾಲಿಟೆಕ್ನಿಕ್‌ನಲ್ಲಿ ಒಂದು ಕೆಲಸ ಸಿಕ್ಕಿತು. 1961ರ ಜನವರಿಯಲ್ಲಿ ಬೀದರಿನಲ್ಲಿ ಕೆಲಸಕ್ಕೆ ಸೇರಿಕೊಂಡೆ. ಆಗ ಪಾಲಿಟೆಕ್ನಿಕ್‌ನಲ್ಲಿದ್ದ ಸಿಬ್ಬಂದಿಯಲ್ಲಿ ಹೆಚ್ಚಿನವರು ಬೆಂಗಳೂರು-ಮೈಸೂರು ಕಡೆಯವರಾಗಿದ್ದು ಅವರೆಲ್ಲಾ ಒಂದು ದೊಡ್ಡ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ವಾಸವಿದ್ದರು. ನಾನು ಅವರೊಂದಿಗೆ ಸೇರಿಕೊಂಡೆ. ವಿವಿಧ ಇಲಾಖೆಗಳಲ್ಲಿ ಬ್ಯಾಂಕುಗಳಲ್ಲಿ ಕೆಲಸ ಮಾಡುತ್ತಿದ್ದ ಬೆಂಗಳೂರು-ಮೈಸೂರಿನವರ ಪರಿಚಯವಾಯಿತು. ಅವರು ನಾವಿದ್ದ ಮನೆಗೆ ಆಗಾಗ್ಗೆಬರುತ್ತಿದ್ದರು. ಒಂದು ರಜಾ ದಿವಸ, ನನ್ನ ಜತೆಯಲ್ಲಿದ್ದವರೆಲ್ಲಾ ಎಲ್ಲೆಲ್ಲಿಗೋ ಹೋಗಿದ್ದರು. ನಾನು ಲೆನಿನ್ನರ 'ಕರ್ತವ್ಯವೇನು?' ಪುಸ್ತಕವನ್ನು ಓದುತ್ತಿದ್ದೆ. ನನ್ನ ಬದಿಯಲ್ಲಿ ಹತ್ತಿಪ್ಪತ್ತು ಪುಸ್ತಕಗಳಿದ್ದವು. ಅವುಗಳಲ್ಲಿ ಕಾರ್ಲ್‌ಮಾರ್ಕ್ಸ್‌ನ 'ಕ್ಯಾಪಿಟಲ್' ಎದ್ದು ಕಾಣುತ್ತಿತ್ತು. ನಾನು ಓದುತ್ತಿರುವಾಗ ಆಗ ಬೀದರ್‌ನಲ್ಲಿ ಪೋಲೀಸು ಇಲಾಖೆಯ ವೈರ್‌ಲೆಸ್ ಆಪರೇಟರ್‌ರೊಬ್ಬರು(ಅವರು ಬೆಂಗಳೂರಿನವರು) ಬಂದರು. ಬಂದು ಅಲ್ಲಿದ್ದ ಪುಸ್ತಕಗಳನ್ನು ಒಂದೊಂದಾಗಿ ತೆಗೆದುಕೊಂಡು ನೋಡಿದರು. ಅವುಗಳಲ್ಲಿ ಹೆಚ್ಚಿನವು ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾಗಿದ್ದಪುಸ್ತಕಗಳು. ಅನಂತರ ಅವರು ನನ್ನ ಕೈಯಲ್ಲಿದ್ದ ಪುಸ್ತಕವನ್ನು ತೆಗೆದುಕೊಂಡು ನೋಡಿದರು. ಅವರು ಒಂದು ಗಂಟೆಯ ಕಾಲ ಉಪದೇಶ ಮಾಡಿದರು. 'ಕಮ್ಯುನಿಸಂ', 'ಸೋವಿಯತ್ ರಷ್ಯ' ಎಷ್ಟು ಅಪಾಯಕಾರಿಯೆಂಬುದನ್ನು ಹೇಳಿ , ನನ್ನ ಭವಿಷ್ಯದ ದೃಷ್ಟಿಯಿಂದ ಆ ಪುಸ್ತಕಗಳನ್ನು ಓದುವುದನ್ನು ಬಿಡಬೇಕೆಂದು ಹೇಳಿದರು. ನಾನು ಅವರಿಗೆ ಏನೇ ಹೇಳಿದರೂ , ಎಷ್ಟೇ ಹೇಳಿದರೂ ಅವರು ಕೇಳಲಿಲ್ಲ, ಅವರು ಕಮ್ಯುನಿಸಂ ಮತ್ತು ಕಮ್ಯುನಿಸ್ಟ್ ಪಕ್ಷದ ವಿರುದ್ಧವಾಗಿ ತೀವ್ರವಾದ ವಿರೋಧವನ್ನು ಬೆಳೆಸಿಕೊಂಡು ಬಂದಿದ್ದರು.

(ಮುಂದುವರಿಯುವುದು)

ಪಂಜಾಬ್: ಮತ್ತೆ ಎಡಪಕ್ಷಗಳ ಮುತುವರ್ಜಿ

ಭಯೋತ್ಪಾದಕರು, ಧರ್ಮಾಂಧರು, ರಾಷ್ಟ್ರವಿರೋಧಿಗಳು ಹೀಗೆ ಎಲ್ಲವೂ ಆಗಿರುವ ಸಾಮ್ರಾಜ್ಯಶಾಹಿ ಶಕ್ತಿಗಳಿಂದ ಜರ್ಝರಿತವಾಗಿರುವ ನಾಡಾದ ಪಂಜಾಬ್ ಅದರ ಎಲ್ಲಾ ಅರ್ತಿ ಆತಂಕಗಳನ್ನು ಮೀರಿ ಸುಮಾರು 35,000 ಕ್ಕೂ ಹೆಚ್ಚು ಜನರು ದೇಶದ ರಾಜಧಾನಿಯಲ್ಲಿ ಆಗಸ್ಟ್ 27ರಂದು ಬೃಹತ್ ಪ್ರದರ್ಶನ ನಡೆಸಿದರು.(ಈ ಬಗ್ಗೆ ಸಂಕ್ಷಿಪ್ತ ಸುದ್ದಿ ಸೆಪ್ಟೆಂಬರ್ 2ರ ಸಂಚಿಕೆಯಲ್ಲಿ ಈಗಾಗಲೇ ಪ್ರಕಟವಾಗಿದೆ)- ಕಾರ್ಯಕ್ರಮದ ವರದಿ ಇಲ್ಲಿದೆ.

ದಿಲ್ಲಿ ಗೇಟ್ ಸಮೀಪದ ಫಿರೋಜ್ ಷಾ ಕೋಟ್ಲಾ ಮೈದಾನದಲ್ಲಿ 27ರ ಬೆಳಗ್ಗಿನಿಂದಲೇ ಮತ ಪ್ರದರ್ಶನಕಾರರು ಸೇರತೊಡಗಿದ್ದರು. ಪಂಜಾಬ್‌ನ ಎಲ್ಲಾ ಜಿಲ್ಲೆಗಳಿಂದ ಎಲ್ಲಾ ವಿಭಾಗಗಳ ಜನರು ಲಭ್ಯವಿದ್ದ ಎಲ್ಲಾ ಸಾರಿಗೆ ಸೌಕರ್ಯಗಳನ್ನು ಬಳಸಿಕೊಂಡು ಬಂದಿದ್ದರು. ಅವರಲ್ಲಿ ಭಾರಿ ಸಂಖ್ಯೆಯ ಮಹಿಳೆಯರು ಮತ್ತು ಮಕ್ಕಳೂ ಇದ್ದರು. ಭಯೋತ್ಪಾದನೆಯಿಂದ ಹೆಚ್ಚು ತೊಂದರೆಗೊಳಗಾಗಿರುವ ಅಮೃತಸರ ಮತ್ತು ಗುರುದಾಸಪುರ ಜಿಲ್ಲೆಗಳ ಕಾರ್ಮಿಕರು ತುಂಬಾ ಸಂಖ್ಯೆಯಲ್ಲಿ ಇದ್ದರು.

ಖಾಸಲಾತಿ ವಿರುದ್ಧ ಅಶಿಸ್ತಿನ, ವಿನಾಶಕಾರಿ ಮತ್ತು ಜನಜೀವನವನ್ನು ಅಸ್ತವ್ಯಸ್ತಗೊಳಿಸುತ್ತಿರುವ ಚಳುವಳಿ ಕಾಣುತ್ತಿರುವ ರಾಜಧಾನಿಯ ಜನ ಆಗಸ್ಟ್ 27 ರಂದು ಆಶ್ಚರ್ಯದ ದೃಶ್ಯಗಳನ್ನು ಕಂಡರು. ಕೆಂಬಾವುಟಗಳನ್ನು, ಬ್ಯಾನರ್‌ಗಳನ್ನು ಹಿಡಿದು ಪಂಜಾಬ್ ಸಮಸ್ಯೆ ಪರಿಹರಿಸುವಂತೆ ಘೋಷಣೆ ಕೂಗುತ್ತಿದ್ದ ಜನರು ಶಿಸ್ತುಬದ್ಧವಾಗಿ ಬೋಟ್ ಕ್ಲಬ್‌ನತ್ತ ಮೆರವಣಿಗೆ ನಡೆಸಿದರು. ಎರಡು ಕಮ್ಯುನಿಸ್ಟ್ ಪಕ್ಷಗಳು ನಡೆಸಿದ ಈ ಶಿಸ್ತುಬದ್ಧ ಮೆರವಣಿಗೆ ಸ್ಥಳೀಯ ಜನರ ಮೇಲೆ ಭಾರಿ ಪರಿಣಾಮ ಬೀರಿತು. ಬೋಟ್ ಕ್ಲಬ್ ತಲುಪಿದ ಮೇಲೆ ಅಲ್ಲಿ ಸಂಜೆ ತನಕ ಧರಣಿ ಸತ್ಯಾಗ್ರಹ ನಡೆಸಲಾಯಿತು.

ದೇಶದ ಐಕ್ಯತೆ ಸಮಗ್ರತೆ ರಕ್ಷಣೆಗೆ ಬದ್ಧರಾಗಿ ಬಂದ ಪಂಜಾಬ್‌ನ ಧೀರ ಸಂಗಾತಿಗಳನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಇ. ಎಂ.ಎಸ್. ನಂಬೂದರಿಪಾದ್ ಅಭಿನಂದಿಸಿದರು. ಸಾಮ್ರಾಜ್ಯಶಾಹಿ ಬೆಂಬಲಿತ ಖಲಿಸ್ತಾನಿ ಛಿದ್ರಕಾರಿಗಳ ದಾಳಿ ದಬ್ಬಾಳಿಕೆ ವಿರುದ್ಧ ಜನರ ಈ ಕಾರ್ಯಕ್ರಮವನ್ನು ಇಡೀ ದೇಶ ಹೆಮ್ಮೆಯಿಂದ ಗಮನಿಸುತ್ತಿದೆ ಎಂದು ಅವರು ಹೇಳಿದರು. ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯ ರಂಗ ಸರಕಾರ ದೇಶದ ಐಕ್ಯತೆ- ಸಮಗ್ರತೆಗೆ ಬದ್ಧವಾಗಿ ಪಂಜಾಬ್ ಮತ್ತು ಇತರ ಸಮಸ್ಯೆಗಳ ಇತ್ಯರ್ಥಕ್ಕೆ ಹಲವಾರು ಕ್ರಮಗಳನ್ನು ಕೈಗೊಂಡಿದೆ ಆದರೂ ಪಂಜಾಬ್ ಪರಿಸ್ಥಿತಿಯಲ್ಲಿ ಏನೂ ಬದಲಾಗಿಲ್ಲ ಎಂದು ಇ.ಎಂ.ಎಸ್. ವಿಷಾದಿಸಿದರು. ಕಿತ್ತು ತಿನ್ನುತ್ತಿರುವ ಅನೇಕ ಸಮಸ್ಯೆಗಳಿಗೆ ಇನ್ನೂ ರಾಜಕೀಯ ಇತ್ಯರ್ಥ ಕಂಡಕೊಳ್ಳಬೇಕಾಗಿದೆ ಎಂದು ಹೇಳಿದರು.

ಪಂಜಾಬ್‌ನಲ್ಲಿ ಈಗಿರುವ ಪರಿಸ್ಥಿತಿ, ರಾಜ್ಯದಲ್ಲಿ ಎರಡು ಕಮ್ಯುನಿಸ್ಟ್ ಪಕ್ಷಗಳ ಧೀರ ಹೋರಾಟ ಮೊದಲಾದುವುಗಳನ್ನು ಪಾಲಿಟ್‌ಬ್ಯುರೋ ಸದಸ್ಯ ಹರ್‌ಕಿಶನ್ ಸಿಂಗ್ ಸುರ್ಜೀತ್ ವಿವರಿಸಿದರು. ನಮ್ಮ ದೇಶದ ವಿರುದ್ಧದ ವಿದೇಶಿ ಪಿತೂರಿಗಳ ಬಗ್ಗೆ ಸಿಪಿಐ, ಸಿಪಿಐ(ಎಂ) ಹಿಂದಿನ ಮತ್ತು ಈಗಿನ ಸರಕಾರಗಳಿಗೆ ಎಚ್ಚರಿಕೆ ನೀಡುತ್ತಾ ಬಂದಿವೆ. ಈ ಪಕ್ಷಗಳ ನೂರಾರು ಅಮೂಲ್ಯ ಕಾರ್ಯಕರ್ತರು ಪ್ರತ್ಯೇಕವಾದಿಗಳ ಗುಂಡಿಗೆ ಬಲಿಯಾಗುತ್ತಿದ್ದರೂ ಈ ಎಚ್ಚರಿಕೆಗಳಿಗೆ ಸರಕಾರ ಕಿವಿಗೊಡುತ್ತಿಲ್ಲ ಎಂದು ಸುರ್ಜೀತ್ ಟೀಕಿಸಿದರು.

ಪಂಜಾಬ್ ಜನತೆಯ ಈ ಅಮೂಲ್ಯ ಉದ್ದೇಶದ ಧರಣಿಯಲ್ಲಿ ಸಿಪಿಐ(ಎಂ) ಸಂಸತ್ ಸದಸ್ಯರಾದ ಬಸುದೇವ ಆಚಾರ್ಯ, ಹನನ್ ಮುಲ್ಲಾ, ಸುಕೊಮಲ್ ಸೇನ್, ಮಹಮದ್ ಅಮಿನ್, ಶೇವೋಪತ್ ಸಿಂಗ್,ಡಾ.ಅಸಿಮ್ ಬಾಲ, ಎ.ವಿ.ಜಯರಾಘವನ್, ರಾಮಚಂದ್ರ ಡೋಮ್, ಪಕ್ಷದ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸೀತಾರಾಮ್ ಯೆಚುರಿ, ಜನತಾದಳದ ಪ್ರಧಾನ ಕಾರ್ಯದರ್ಶಿ ಯಶವಂತ ಸಿನ್ಹ ಮೊದಲಾದವರು ಭಾಗವಹಿಸಿದ್ದರು.

ಸಿಪಿಐ(ಎಂ) ಪಂಜಾಬ್ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಗತ್ ರಾಮ್‌ಪಾಲ್ಸ, ಪಕ್ಷದ ಮುಖಂಡ ಚಾಂದ್ ಸಿಂಗ್ ಚೋಪ್ರಾ, ಬಲವಂತ್ ಸಿಂಗ್, ಸಿಪಿಐ ನಾಯಕರಾದ ಎಂ. ಫರೂಕಿ, ಅವತಾರ್ ಸಿಂಗ್ ಮಲ್ಹೋತ್ರ, ರುಲ್ದು ಖಾನ್ ಮೊದಲಾದವರು ಮತಪ್ರದರ್ಶಕಾರರನ್ನುದ್ದೇಶಿಸಿ ಮಾತನಾಡಿದರು. ಉಭಯ ಪಕ್ಷಗಳ ನಾಯಕರನ್ನೊಳಗೊಂಡ ನಿಯೋಗವೊಂದು ಪ್ರಧಾನಿಯವರನ್ನು ಭೇಟಿಯಾಗಿ ಮನವಿ ಸಲ್ಲಿಸಿತು.

ಮಾನ್ ಬಣ್ಣ ಬಯಲು

ಆಗಸ್ಟ್ 28ರಂದು ಅಕಾಲಿ ದಳ(-ಮಾನ್)ದ ಕಾರ್ಯಕಾರಿ ಸಮಿತಿ ಕೈಗೊಂಡ ನಿರ್ಣಯದಿಂದ ಆ ಪಕ್ಷದ ನಾಯಕ ಸಿಮ್ರಾನ್ ಜಿತ್ ಸಿಂಗ್ ಮಾನ್ ಮತ್ತು ಅವರ ಸಹವರ್ತಿಗಳ ಬಣ್ಣ ಏನೆಂದು ತಿಳಿದು ಬರುತ್ತದೆ ಎಂದು ಸಿಪಿಐ(ಎಂ) ಪಾಲಿಟ್ ಬ್ಯುರೋ ತಿಳಿಸಿದೆ. ದೇಶದ ಐಕ್ಯತೆಗೆ ಅಪಾಯ ತರುವ ಉಗ್ರಗಾಮಿಗಳ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವಂಥ ಹೇಳಿಕೆಗಳನ್ನು ಎಸ್.ಎಸ್. ಮಾನ್ ಮತ್ತು ಆತನ ಪಕ್ಷ ಸಂಪೂರ್ಣ ಶರಣಾಗತವಾಗಿದೆ.

ಅಮೃತಸರದಲ್ಲಿ ನಡೆದ ಈ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯ ಪಂಜಾಬ್‌ನಲ್ಲಿ ಚುನಾವಣೆಗಳನ್ನು ನಡೆಸುವುದಕ್ಕೆ ವಿರೋಧ ಸೂಚಿಸಿದೆ. ಅದರ ಬದಲು ಸಿಖ್ಖರ ಸ್ವಯಂ ನಿರ್ಣಯಾಧಿಕಾರವನ್ನು ನಿರ್ಣಯಿಸಲು 'ವಿಶ್ವ ಸಂಸ್ಥೆ'ಯ ಆಶ್ರಯದಲ್ಲಿ ಚುನಾವಣೆಗಳನ್ನು ನಡೆಸಬೇಕೆಂದು ನಿರ್ಣಯ ಕರೆ ನೀಡಿದೆ. ಭಾರತದ ಸಂವಿಧಾನದ ಚೌಕಟ್ಟಿನಲ್ಲಿಪಂಜಾಬ್ ಸಮಸ್ಯೆಗಳಿಗೆ ಪರಿಹಾರ ಕಂಡಕೊಳ್ಳಲು ಅವಕಾಶ ಇಲ್ಲ ಎಂದು ಅದು ಹೇಳಿದೆ.

ವಿಚ್ಛಿದ್ರಕಾರಿ ಶಕ್ತಿಗಳ ಇಂಥ ಪ್ರಯತ್ನವನ್ನು ಖಂಡಿಸಬೇಕು ಮತ್ತು ಪಾಕಿಸ್ತಾನದ ಬೆಂಬಲವಿರುವ ಈ ಭಯೋತ್ಪಾದಕರ ಪ್ರಯತ್ನಗಳಿಗ ಬೀಳಬಾರದೆಂದು ಪಾಲಿಟ್ ಬ್ಯುರೋ , ಪಂಜಾಬ್ ಜನರಿಗೆ ಮನವಿ ಮಾಡಿದೆ

ಎಬಿವಿಪಿ ಗೆ ಎಸ್‌ಎಫ್‌ಐ ಪ್ರತಿ ಚಳುವಳಿ

ಸಂವಿಧಾನದ 370 ನೇ ವಿಧಿಯನ್ನು ತೆಗೆದುಹಾಕಬೇಕೆಂದು ಒತ್ತಾಯಿಸಲು ಆಗಸ್ಟ್ 2 2ರಂದು ದೇಶಾದ್ಯಂತ ಮುಷ್ಕರ ನಡೆಸಲು ವಿದ್ಯಾರ್ಥಿಗಳಿಗೆ ಎಬಿವಿಪಿ ಕರೆ ನೀಡಿತ್ತು. 'ಕಾಶ್ಮೀರ ರಕ್ಷಿಸುವ' ಹೆಸರಿನಲ್ಲಿ ಅದು ಕ್ರಿಯೆಗೆ ಇಳಿದಿತ್ತು. ವಿದ್ಯಾರ್ಥಿಗಳ ನಡುವೆ ಕೋಮುವಾದ ಹರಡಲು ನಡೆಸಿದ ಈ ಯತ್ನವನ್ನು ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳು ಮುಖ್ಯವಾಗಿ ಎಸ್‌ಎಫ್‌ಐ ವಿರೋಧಿಸಿದ್ದವು.

ಬಿಜೆಪಿ-ಆರ್‌ಎಸ್‌ಎಸ್ ನೇತೃತ್ವದ ಈ 22ರ ಮುಷ್ಕರವನ್ನು ಮಧ್ಯಪ್ರದೇಶದಲ್ಲಿ ವಿರೋಧಿಸಲು ಅಲ್ಲಿನ ಎಸ್‌ಎಫ್‌ಐ ಸಕ್ರಿಯ ಚಟುವಟಿಕೆಗಳನ್ನು ನಡೆಸಿತು. ಮಧ್ಯಪ್ರದೇಶದ ಬಿಜೆಪಿ ಸರಕಾರ ಅಧಿಕಾರ ದುರುಪಯೋಗ ಮಾಡುವುದನ್ನು ಸ್ಪಷ್ಟವಾಗಿ ವಿರೋಧಿಸಿತು.

ಎಸ್‌ಎಫ್‌ಐ ಜಬಲ್ಪುರ ಜಿಲ್ಲಾ ಸಮಿತಿ ವಿವಿಧ ಶಿಕ್ಷಣ ಸಂಸ್ಥೆಗಳು, ಹಾಸ್ಟಲುಗಳಲ್ಲಿ ವಿಚಾರ ಸಂಕಿರಣಗಳು, ಮುಕ್ತ ಚರ್ಚೆಗಳನ್ನು ನಡೆಸಿತು. ವಿ.ವಿ. ಕ್ಯಾಂಪಸ್, ಜಿಲ್ಲಾ ನ್ಯಾಯಾಲಯದಲ್ಲೂ ಅದನ್ನು ಏರ್ಪಡಿಸಿತ್ತು. ರಾಜ್ಯ ಎಸ್‌ಎಫ್‌ಐ ಕಾರ್ಯದರ್ಶಿ ಸತ್ಯ ಪಾಲ್ ಮುಖ್ಯ ಭಾಷಣಕಾರರಾಗಿದ್ದರು. 10,000 ಕ್ಕೂ ಹೆಚ್ಚು ಕರಪತ್ರಗಳನ್ನು ವಿತರಿಸಲಾಯಿತು.

ಅನೇಕ ಲೇಖಕರು, ಬುದ್ಧಿಜೀವಿಗಳು ಮತ್ತು ವೃತ್ತಿಪರರಿಂದ ಸಹಿಸಂಗ್ರಹಿಸಿತು. ಈ ವ್ಯಕ್ತಿಗಳು ಸಂಯುಕ್ತ ಹೇಳಿಕೆಯೊಂದನ್ನು ನೀಡಿದರು. ಕಾಶ್ಮೀರದಲ್ಲಿ ಕೈಗೊಂಬೆ ಸರಕಾರಗಳು ಹಸ್ತಕ್ಷೇಪ ನಡೆಸುತ್ತಿರುವ ಬಗ್ಗೆ ಮತ್ತು ಭಾರತದೊಳಗೆ ಕೋಮುವಾದಿ ಛಿದ್ರಕಾರಿ ಶಕ್ತಿಗಳು ಕೋಮುಘರ್ಷಣೆಗೆ ನಡೆಸಿದ ಪ್ರಯತ್ನಗಳ ಕುರಿತು ಜನರು ಎಚ್ಚರದಿಂದಿರಬೇಕೆಂದು ಅವರು ಕರೆ ನೀಡಿದರು.

ವಿಮಾ ನೌಕರರ ಮುಖಂಡ ಲಕ್ಷ್ಮೀಕಾಂತರವರಿಗೆ ಶ್ರದ್ಧಾಂಜಲಿ

ಬೆಂಗಳೂರು ವಿಭಾಗ ವಿಮಾ ಕಾರ್ಪೋರೇಷನ್ ನೌಕರರ ಸಂಘದ ಅಧ್ಯಕ್ಷ ಎನ್.ಆರ್. ಲಕ್ಷ್ಮೀಕಾಂತ ಆಗಸ್ಟ್ 27 ರಂದು ನಿಧನರಾದರು. ಅವರಿಗೆ 49 ವರ್ಷ ವಯಸ್ಸಾಗಿತ್ತು.

ಮರುದಿನ ಎಲ್.ಐ.ಸಿ. ವಿಭಾಗ ಕಚೇರಿಯಲ್ಲಿ ನಡೆದ ಸಂತಾಪ ಸಭೆಯಲ್ಲಿ ತಮ್ಮ ಪ್ರೀತಿಯ ಮುಖಂಡನ ಅಕಾಲಿಕ ಮರಣದ ಸುದ್ದಿ ಕೇಳಿ ಶೋಕತಪ್ತರಾದ ನೂರಾರು ಎಲ್.ಐ.ಸಿ. ನೌಕರರಲ್ಲದೆ ಇತರ ನೌಕರ ಸಂಘಟನೆಗಳ ಪ್ರತಿನಿಧಿಗಳೂ ಭಾಗವಹಿಸಿದ್ದರು. ಎರಡು ದಶಕಗಳಿಗೂ ಹೆಚ್ಚು ಕಾಲ ವಿಮಾ ನೌಕರರ ಆಂದೋಲನದಲ್ಲಿ ದುಡಿದು ತಮ್ಮೆಲ್ಲ ಸಂಗಾತಿಗಳ ಅತ್ಯಂತ ಪ್ರೀತಿ ಪಾತ್ರ ಸಂಗಾತಿ ಹಾಗೂ ಮುಖಂಡರಾಗಿ ಬೆಳೆದಿದ್ದವರು. ಕಾಂ.ಲಕ್ಷ್ಮೀಕಾಂತ ಎಂದು ದಕ್ಷಿಣ ಮಧ್ಯವಲಯ ವಿಮಾ ನೌಕರರ ಒಕ್ಕೂಟದ ಅಧ್ಯಕ್ಷ ಹಾಗೂ ಸಿಐಟಿಯು. ಮುಖಂಡ ಕೆ.ವಿ. ಶ್ರೀನಿವಾಸನ್, ವಿಮಾ ಕಾರ್ಪೋರೇಷನ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಅಮಾನುಲ್ಲಾ ಖಾನ್‌ರಲ್ಲದೆ ಎಲ್.ಐ.ಸಿ.ಯ ವಿವಿಧ ವಿಭಾಗಗಳ ಸಂಘಟನೆಗಳ ಪ್ರತಿನಿಧಿಗಳೂ ತಮ್ಮ ಶ್ರದ್ಧಾಂಜಲಿ ಅರ್ಪಿಸಿದರು. ದುಡಿಯುವ ಜನಗಳ ಯಾವುದೇ ಹೋರಾಟಕ್ಕೂ, ಪ್ರಜಾಪ್ರಭುತ್ವವಾದೀ ಜನ ವಿಭಾಗಗಳ ಯಾವುದೇ ಆಂದೋಲನಕ್ಕೂ ಲಕ್ಷ್ಮೀಕಾಂತರವರ ಸಂಪೂರ್ಣ ನೆರವು, ಬೆಂಬಲ ಸಿಗುತ್ತಿತ್ತೆಂದು ಸ್ಪಿಕೋ ಕಾರ್ಮಿಕರ ಮುಖಂಡರಾದ ವೀರಸ್ವಾಮಿಯವರು ಹಾಗೂ ಬಿ.ಇ.ಎಫ್.ಐ. ಮುಖಂಡರಾದ ಬಾಲಕೃಷ್ಣಶೆಟ್ಟಿಯವರು ನೆನಪಿಸಿಕೊಳ್ಳುತ್ತಾ ಶ್ರದ್ಧಾಂಜಲಿ ಅರ್ಪಿಸಿದರು. ದುಡಿಯುವ ಜನರ ಹಿತಾಸಕ್ತಿ ಕಾಪಾಡುವ ವ್ಯವಸ್ಥೆಗಾಗಿ ತನ್ನನ್ನು ಮುಡಿಪಿಟ್ಟ ಬೆಂಗಳೂರು ದುಡಿಯುವ ಜನ ವಿಭಾಗದ ಧೀರ ಪುತ್ರನನ್ನು ಕಳಕೊಂಡಿದ್ದೇವೆ ಎಂದು ಶ್ರದ್ಧಾಂಜಲಿ ಅರ್ಪಿಸಲಾಯಿತು.

ಇದಕ್ಕೆ ಮೊದಲು ಅಗಲಿದ ಮುಖಂಡನ ಅಂತಿಮ ಯಾತ್ರೆ ಎಲ್.ಐ.ಸಿ. ವಿಭಾಗ ಕಚೇರಿ ತಲುಪಿದಾಗ ನೂರಾರು ನೌಕರರು ತಮ್ಮ ಅಂತಿಮ ಗೌರವ ಸಲ್ಲಿಸಿದರು.

ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಎಸ್.ಆರ್.ಆರಾಧ್ಯರವರು ಮೃತರ ಮನೆಗೆ ಭೇಟಿಯಿತ್ತು ಶ್ರದ್ಧಾಂಜಲಿ ಅರ್ಪಿಸಿದರು. ರಿಝರ್ವ್ ಬ್ಯಾಂಕ್ ನೌಕರರ ಮುಖಂಡರು, ಎ.ಐ.ಟಿ. ಯು.ಸಿ. ಮುಖಂಡರಾದ ಅನಂತ ಸುಬ್ಬರಾವ್ ಅಂತಿಮ ಸಂಸ್ಕಾರದ ಸಂದರ್ಭದಲ್ಲಿ ಹಾಜರಿದ್ದು ಶ್ರದ್ಧಾಂಜಲಿ ಅರ್ಪಿಸಿದರು.

ಎಲ್.ಐ.ಸಿ. ನೌಕರರ ಪ್ರೀತಿ ಪಾತ್ರ ಮುಖಂಡರಷ್ಟೆ ಅಲ್ಲದೇ ದೇಶದ ಎಡ ಆಂದೋಲನದ ಬಗ್ಗೆ ಅಪಾರ ಅಭಿಮಾನವುಳ್ಳವರೂ, ದೇಶದ ಟ್ರೇಡ್‌ಯೂನಿಯನ್ ರಂಗದಲ್ಲಿ ಅರವತ್ತರ ದಶಕದಲ್ಲಿ ಪರಿಷ್ಕರಣವಾದದ ಕರಿನೆರಳು ಆವರಿಸಿ ದುಡಿಯುವ ಜನಗಳ ಸಮರ ಶೀಲತೆಯನ್ನು ಕುಂಠಿತ ಗೊಳಿಸಿದಾಗ, ವಿಮಾ ನೌಕರರ ಆಂದೋಲನದಲ್ಲೂ ಕಾಲಿಡಲು ಅದು ಪ್ರಯತ್ನಿಸಿದಾಗ ಅದರ ವಿರುದ್ಧ ಯಶಸ್ವೀ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ್ದ ಕಾಂ.ಲಕ್ಷ್ಮೀಕಾಂತ ಸಿ.ಪಿ.ಐ.(ಎಂ)ನ ಹಿತೈಷಿಗಳಾಗಿದ್ದರು.

ಬಿ.ಇ.ಎಫ್.ಐ. ಮೂರನೇ ಸಮ್ಮೇಳನ

'ಬ್ಯಾಂಕು ರಾಷ್ಟ್ರೀಕರಣದ ಬಳಿಕವೂ ಬ್ಯಾಂಕಿಂಗ್ ನೀತಿ ಬದಲಾಗಿಲ್ಲ, ಕಾಂಗ್ರೆಸ್ಸನ್ನು ಕಿತ್ತೊಗೆದು ರಾಷ್ಟ್ರೀಯ ರಂಗ ಅಧಿಕಾರಕ್ಕೆ ಬಂದರೂ ನೀತಿಯಲ್ಲಿ ಬದಲಾವಣೆಯಾಗಿಲ್ಲ. ಬಡಜನರ ಪರವಾದ, ಹೆಚ್ಚಿಗೆ ಉದ್ಯೋಗವಕಾಶಗಳನ್ನು ನಿರ್ಮಿಸುವ ಪರ್ಯಾಯ ಬ್ಯಾಂಕಿಂಗ್ ನೀತಿಗಾಗಿ ಬಿ.ಇ.ಎಫ್.ಐ. ಹೋರಾಡಬೇಕು' ಎಂದು ಸಿಐಟಿಯು ಕಾರ್ಯದರ್ಶಿ ಡಾ. ಎಂ.ಕೆ. ಪಂಢೆ ಮದ್ರಾಸಿನಲ್ಲಿ ಹೇಳಿದ್ದಾರೆ. ಅವರು ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ ಆಫ್ ಇಂಡಿಯಾ(ಬಿ.ಇ.ಎಫ್.ಐ.)ನ ಮೂರು ದಿನಗಳ 3ನೇ ಅಖಿಲ ಭಾರತ ಸಮ್ಮೇಳನವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ಸಮ್ಮೇಳನದ ಅಂಗವಾಗಿ ಬ್ಯಾಂಕ್ ನೌಕರರ ಬೃಹತ್ ಮೆರವಣಿಗೆ ನಡೆಯಿತು. ನಂತರ ನಡೆದ ತೆರೆದ ಅಧಿವೇಶನದಲ್ಲಿ ಸಿಪಿಐ(ಎಂ) ಸಂಸತ್ ಸದಸ್ಯ ಇ. ಬಾಲಾನಂದನ್, ತಮಿಳುನಾಡು ಆಹಾರ ಮಂತ್ರಿ ಶ್ರೀ ಪೊನ್ ಮತ್ತು ರಾಮಲಿಂಗಂ ಹಾಗೂ ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಹಣಕಾಸು ಮಂತ್ರಿ ಡಾ.ಅಶೀಮ್ ದಾಸ್ ಗುಪ್ತಮಾತನಾಡಿದರು.

'ಸಂಬಳದಾರರ ಸಮಸ್ಯೆಗಳು' ಎಂಬ ಬಗ್ಗೆ ನಡೆದ ವಿಚಾರಸಂಕಿರಣ 'ಹಿಂದೂ' ಪತ್ರಿಕೆಯ ಸಹ ಸಂಪಾದಕ ಎನ್.ರಾಮ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಖಿಲ ಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಎಂ.ಸುಂದರಂ, ಭಾರತೀದಾಸನ್ ವಿಶ್ವವಿದ್ಯಾಲಯದ ರೀಡರ್ ಡಾ. ವೆಂಕಟೇಶ ಆತ್ರೇಯ, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಮೈಥಿಲಿ ಶಿವರಾಮನ್ ಇದರಲ್ಲಿ ಭಾಗವಹಿಸಿದ್ದರು.

ಗಲಭೆ ಪೀಡಿತ ಪ್ರದೇಶಗಳಲ್ಲಿರುವ ಬ್ಯಾಂಕ್ ನೌಕರರ ಭದ್ರತೆ, ಮಹಿಳಾ ನೌಕರರ ಸಮಸ್ಯೆಗಳು, ಬ್ಯಾಂಕಿಂಗ್ ಉದ್ದಿಮೆಯಲ್ಲಿ ಅಸ್ತಿತ್ವದಲ್ಲಿರುವ ಅನಾರೋಗ್ಯಕರ ಪರಿಸ್ಥಿತಿ ಇತ್ಯಾದಿಗಳ ಕುರಿತು ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. ಕೆಲಸದ ಹಕ್ಕು ಮೂಲಭೂತ ಹಕ್ಕಾಗಬೇಕೆಂದೂ, ಎಲ್ಲರಿಗೂ ಬೋನಸ್ ಸಿಗಬೇಕೆಂದೂ ಸಮ್ಮೇಳನ ಒತ್ತಾಯಿಸಿತು. ಉದ್ದಿಮೆಯಲ್ಲಾದ ಇತ್ತೀಚಿನ ವೇತನಒಪ್ಪಂದವನ್ನು ತಿರಸ್ಕರಿಸಿದ ಸಮ್ಮೇಳನ ನೌಕರರ ಸೇವಾ ನಿಯಮಗಳ ಕುರಿತು ಮಾತುಕತೆಗೆ ಬಿ.ಇ.-ಎಫ್.ಐ. ಯನ್ನು ಕರೆಯಬೇಕೆಂದು ಒತ್ತಾಯಿಸಿತು. ನರೇಶ್ ಪಾಲ್‌ರನ್ನು ಅಧ್ಯಕ್ಷರನ್ನಾಗಿಯೂ, ಅಶೀಸ್ ಸೇನ್ ರವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಯೂ ಸಮ್ಮೇಳನ ಪುನರಾಯ್ಕೆ ಮಾಡಿತು.

ಬ್ಯಾಂಕ್ ಎಂಪ್ಲಾಯಿಸ್ ಆರ್ಟ್ ಟ್ರೂಪ್(ಬೀಟ್) ಸಮ್ಮೇಳನದ ಅವಧಿಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿತು.

ಹಿರೋಷಿಮಾ ದಿನಾಚರಣೆ

ಡಿವೈಎಫ್‌ಐ ಕುಪ್ಪೆಪದವು ಘಟಕ ಆಗಸ್ಟ್ 9ರಂದು ಹಿರೋಷಿಮಾ-ನಾಗಾಸಾಕಿ ದಿನಾಚರಣೆ ನಡೆಸಿ 45 ವರ್ಷಗಳ ಹಿಂದೆ ಇಡೀ ವಿಶ್ವವನ್ನೇ ನಡುಗಿಸಿದ ಆ ದಿನಗಳನ್ನು ನೆನಪಿಸಿ ಯುವಜನರಲ್ಲಿ ಶಾಂತಿಯ ಅಗತ್ಯವನ್ನು ಮನಗಾಣಿಸಲು ಪ್ರಯತ್ನಿಸಲಾಯಿತು. ಸಿಪಿಐ(ಎಂ) ಗುರುಪುರ ಪ್ರದೇಶ ಸಮಿತಿ ಸದಸ್ಯ ವಾಸುದೇವ ಆಚಾರಿ ಹಾಗೂ ಕುಪ್ಪೆಪದವು ಶಾಖಾ ಕಾರ್ಯದರ್ಶಿ ಸದಾಶಿವದಾಸ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ರೈತಸಂಘದ ಕುಪ್ಪೆಪದವು ಘಟಕದ ಅಧ್ಯಕ್ಷ ದೂಮಣ್ಣ ಪೂಜಾರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಡಿವೈಎಫ್‌ಐ ಘಟಕದ ಅಧ್ಯಕ್ಷ ಭಾಸ್ಕರ ಆಚಾರಿ ಸ್ವಾಗತಿಸಿದರು. ಘಟಕದ ಕಾರ್ಯದರ್ಶಿ ಎಸ್.ಎ.ಹಸನಬ್ಬ ವಂದಿಸಿದರು.

ಸಂಕ್ಷಿಪ್ತ ಸುದ್ದಿಗಳು

ಶ್ರೀರಾಮನ ರಕ್ಷಣೆ ಬಿಜೆಪಿ ಶೈಲಿ

ದೇಶದಲ್ಲಿ ಕೋಮು ಘರ್ಷಣೆ ಸೃಷ್ಟಿಸಲು ಪ್ರಯತ್ನಿಸುತ್ತಿರುವ ಆರ್‌ಎಸ್‌ಎಸ್-ವಿಶ್ವ ಹಿಂದೂ ಪರಿಷತ್-ಬಿಜೆಪಿ-ಭಜರಂಗ ದಳ ಇತ್ಯಾದಿಗಳನ್ನೊಳಗೊಂಡ ದುಷ್ಟಕೂಟ ಉತ್ತರ ಪ್ರದೇಶ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್‌ರ ದೃಢ ನಿಲುವಿನಿಂದಾಗಿ ಕಂಗೆಟ್ಟಿದೆ. ಅದರಿಂದಾಗಿ ಈ ಕೂಟ ಈಗ ಮುಲಾಯಂ ಸಿಂಗ್‌ರ ಮೇಲೆ ದಾಳಿ ನಡೆಸುವ ಹೀನಮಟ್ಟಕ್ಕೂ ಇಳಿದಿದೆ.

ಸೆಪ್ಟೆಂಬರ್ 2ರಂದು ಆಂಧ್ರ ಪ್ರದೇಶದಲ್ಲಿ ಕೋಮುವಾದ ವಿರೋಧಿ ಕಾರ್ಯಕ್ರಮದಲ್ಲಿ ಭಾಗವಹಿಸಲು ತೆರಳುತ್ತಿದ್ದ ಮುಲಾಯಂ ಸಿಂಗ್‌ರ ಮೇಲೆ(ಹೈದಾರಾಬಾದ್‌ನಲ್ಲಿ) ಬಿಜೆಪಿ ಕಾರ್ಯಕರ್ತರು ಆಕ್ರಮಣ ನಡೆಸಿದಾಗ ಅವರಿಗ ಸಣ್ಣ ಪುಟ್ಟ ಗಾಯಗಳಾದವು.

ಮುಖ್ಯಮಂತ್ರಿ ಯಾದವ್ ಹಾಗೂ ಅವರ ಜತೆ ಬರುತ್ತಿದ್ದ ವಾಹನಗಳನ್ನು ಘೇರಾವೋ ಮಾಡಿದ ಬಿಜೆಪಿ ಕಾರ್ಯಕರ್ತರು ಯಾದವ್ ಕಾರಿನ ಮೇಲೆ ಕಬ್ಬಿಣದ ಸರಳುಗಳು ಮತ್ತು ಲಾಠಿಗಳಿಂದ ದಾಳಿ ಮಾಡಿದರೆಂದು ವರದಿಗಳು ತಿಳಿಸಿವೆ.

* ಸಿಐಟಿಯು ಬಿಹಾರ ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜಧಾನಿ ಪಾಟ್ನಾದಲ್ಲಿ ಇತ್ತೀಚೆಗೆ ಕೈಗಾರಿಕೆ ಮತ್ತು ಕೃಷಿ ಕಾರ್ಮಿಕರ ಬೃಹತ್ ಪ್ರದರ್ಶನ ನಡೆಯಿತು. ಮುಖ್ಯಮಂತ್ರಿ ಮನೆಯತ್ತ ತೆರಳಿದ ಮೆರವಣಿಗೆಗಾರರನ್ನು ಪೋಲೀಸರು ದ್ವಾರದಲ್ಲೇ ತಡೆದರು. ಸಿಐಟಿಯು ಕೇಂದ್ರ ಸಮಿತಿ ಕಾರ್ಯದರ್ಶಿ ಡಾ.ಎಂ.ಕೆ. ಪಂಢೆ, ರಾಜ್ಯ ಪ್ರಾಧನ ಕಾರ್ಯದರ್ಶಿ ಚಾಂದಿ ಪ್ರಸಾದ್ ಮೊದಲಾದವರು ನೇತೃತ್ವ ವಹಿಸಿದ್ದರು. ಬೆಲೆಯೇರಿಕೆ ತಡೆಗಟ್ಟಬೇಕು, ರೇಷನ್ ಅಂಗಡಿಗಳ ಮೂಲಕ ಅವಶ್ಯಕ ಸಾಮಗ್ರಿಗಳನ್ನು ಒದಗಿಸಬೇಕು, ಹೊಸ ಕೈಗಾರಿಕಾ ನೀತಿಯ ಹಿಂತೆಗೆತ, ದಿನಗೂಲಿಗಳಿಗೆ ಕನಿಷ್ಠ 30ರೂ. ವೇತನ, ಕೃಷಿ ಕಾರ್ಮಿಕರಿಗೆ ಕನಿಷ್ಠ 20 ರೂ.ವೇತನ ಮತ್ತು ದಿನಕ್ಕೊಂದು ಊಟ ಮೊದಲಾದುವು ಸಿಐಟಿಯು ಬೇಡಿಕೆಗಳಾಗಿದ್ದವು.

ಸಿಐಟಿಯು ಅಖಿಲ ಭಾರತ ಜನರಲ್ ಕೌನ್ಸಿಲ್ ಕರೆಯಮೇರೆಗೆ ರಾಜ್ಯದ ಎಲ್ಲಾ ಜಿಲ್ಲಾಕೇಂದ್ರಗಳಲ್ಲಿ ಬೆಲೆಯೇರಿಕೆ ವಿರುದ್ಧ ಧರಣಿ ಸತ್ಯಾಗ್ರಹಗಳನ್ನು ನಡೆಸಲಾಯಿತು.

* **ಉದ್ಯೋಗದ ಹಕ್ಕಿನ ಸಮಾವೇಶ:** ಉದ್ಯೋಗ ಹಕ್ಕು ಕುರಿತಂತೆ ಟ್ರೇಡ್ ಯೂನಿಯನ್‌ಗಳ ಬಿಹಾರ ರಾಜ್ಯ ಮಟ್ಟದ ಸಮಾವೇಶವೊಂದು ಆಗಸ್ಟ್ 11ರಂದು ನಡೆಯಿತು. ಎಂ.ಕೆ.ಪಂಢೆ ಉದ್ಘಾಟಿಸಿದರು.

ರಿಸರ್ವ್ ಬ್ಯಾಂಕ್ ನೌಕರರ ಧರಣಿ

ಮೂರು ವರ್ಷಗಳ ಹಿಂದೆ 1987ರಲ್ಲಿ ತಮ್ಮ ಮೂವರು ಮುಖಂಡರುಗಳನ್ನು ಅಮಾನತ್ತಿನಲ್ಲಿಟ್ಟಿದ್ದನ್ನು ವಿರೋಧಿಸಿ ರಿಸರ್ವ್ ಬ್ಯಾಂಕ್ ನೌಕರರು 41 ದಿನಗಳ ಮುಷ್ಕರ ನಡೆಸಿ ರಾಜ್ಯದ ಮಧ್ಯಮ ವರ್ಗದ ನೌಕರರ ಆಂದೋಲನದಲ್ಲಿ ಹೊಸದೊಂದು ಅಧ್ಯಾಯವನ್ನೇ ಆರಂಭಿಸಿದರು. ಮುಷ್ಕರದ ಅಂತ್ಯದಲ್ಲಿ ಆಡಳಿತ ವರ್ಗ ನೀಡಿದ ಭರವಸೆಗೆ ವಿರುದ್ಧವಾಗಿ ಈಗ ಇಬ್ಬರು ಮುಖಂಡರನ್ನು ವಜಾ ಮಾಡುವ, ಒಬ್ಬರಿಗೆ ಹಿಂಬಡ್ತಿ ನೀಡಿ ಶಿಕ್ಷಿಸುವ ಸೂಚನೆಯನ್ನು ನೀಡಿರುವುದನ್ನು ವಿರೋಧಿಸಿ ಅಖಿಲ ಭಾರತ ರಿಸರ್ವ್ ಬ್ಯಾಂಕ್ ನೌಕರರ ಸಂಘದ ಕರೆಯಮೇರೆಗೆ ಆಗಸ್ಟ್ 27ರಂದು ದೇಶಾದ್ಯಂತ ಬ್ಯಾಂಕಿನ ಶಾಖೆಗಳೆದುರು ಧರಣಿ ಮುಷ್ಕರ ನಡೆಯಿತು. ಬೆಂಗಳೂರಿನಲ್ಲಿ ಧರಣಿ ಸತ್ಯಾಗ್ರಹ ನಡೆಸಿದ ನೌಕರರಿಗೆ ಬೆಂಬಲವಾಗಿ ಬಿ.ಇ.ಎಫ್.ಐ. ಮುಖಂಡರು ಮತ್ತು ಕಾರ್ಯಕರ್ತರು, ಮಹಿಳಾ ಸಂಘಟನೆ ಮತ್ತು ಡಿವೈಎಫ್‌ಐ ಕಾರ್ಯಕರ್ತರೂ ಧರಣಿಯಲ್ಲಿ ಭಾಗವಹಿಸಿದ್ದರು.

ಸಿಐಟಿಯು ರಾಜ್ಯ ಸಮಿತಿಯೂ ಈ ಚಳುವಳಿಗೆ ಸಂಪೂರ್ಣ ಬೆಂಬಲ ವ್ಯಕ್ತ ಪಡಿಸಿದೆ.

ಪಕ್ಷದ ನಾಯಕಪಾತ್ರ ಮತ್ತು ಪಕ್ಷದ ಸಮೂಹ ಮಾಧ್ಯಮ

ಸಿ.ಪಿ.ಎಸ್.ಯು.ನ 28 ನೇ ಮಹಾಧಿವೇಶನದ ದೃಷ್ಟಿಯಲ್ಲಿ

ಪಕ್ಷದ ಪತ್ರಿಕಾರಂಗದ ಮರುಸಂಘಟನೆ, ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಅನುಗುಣವಾಗಿ ಆಗುತ್ತಿಲ್ಲ. ಘಟನೆಗಳೊಂದಿಗೆ ಹೆಜ್ಜೆಯಿಡುವಲ್ಲಿ ಅದು ವಿಫಲಗೊಂಡಿದೆ. ತನ್ನ ಸಮರಶೀಲತೆ ಕಳಕೊಂಡಿದೆ, ಹೆಚ್ಚುತ್ತಿರುವ ಸಮಾಜವಾದಿ-ವಿರೋಧಿ ಹಾಗೂ ಪೆರೆಸ್ತ್ರೋಯಿಕಾ-ವಿರೋಧಿ ಶಕ್ತಿಗಳೆದುರು ನೀತಿಯ ಭಾವನೆಯನ್ನೇ ಕಳಕೊಂಡಿದೆ ಎಂದು ಸೋವಿಯೆತ್ ಕಮ್ಯೂನಿಸ್ಟ್ ಪಕ್ಷದ 28 ನೇ ಮಹಾಧಿವೇಶನ ಪಕ್ಷದ ಸಾಮೂಹಿಕ ಮಾಧ್ಯಮದ ಬಗ್ಗೆ ಅಂಗೀಕರಿಸಿದ ಒಂದು ನಿರ್ಣಯದಲ್ಲಿ ಬಲವಾಗಿ ಟೀಕಿಸಿತ್ತು.

"ಪಕ್ಷದ ಪತ್ರಿಕೆಗಳ ಕಾಲಂಗಳನ್ನು ಕೆಲವೊಮ್ಮೆ ಸಿ.ಪಿ.ಎಸ್.ಯು.ಗೆ ಪರಕೀಯವಾದ ದೃಷ್ಟಿಕೋನಗಳಿಗೆ ಒದಗಿಸಲಾಗಿದೆ, ಸೋವಿಯೆತ್ ಒಕ್ಕೂಟದ ಚರಿತ್ರೆಯನ್ನು, ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಪಕ್ಷದ, ಜನರ ವೀರ ಹೋರಾಟಗಳನ್ನು ವಿಕೃತಗೊಳಿಸುವ ಲೇಖನಗಳಿಗೆ ಒದಗಿಸಲಾಗಿದೆ. ಜನರ ಆಧ್ಯಾತ್ಮಿಕ, ನೈತಿಕ ಮೌಲ್ಯಗಳ ಮೇಲೆ ಹಲ್ಲೆ ಮಾಡುವ, ಜನಗಳ ದೇಶಪ್ರೇಮ, ಅಂತರ್‍ರಾಷ್ಟ್ರೀಯವಾದಿ ಪರಂಪರೆಗಳ ಮೇಲೆ ಆಕ್ರಮಣ ಮಾಡುವ, ಸೋವಿಯೆತ್ ಸೇನೆಯ, ಕಾನೂನು ಪರಿಪಾಲನಾ ಪಡೆಗಳ ಪ್ರತಿಷ್ಠೆಗೆ ಕುಂದು ತರುವವರನ್ನು ಸರಿಯಾದ ರೀತಿಯಲ್ಲಿ ಹಿಮ್ಮೆಟ್ಟಿಸುವಲ್ಲಿ ಪಕ್ಷದ ಪತ್ರಿಕೆಗಳು ವಿಫಲವಾಗಿವೆ" ಎಂದು ಈ ನಿರ್ಣಯ ಹೇಳಿದೆ.

ಈ ವಿಫಲತೆಯನ್ನು ನಿವಾರಿಸಲು ಆ ನಿರ್ಣಯ ನಾಲ್ಕು ಸಲಹೆಗಳನ್ನೂ ಮುಂದಿಟ್ಟಿತು. ಅವುಗಳ ಈ ಕೆಲ ಅಂಶಗಳು ಗಮನಾರ್ಹವಾಗಿದೆ.

★ ಪಕ್ಷದ ಸದಸ್ಯರೆಂದು ಹೇಳಿಕೊಳ್ಳುವ ಕೆಲವು ಪತ್ರಕರ್ತರು ಪಕ್ಷದ ಪ್ರಕಟಣೆಗಳನ್ನು ಸಿ.ಪಿ.ಎಸ್.ಯು.ವನ್ನು ವಿರೋಧಿಸುವ ಶಕ್ತಿಗಳ ಸಾಧನವಾಗಿ ಸಲಹೆ ಮಾಡುವ ಪ್ರಯತ್ನಗಳನ್ನು ಸಹಿಸಬಾರದು.

★ ಪಕ್ಷ ಸ್ವಂತ ಪ್ರಕಟಣಾ ಸೌಲಭ್ಯ ಹೊಂದಬಾರದೆಂಬ ಒತ್ತಾಯಗಳನ್ನು ತಿರಸ್ಕರಿಸಬೇಕು.

★ ಪಕ್ಷದ ಸಮಿತಿಗಳು ಮತ್ತು ಸಮೂಹ ಮಾಧ್ಯಮದ ನಡುವೆ ದೈನಿಕ ಸಂಪರ್ಕವನ್ನು ಸುವ್ಯವಸ್ಥಿತಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಸಂಪರ್ಕದ ಅಧಿಕಾರಶಾಹೀ ನಿರ್ದೇಶನ ಅಥವಾ ಇದಮಿತ್ಥಂ ಎಂಬ ತೀರ್ಪುಗಳ ಮೇಲೆ ನಿಲ್ಲದೆ ಪರಸ್ಪರ ರಾಜಕೀಯ ಚರ್ಚೆ, ಸೃಜನಾತ್ಮಕ ಸಹಕಾರದ ಮೇಲೆ ಆಧರಿಸಿರಬೇಕು. ಪಕ್ಷ ಉಚ್ಚ ಅರ್ಹತೆ ಪಡೆದ ಪತ್ರಕರ್ತರ ತರಬೇತಿಗೆ, ಅವರ ಸಂಬಳ-ಸಾರಿಗೆ, ಕೆಲಸದ, ಜೀವನದ ಪರಿಸ್ಥಿತಿಗಳ ಬಗ್ಗೆ ವಿಶೇಷ ಗಮನ ಹರಿಸಬೇಕು.

★ ಸೂಕ್ತ ಅನುಭವ, ಅರ್ಹತೆ ಇರುವ ಕಾರ್ಮಿಕರು, ಮ್ಯಾನೇಜರುಗಳು, ವಿಜ್ಞಾನಿಗಳು, ಸಾಂಸ್ಕೃತಿಕ ಕೆಲಸಗಾರರನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಪಕ್ಷದ ಸಮಿತಿಗಳು ರಚಿಸಿರುವ, ಸಂಪಾದಕೀಯ ಮಂಡಳಿಗಳಲ್ಲಿ ಸೇರಿಸಿಕೊಳ್ಳಬೇಕು. ಇದರಿಂದ ಸಂಪಾದಕೀಯ ಸಿಬ್ಬಂದಿಯ ಪ್ರತ್ಯೇಕತೆ ಹೋಗಿ ಸಾರ್ವಜನಿಕ ಅಭಿಪ್ರಾಯಕ್ಕೆ ಪಕ್ಷ ಪತ್ರಿಕಾರಂಗ ಸ್ಪಂದಿಸಲು ಸಾಧ್ಯವಾಗುತ್ತದೆ.

★ ಈಗಿನ ಪರಿಸ್ಥಿತಿಯಲ್ಲಿ ಪಕ್ಷದ ಪತ್ರಿಕೆಗಳ ದನಿ ಉದ್ಧಟತನದಿಂದ ಕೂಡಿರಬಾರದು ಅಥವಾ ಉಪದೇಶಾತ್ಮಕವಾಗಿರಬಾರದು. ಪಕ್ಷದ ದನಿಗೆ ಜನತೆ ಮಾನ್ಯತೆ ನೀಡಬೇಕಾದರೆ ಅದು ಉದ್ಧಟತನದಿಂದ ಸಾಧ್ಯವಿಲ್ಲ. ಬದಲಾಗಿ, ಅವರ ಮನವರಿಕೆ ಮಾಡುವ, ಅವರ ಆಕಾಂಕ್ಷೆ, ಆತಂಕಗಳಿಗೆ ಮಿಡಿಯುವ ವಾದಗಳಿಂದ ಕೂಡಿದ್ದರೆ ಮಾತ್ರ ಸಾಧ್ಯ.

ಈ ಸಂದರ್ಭದಲ್ಲಿ, ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಮೇ 28 ರಿಂದ 31 ರವರೆಗೆ ನಡೆದ ತನ್ನ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಈ ಕೆಳಗಿನ ಅಂಶದತ್ತ ಓದುಗರ ಗಮನ ಸೆಳೆಯಬಯಸುತ್ತೇವೆ.

"ಗ್ಲಾಸ್ ನಾಸ್ತ್ನ ಛತ್ರಛಾಯೆಯಲ್ಲಿ, ಸಮಾಜವಾದಿವಿರೋಧಿ ಮತ್ತು ಮಾರ್ಕ್ಸ್‌ವಾದಿ ವಿರೋಧಿ ಪ್ರಚಾರ ಹುಲುಸಾಗಿ ಬೆಳೆದಿದೆ. ಆದರೆ ಇಂತಹ ಧೋರಣೆ, ನಿಲುವುಗಳು ಜನತೆಯಲ್ಲಿ ಬೇರೂರದಂತೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದಲ್ಲಿ ಪ್ರತಿ-ಪ್ರಚಾರ ಕಾಣಬರುತ್ತಿಲ್ಲ. ಪಕ್ಷದ ನಾಯಕ ಪಾತ್ರ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಗ್ಯಾರಂಟಿ ಮಾಡುವುದಕ್ಕಷ್ಟೇ ಮುಗಿದು ಹೋಗುವುದಿಲ್ಲ.

ಅದರ ಪಾತ್ರ ವೈಜ್ಞಾನಿಕ ಸಮಾಜವಾದವನ್ನು ಸಮರ್ಥಿಸಿಕೊಳ್ಳುವಲ್ಲಿಯೂ ಜನರ ನಡುವೆ ಅದರ ಪ್ರಚಾರ ಮಾಡುವಲ್ಲಿಯೂ ಇರಬೇಕು."

ನೆನಪಿದೆಯೇ, ನನ್ನ ನೆನಪಿದೆಯೇ?

' ನೀಗ್ರೋ ವಿಮೋಚನಾ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಆಲೀಸ್ ವಾಕರ್ ನೀಗ್ರೋ ರಾಜಕೀಯ ತ್ರೈಮಾಸಿಕ ' ಫ್ರೀ ಡಂ ವೇಸ್'ನ ಸಂಪಾದಕಿಯೂ ಆಗಿದ್ದಾರೆ. ಪ್ರಸಿದ್ಧ ಕವಿ ಹಾಗೂ ಕಾದಂಬರಿಕಾರ್ತಿ.'

'ನೀನು ನೀಗ್ರೋ ಹುಡುಗಿಯೇ?'
'ಹೌದು! '
'ಅದೊಂದು ರೀತಿಯ ಆಹಾರವಿರಬಹುದಲ್ಲವೆ?'
'ಹೌದು!'
'ಬಿಳಿಯ ನಿನ್ನನ್ನು ತಿನ್ನುತ್ತಿದ್ದನಲ್ಲವೆ?'
'ಹೌದು!'

ಸೂರ್ಯನ ಪ್ರಖರತೆಗೆ ತೆರೆದ ಎದೆ
ಮೈಯಲ್ಲ ಒಡೆದು ಚೂರಾಗಿ
ಮೊಲೆ ತೊಟ್ಟಿನ ಸುತ್ತ ನೂರು ನೊಣ
ಆದರೇನು- ಅವಳೊಬ್ಬ ಮುದುಕಿ
ಹೌದೆ?- ಅವಳಿಗೆ ಇಪ್ಪತ್ತು ವರ್ಷಗಳೇ?

ನೆನಪಿದೆಯೇ
'ನನ್ನ ನೆನಪಿದೆಯೇ
ನಾನು -ಕಪ್ಪು ಒಡಲ ಹುಡುಗಿ'
ಸವೆದ ಚಪ್ಪಲಿಯ
ಹುಳುಕು ಹಲ್ಲಿನ
ಕಪ್ಪು ಒಡಲ ಹುಡುಗಿ

ಕೀವು ತುಂಬಿದ
ಪಿಸುರುಗಣ್ಣಿನ
ಕಿವಿ ಸೋರುವ
ಕಪ್ಪು ಒಡಲ ಹುಡುಗಿ
ಅಂಗಳ ಗುಡಿಸುವ
ಗಂಗಳ ತೊಳೆಯುವ
ಅಡುಗೆ ಬೇಯಿಸುವ
ಅರಿವೆ ಒಗೆಯುವ
ಮಕ್ಕಳನಾಡಿಸುವ
ಹುಳುಕು ಹಲ್ಲಿನ
ಪಿಸುರುಗಣ್ಣಿನ
ಕಪ್ಪು ಒಡಲ ಹುಡುಗಿ

ನೆನಪಿದೆಯೆ,
ನನ್ನ ನೆನಪಿದೆಯೇ
ನಾನು ಕಪ್ಪು ಒಡಲ ಹೆಣ್ಣು
ಕೇಳುತ್ತಿರುವ ಕಿವಿಗಳ
ಸರಿಪಡಿಸಿದ ದಂತಗಳ
ಕಪ್ಪು ಒಡಲ ಹೆಣ್ಣು.
ನೆನಪಿದೆಯೆ,
ನನ್ನ ನೆನಪಿದೆಯೇ
ನಾನೀಗ ಗಾಯ ಮಾದ
ರಿಪೇರಿಯಾದ
ಕಪ್ಪು ಒಡಲ ಹೆಣ್ಣು
ಭರವಸೆಗಳನ್ನಷ್ಟೆ ಬಿತ್ತುವ
ಕಪ್ಪು ಒಡಲ ಹೆಣ್ಣು.
ಅವಳ ಬೇರಿನ

ಜವಳಿ ಹೂಗಳ
ಸಮರ್ಪಿಸುವ
ಕಪ್ಪು ಒಡಲ ಹೆಣ್ಣು-
'ನ್ಯಾಯ ಮತ್ತು ಭರವಸೆ'
ಬನ್ನಿ, ಆರಂಭಿಸೋಣ.

ರೈತರ ಜ್ವಲಂತ ಸಮಸ್ಯೆಯ ವಿರುದ್ಧ ಹೋರಾಟಕ್ಕೆ ಕರೆ

ಜುಲೈ 31 ರಂದುನಡೆದ ಮಂಗಳೂರು ತಾಲೂಕು ಸಂಘದ ಸಭೆರೈತರ ಸಾಲ ರದ್ಧತಿಯ ಬಗೆಗೆ ಸರಕಾರವು ರೈತರಿಗೆ ಮೋಸ ಮಾಡುವುದನ್ನು ಪ್ರತಿಭಟಿಸಲು ಭೂನ್ಯಾಯ ಮಂಡಳಿಯಲ್ಲಿ ತೀರ್ಪಾದ ಮಾಜಿ ಗೇಣಿದಾರರ ಭೂಮಿಯ ಮಾಲಕ ಹಕ್ಕನ್ನು ಪಡೆಯಲು, ರೈತರ ಒತ್ತುವರಿ ಭೂಮಿಯನ್ನು ಖಾಯಂ ಗೊಳಿಸುವ ಹಾಗೂ ಹಲವಾರು ವರ್ಷಗಳಿಂದ ಬಡ ರೈತರು ಕೃಷಿ ಕಾರ್ಮಿಕರು ಸರಕಾರಿ ಸ್ಥಳಗಳಲ್ಲಿ ಹಲವಾರು ವರ್ಷಗಳಿಂದ ಕೃಷಿ ಮಾಡಿ ಹಾಗೂ ಮನೆ ಕಟ್ಟಿ ವಾಸಿಸುವ ಬಡ ರೈತರಿಗೆ ಪಟ್ಟಾ ಸಿಕ್ಕುವಂತೆ ಒತ್ತಾಯಿಸಲು, ಈ ಬೇಡಿಕೆಗಳನ್ನು ಪಡೆಯಲು ಎಲ್ಲಾ ಗ್ರಾಮಗಳಲ್ಲಿ, ಯೂ, ಗ್ರಾಮಗಳ ತಳಹದಿಯಲ್ಲಿ ಸಂಘಟನೆ ಮಾಡಲು ಜುಲೈ 31 ರಂದು ನಡೆದ ಮಂಗಳೂರು ತಾಲೂಕು ರೈತ ಸಂಘದ ಸಭೆ ತೀರ್ಮಾನಿಸಿತು. ಕಳೆದ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ರಂಗ ರೈತರ ಕೃಷಿಕೂಲಿಗಾರರ ರೂ 10,000 ವರೆಗಿನ ಸಂಪೂರ್ಣ ಸಾಲಮನ್ನಾ ಮಾಡುತ್ತೇವೆಂದು ಭರವಸೆ ನೀಡಿದರೂ ಅದೀಗ ಈ ಭರವಸೆಯನ್ನು ಜಾರಿ ಮಾಡಲು ಹಿಂದೆ ಮುಂದೆ ಮಾಡಿ ಕೆಲವು ಷರತ್ತುಗಳನ್ನು ವಿಧಿಸಿ ದ.ಕ. ಜಿಲ್ಲಾ ರೈತರಿಗೆ ಈ ಪ್ರಯೋಜನ ಸಿಕ್ಕದಂತೆ ಮಾಡುತ್ತಿದೆ. ಇದರಿಂದ ರೈತರನ್ನು ವಂಚಿಸಿದಂತಾಗಿದೆ. ಚುನಾವಣೆಯಲ್ಲಿ ಭರವಸೆ ನೀಡಿದಂತೆ 2-10-89 ವರೆಗಿನ ಸಾಲ ಸಂಪೂರ್ಣ ಮನ್ನಾ ಮಾಡಬೇಕಂದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹಲವಾರು ಭಾರಿ ಒತ್ತಾಯಿಸುತ್ತಾ ಬಂದಿದೆ.

ಸಭೆಯ ಪ್ರಾರಂಭದಲ್ಲಿ ತಾಲೂಕು ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಗ್ರಾಮಗಳ ಚಟುವಟಿಕೆಯ ವರದಿಯನ್ನು ಮಂಡಿಸುತ್ತಾ ಈ ಬೇಡಿಕೆಗಳನ್ನು ಪಡೆಯಲು ತೀವ್ರ ರೀತಿಯ ಹೋರಾಟಕ್ಕೆ ಮುಂದಾಗ ಬೇಕೆಂದು ರೈತರನ್ನು ಒತ್ತಾಯಿಸಿದರು.

ಬಳಿಕ ಚರ್ಚೆಯಲ್ಲಿ ಎಂ.ಎಸ್. ನಾರಾಯಣ, ಎಂ.ಕೃಷ್ಣ ಮೂಲ್ಯ, ಪಾವ್ಲ ಡಿಸೋಜ, ಕೋಟೆಕಾರ್ ಮಂಡಲ ಉಪ ಪ್ರಧಾನರು ಉಗ್ಗಪ್ಪ ಶೆಟ್ಟಿ, ಸೋಮೇಶ್ವರ ಮಂಡಲ ಉಪ ಪ್ರಧಾನ ಪಿ. ಪರಮೇಶ್ವರ ಶೆಟ್ಟಿ, ಶ್ರೀನಿವಾಸ ಆಳ್ವ, ಗಂಗಯ್ಯ ಗಟ್ಟಿ, ಹೊನ್ನಯ್ಯ ದೇವಾಡಿಗ, ಗೋವಿಂದ ಗೌಡ, ಆನಂದ ಬೆಳ್ಚಾಡ, ದುಗ್ಗಪ್ಪ ಪೂಜಾರಿ ದೇವಣ್ಣ ಶೆಟ್ಟಿಗಾರ, ಬಾಲಕೃಷ್ಣ ಶೆಟ್ಟಿ ಮೊದಲಾದವರು ಭಾಗವಹಿಸಿದರು

ನಂತರ ತಾಲೂಕಿನ ವಿವಿದೆಡೆ ನಡೆದ ಸಂಘದ ಘಟಕಗಳ ಸಭೆಗಳಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಕಾರ್ಯಕ್ರಮಗಳನ್ನು ರೂಪಿಸಿದೆ ಮೊದಲನೆಯದಾಗಿ, ಸಾಲ ಮನ್ನಾ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂತೆ ಜಾರಿಗೆ ತರಬೇಕೆಂದು ಪ್ರತಿಘಟಕದಿಂದ 10 ಸಾವಿರ ಸಹಿ ಸಂಗ್ರಹ ಮಾಡಿ ಕೇಂದ್ರ ಸರ್ಕಾರಕ್ಕೆ ಮನವಿ ಅರ್ಪಿಸುವುದು. ಮತ್ತು ಎರಡನೆಯದಾಗಿ ಸಮಗ್ರ ಭೂಸುಧಾರಣೆ ಕಾನೂನು ಜಾರಿಗೊಳಿಸಿ ಬಡವರಿಗೆ ಭೂಮಿ ಹಂಚಬೇಕೆಂದು ಕೇಂದ್ರ ಸರ್ಕಾರಕ್ಕೆ ಮನವಿ ಜತೆಗೆ ಕರ್ನಾಟಕ ಭೂಸುಧಾರಣೆ ಕಾಯಿದೆಯಂತೆ ರೈತರಿಗೆ ಟ್ರಿಬ್ಯುನಲ್ ಮೂಲಕ ತೀರ್ಪಾದ ಭೂಮಿಯ ಒಡೆತನದ ಹಕ್ಕಿನ ಪಟ್ಟಾ ಕೊಡಬೇಕೆಂದು, ಸರಕಾರೀ ಸ್ಥಳವನ್ನು ಆಕ್ರಮಿಸಿಕೊಂಡು ಕೃಷಿ ಮಾಡಿದವರಿಗೆ ದಂಡನೆ ಇಲ್ಲದ ಪಟ್ಟಾ ಕೊಡಬೇಕೆಂದು ಮತ್ತು ಒತ್ತುವರಿ ಭೂಮಿಯನ್ನು ರೈತರಿಗೆ ಖಾಯಂ ಗೊಳಿಸಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮನವಿ.

ಕೋಟೆಕಾರ್ ಗ್ರಾಮದಲ್ಲಿ

ಆಗಸ್ಟ್ 14 ರಂದು ಕೋಟೆಕಾರ್ ಮಂಡಲದ ಉಪಪ್ರಧಾನರಾದ ಉಗ್ರಪ್ಪ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ಮೇಲಿನ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಿತು. ಅಲ್ಲದೆ ಮುಂದಿನ ಚಟುವಟಿಕೆ ನಡೆಸಲು 13 ಜನರುಳ್ಳ ಹೊಸ ಸಮಿತಿಯನ್ನು ರಚಿಸಲಾಯಿತು ಅಧ್ಯಕ್ಷರಾಗಿ ಕೆ. ಉಗ್ರಪ್ಪ ಶೆಟ್ಟಿ, ಉಪಾಧ್ಯಕ್ಷರಾಗಿ ಮುತ್ತಣ್ಣ ಶೆಟ್ಟಿ ಕಾರ್ಯದರ್ಶಿಯಾಗಿ ಎನ್. ಕೃಷ್ಣಶೆಟ್ಟಿ, ಜಂಟಿ ಕಾರ್ಯದರ್ಶಿಯಾಗಿ ಶೇಖರ್ ಹಾಗೂ ಖಜಾಂಚಿಯಾಗಿ ಕೃಷ್ಣ ಪೂಜಾರಿ ಆರಿಸಲ್ಪಟ್ಟರು.

ಮಂಜನಾಡಿ ಗ್ರಾಮದಲ್ಲಿ

ಮಂಜನಾಡಿ ಗ್ರಾಮದ ರೈತ ಸಂಘವು ಆಗಸ್ಟ್ 15 ರಂದು ಗೋಪಾಲ್ ಪಾಟಳಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಮೇಲಿನ ಕಾರ್ಯಕ್ರಮಗಳನ್ನು ನಡೆಸುವ ಬಗ್ಗೆ ತೀರ್ಮಾನಿಸಿತು.

ಕಲ್ಕಟಾ ಎಂಬಲ್ಲಿ ಸಾರ್ವಜನಿಕ ಸ್ಮಶಾನ ಸ್ಥಾಪಿಸಬೇಕೆಂದು ಕೊಣಾಜೆ ಮಂಡಲ ಪಂಚಾಯತನ್ನು ಒತ್ತಾಯಿಸಲು ಕೂಡಾ ಸಭೆ ನಿರ್ಧರಿಸಿತು.

17 ಜನರ ಸಮಿತಿ ರಚನೆಯಾಗಿದೆ. ಪದಾಧಿಕಾರಿಗಳ ಹೆಸರು ಹೀಗಿದೆ. ಅಧ್ಯಕ್ಷರು - ಗೋಪಾಲ ಪಾಟಳಿ, ಉಪಾಧ್ಯಕ್ಷರು - ಜಾರಪ್ಪ ಪೂಜಾರಿ, ಸಂಕರ ಸಪಲ್ಯ, ಕಾರ್ಯದರ್ಶಿ - ಅಶೋಕ ಆಳ್ವ, ಜಂಟಿ-ಕಾರ್ಯದರ್ಶಿ - ಮಾಧವ, ಚಂದ್ರಹಾಸ ಬಂಗೇರ ಮತ್ತು ಕೋಶಾಧಿಕಾರಿ - ಶ್ರೀನಿವಾಸ ಆಳ್ವ.

ಕೊಣಾಜೆ

ಕೊಣಾಜೆ ಗ್ರಾಮದ ರೈತರ ಸಭೆ ಆಗಸ್ಟ್ 17 ರಂದು ನಡೆದು ಸಾಲಮನ್ನಾ ಹಾಗೂ ಸಮಗ್ರ ಭೂಸುಧಾರಣೆ ಶಾಸನ ಕುರಿತು ಕೇಂದ್ರ ಸರ್ಕಾರಕ್ಕೆ ಹಾಗೂ ರಾಜ್ಯದ ಭೂಸುಧಾರಣಾ ಶಾಸನಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರಕ್ಕೆ ಮನವಿ ಅರ್ಪಿಸುವ ಕಾರ್ಯಕ್ರಮವನ್ನು ಅಂಗೀಕರಿಸಲಾಯಿತು. 13 ಜನರ ಸಮಿತಿ ರಚನೆಯಾಯಿತು. ಪದಾಧಿಕಾರಿಗಳು -

ಅಧ್ಯಕ್ಷರು - ದೇವಣ್ಣ ಶೆಟ್ಟಿಗಾರ, ಉಪಾಧ್ಯಕ್ಷರು -ಪಿ.ನಾರಾಯಣ ಪೂಜಾರಿ, ಕಾರ್ಯದರ್ಶಿ ನಾರಾಯಣ ಶೆಟ್ಟಿಗಾರ, ಉಪಕಾರ್ಯದರ್ಶಿ - ರಮೇಶ ನಾಗಿರ ಖಜಾಂಚಿ ಗುರುವ ಪೂಜಾರಿ.

ಹರಿಹರದಲ್ಲಿ ತರಗತಿ ಬಹಿಷ್ಕಾರ

ಶೈಕ್ಷಣಿಕ ಕ್ಷೇತ್ರದ ಸಮಸ್ಯೆಗಳತ್ತ ಸರ್ಕಾರದ ಗಮನ ಸೆಳೆಯಲು ಜುಲೈ 31 ರಂದು ತರಗತಿ ಬಹಿಷ್ಕಾರದ ರಾಜ್ಯ ಮಟ್ಟದ ಕರೆಗೆ ಓಗೊಟ್ಟು ಹರಿಹರದ ಎಲ್ಲಾ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಎಸ್.ಜೆ.ವಿ.ಪಿ. ಕಾಲೇಜಿನಿಂದ ಮೆರವಣಿಗೆ ಹೋಗಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು. ನಂತರ ನಡೆದ ಸಭೆಯಲ್ಲಿ ಎಸ್.ಎಫ್.ಐ. ಜಿಲ್ಲಾ ಸಂಚಾಲಕ ಡಿ.ಎಂ. ಮರಿಯಪ್ಪ, ರಾಜ್ಯ ಯುವ ಜನತಾದಳದ ಕಾರ್ಯದರ್ಶಿ ಹರಿಹರ ಪುರಸಭಾ ಸದಸ್ಯ ಶಂಕರ್ ಖಟಾವ್‌ಕರ್ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ರಘುಪತಿ ವೈ. ಎಸ್.ಟಿ. ಧ್ರುವರಾಜ್, ಮಾರುತಿ, ರವೀಂದ್ರಕುಮಾರ್, ಆರ್.ಬಿ.ಪರಶುರಾಮ್, ಅಶೋಕ್, ಸುರೇಶ್ ಮೊದಲಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಎ.ಬಿ.ವಿ.ಪಿ.ಯವರು ಈ ಚಳುವಳಿ ನಡೆಯದಂತೆ ಮಾಡಲು ಒಂದು ಮೆರವಣಿಗೆ ನಡೆಸಿದರೂ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಚಳುವಳಿಯಲ್ಲಿ ಭಾಗವಹಿಸಿದರು. ಎಲ್ಲಾ ಪ್ರಿನ್ಸಿಪಾಲರು ಹಾಗೂ ಅಧ್ಯಾಪಕರು ತುಂಬಾ ಸಹಕಾರ ನೀಡಿದರು.

ಹಗರಿಬೊಮ್ಮನ ಹಳ್ಳಿಯಲ್ಲಿ

ಎಸ್.ಎಫ್.ಐ. ನಗರ ಸಮಿತಿ ವತಿಯಿಂದ 800 ವಿದ್ಯಾರ್ಥಿಗಳ ಮೆರವಣಿಗೆ ನಡೆಸಲಾಯಿತು. ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ಎಲ್ಲಾ ಶಾಲಾ ಕಾಲೇಜುಗಳೂ ಬಂದ್ ಆಗಿದ್ದವು. ನಾಗರಿಕರಿಂದಲೂ ಉತ್ತಮ ಪ್ರತಿಕ್ರಿಯೆ ಕಂಡು ಬಂತು. ವಿದ್ಯಾರ್ಥಿನಿಯರ ಭಾಗವಹಿಸುವಿಕೆಯೂ ಗಮನಾರ್ಹವಾಗಿತ್ತು.

ದೊಡ್ಡ ಬಸವರಾಜ, ಪ್ರಕಾಶ ಮೆರವಣಿಗೆಯ ನೇತೃತ್ವ ವಹಿಸಿದ್ದರು. ಪ್ರಾಂತ ರೈತ ಸಂಘದ ಬಿ.ಸುರೇಂದ್ರ, ವೀರಲಿಂಗಪ್ಪ, ನಾಗಪ್ಪ, ಬೆಂಬಲ ವ್ಯಕ್ತಪಡಿಸಿದರು.

K R N M/ BGW - 293 MAG (2) PRB DECR 319 - 78/79

ವಿಳಾಸ:

ಹರಿಹರ ಪಾಲಿಫೈಬರ್ಸ್: 167 ಗುತ್ತಿಗೆ ಕಾರ್ಮಿಕರು ಕಾಯಂ

ಬಿರ್ಲಾ ಒಡೆತನದ ಹರಿಹರ ಪಾಲಿಫೈಬರ್ಸ್ ಕಾರ್ಖಾನೆಯಲ್ಲಿ ಕಳೆದ ಹತ್ತಾರು ವರ್ಷಗಳಿಂದ ಗುತ್ತಿಗೆ ಕಾರ್ಮಿಕರಾಗಿ ಕೆಲಸ ಮಾಡುತ್ತಾ ತೀವ್ರ ಶೋಷಣೆ ಅನುಭವಿಸುತ್ತಾ ಬಂದಿದ್ದ 105 ಜನ ಇಂಜಿನಿಯರಿಂಗ್ ಗುತ್ತಿಗೆ ಕೆಲಸಗಾರರು ಮತ್ತು 62 ಜನ ಕ್ಯಾಂಟೀನ್ ಕಾರ್ಮಿಕರನ್ನು ಕಾಯಂಗೊಳಿಸಲು ಆಡಳಿತ ವರ್ಗ ಒಪ್ಪಿಕೊಂಡಿದೆ. ಕಳೆದ ನಾಲ್ಕು ತಿಂಗಳಿಂದ ಕಾಂ. ವಿ.ಜಿ.ಕೆ. ನಾಯರ್ ವರ ನೇತೃತ್ವದಲ್ಲಿ ಕಾರ್ಮಿಕ ಪ್ರತಿನಿಧಿಗಳು ಆಡಳಿತವರ್ಗದ ಪ್ರತಿನಿಧಿಗಳೊಡನೆ ಹಲವು ಸುತ್ತುಗಳ ಮಾತುಕತೆ ನಡೆಸಿ 24-8-90 ರಂದು ಪ್ರತ್ಯೇಕ ಒಪ್ಪಂದಗಳಿಗೆ ಸಹಿಹಾಕಲಾಯಿತು. ಈ ಒಪ್ಪಂದಕ್ಕೆ ಒಳಪಡುವ ಕಾರ್ಮಿಕರು ಗುತ್ತಿಗೆ ಪದ್ಧತಿಯಿಂದ ಮುಕ್ತರಾಗಿ 1-4-90 ರಿಂದ ಪೂರ್ವಾನ್ವಯವಾಗಿ ಕಾಯಂ ಕೆಲಸಗಾರರು ಪಡೆಯುತ್ತಿರುವ ಮೂಲವೇತನ ಮತ್ತು ತುಟ್ಟಿಭತ್ಯೆಯನ್ನು ಪಡೆಯಲಿದ್ದಾರೆ. ಮನೆ ಬಾಡಿಗೆ, ಉತ್ಪಾದನಾ ಬೋನಸ್ ಇತ್ಯಾದಿ ಇತರ ಸೌಲಭ್ಯಗಳನ್ನು 4 ಹಂತಗಳಲ್ಲಿ ಪಡೆಯಲಿದ್ದಾರೆ. 1-4-90 ರಿಂದ 4 ವರ್ಷಗಳ ಕೊನೆಗೆ ಈ 105 ಜನ ಕಾರ್ಮಿಕರ ತಿಂಗಳ ಸಂಬಳದಲ್ಲಿ ತಲಾ ರೂ.1557 ಹೆಚ್ಚಳ ಪಡೆಯಲಿದ್ದಾರೆ. 62 ಜನ ಕ್ಯಾಂಟೀನ್ ಕಾರ್ಮಿಕರು ಮುಂದಿನ 6 ವರ್ಷಗಳ ಕೊನೆಗೆ ತಮ್ಮ ತಿಂಗಳ ಸಂಬಳದಲ್ಲಿ ತಲಾ ರೂ.1597 ಹೆಚ್ಚಳ ಪಡೆಯಲಿದ್ದಾರೆ 1981 ರ ಕೊನೆಯಲ್ಲಿ ಕಾಯಂ ಕಾರ್ಮಿಕರ ವೇತನ ಪರಿಷ್ಕರಣದ ಒಪ್ಪಂದ ಬರಲಿದ್ದು ಈ ಒಪ್ಪಂದದಲ್ಲಿ ಕೊಡಲಾಗುವ ಹೆಚ್ಚಳ ಹಾಗೂ ಸೌಲಭ್ಯಗಳನ್ನು ಈಗ ಕಾಯಂಗೊಳಿಸಲಾದ 167 ಕಾರ್ಮಿಕರಿಗೂ ಕೊಡಲು ಒಪ್ಪಿಕೊಳ್ಳಲಾಗಿದೆ. ಇದಲ್ಲದ ಗೆಸ್ಟ್ ಹೌಸ್ ನಲ್ಲಿ ಕೆಲಸ ಮಾಡುತ್ತಿರುವ 19 ಜನ ಕೆಲಸಗಾರರು ತಲಾ ರೂ.318 ಹೆಚ್ಚಳ ಪಡೆಯಲಿದ್ದು ರೈಲ್ವೆ ಸ್ಟಾಂಡಿಂಗ್ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ 11 ಜನ ಕಾರ್ಮಿಕರು ರೂ. 321 ಹೆಚ್ಚಳ ಪಡೆಯಲಿದ್ದಾರೆ.

ನೀಲಿ ಬಟ್ಟೆ ಕಾರ್ಮಿಕರೆಂದೇ ಕರೆಯಲ್ಪಡುತ್ತಿದ್ದ ಈ ಗುತ್ತಿಗೆ ಕೆಲಸಗಾರರು ಸಿ.ಐ. ಟಿ.ಯು. ಸಂಘವನ್ನು ಕಟ್ಟಿ ಬೆಳೆಸಲು ತುಂಬ ಶ್ರಮ ಪಟ್ಟಿದ್ದರು. ಹರಿಹರ ಪಾಲಿಫೈಬರ್ಸ್ ಕಾರ್ಮಿಕರ ಮಧ್ಯದಲ್ಲಿ ಎ.ಐ.ಟಿ.ಯು.ಸಿ. ಮುಖಂಡರು ಕಾರ್ಮಿಕರ ಹಿತಸಾಧನೆ ಮಾಡುವುದರಲ್ಲಿ ವಿಫಲರಾಗಿ ಕೇವಲ ಗೂಂಡಾಗಿರಿಯಿಂದ ಸಂಘವನ್ನು ನಡೆಸುತ್ತಿದ್ದ ಆ ದಿನಗಳಲ್ಲಿ ಈ ಗುತ್ತಿಗೆ ಕಾರ್ಮಿಕರು ದಿವಂಗತ ಕಾಂ. ಮದಾರ್ ಸಾಬ್ ಅವರ ಮಾರ್ಗದರ್ಶನದಲ್ಲಿ ಸಿ.ಐ.-ಟಿಯು ಸಂಘವನ್ನು ಕಟ್ಟಲು ಆಡಳಿತ ವರ್ಗದ ದಬ್ಬಾಳಿಕೆಯನ್ನು ಎದುರಿಸಲು ಹಲವು ರೀತಿಯ ಹೋರಾಟಗಳನ್ನು ಮಾಡಿದ್ದರು. ಈಗ ಸಹಿ ಹಾಕಲಾದ ಈ ಒಪ್ಪಂದ ಈ ಶೋಷಿತ ಕಾರ್ಮಿಕರ ಹೋರಾಟಮಯ ಜೀವನದಲ್ಲಿ ಒಂದು ಮಹತ್ವದ ಮೈಲುಗಲ್ಲಾಗಲಿದೆ. ಈ ಒಪ್ಪಂದದ ಸ್ಫೂರ್ತಿ ಇದೇ ಕಾರ್ಖಾನೆಯಲ್ಲಿರುವ ಮತ್ತು ಸುತ್ತಮುತ್ತಲಿನ ಇತರ ಕಾರ್ಖಾನೆಗಳ ಕಾಂಟ್ರಾಕ್ಟ್ ಮತ್ತು ಕ್ಯಾಷುವಲ್ ಕೆಲಸಗಾರರ ಸಂಘಟನೆ ಮತ್ತು ಹೋರಾಟಕ್ಕೆ ವಿಶೇಷ ಬಲ ತಂದುಕೊಡುವುದರಲ್ಲಿ ಸಂಶಯವಿಲ್ಲ.

ಸಂಗಂ ಸಾಲ್ವೆಂಟ್

ಹರಿಹರ ಸಮೀಪದ ಕುಮಾರ ಪಟ್ಟಣಂನಲ್ಲಿರುವ ಸಂಗಂ ಸಾಲ್ವೆಂಟ್ ಎಕ್ಸ್‌ಟ್ರಾಕ್ಟ್ಸ್ ಲಿಮಿಟೆಡ್ ಫ್ಯಾಕ್ಟರಿಯ ಕಾರ್ಮಿಕರು ಮೊತ್ತ ಮೊದಲ ಬಾರಿಗೆ ತಮ್ಮ ವೇತನದಲ್ಲಿ ತುಟ್ಟಿಭತ್ಯೆ ಪಡೆಯಲಿದ್ದಾರೆ. ಕಳೆದ ಹತ್ತಾರು ವರ್ಷಗಳಿಂದ ಎಐಟಿಯುಸಿ ನಾಯಕತ್ವದ ಅಡಿಯಲ್ಲಿ ಯಾವದೇ ಮುನ್ನಡೆ ಸಾಧಿಸಲು ವಿಫಲರಾದ ಈ ಕಾರ್ಮಿಕರು, ಎರಡು ವರ್ಷಗಳ ಹಿಂದೆ ಸಿಐಟಿಯು ಸಂಘವನ್ನು ರಚಿಸಿಕೊಂಡು ಆಡಳಿತ ವರ್ಗದಿಂದ ಮನ್ನಣೆ ಪಡೆಯಲು ಹೋರಾಟ ನಡೆಸಿದರು. ಆಡಳಿತ ವರ್ಗಕ್ಕೆ ಸಲ್ಲಿಸಿದ ಬೇಡಿಕೆ ಪಟ್ಟಿಯ ಮೇಲೆ ಸುದೀರ್ಘ ಚರ್ಚೆ ನಡೆದು ಒಪ್ಪಂದಕ್ಕೆ ಸಹಿಹಾಕಲಾಗಿದೆ. ಗ್ರಾಹಕರ ಬೆಲೆ ಸೂಚ್ಯಂಕದ 900 ಪಾಯಿಂಟುಗಳ ಮೇಲ್ಪಟ್ಟ ಪ್ರತಿ ಪಾಯಿಂಟಿಗೆ ಒಂದು ರೂ.ದರದಲ್ಲಿ ಏರಿಳಿತ ತುಟ್ಟಿಭತ್ಯೆ ಕೊಡಲು ಒಪ್ಪಿಕೊಂಡಿದೆ. ಈ ಒಪ್ಪಂದ ಮೂಲಕ ಪ್ರತಿಯೊಬ್ಬ ಕಾರ್ಮಿಕರಿಗೆ ತಿಂಗಳ ಸಂಬಳದಲ್ಲಿ ರೂ. 165 ಬೆಚ್ಚಳ, ರೂ.15 ಸರಾಸರಿ ಫಿಟ್‌ಮೆಂಟ್,ರೂ.35 ಸರಾಸರಿ ತುಟ್ಟಿಭತ್ಯೆ , ರೂ.26 ಕ್ಯಾಂಟೀನ್ ಸಬ್ಸಿಡಿ ರೂ.2 ಸ್ವಚ್ಛತಾ ಭತ್ತೆ ಹೆಚ್ಚಳ ಹೀಗೆ ಒಟ್ಟು ರೂ.243 ಪ್ರತ್ಯಕ್ಷ ಹೆಚ್ಚಳ ದೊರೆಯಲಿದೆ. ಅಪ್ರತ್ಯಕ್ಷವಾಗಿ ಸುಮಾರು ರೂ. 150 ಪ್ರತಿಯೊಬ್ಬ ಕಾರ್ಮಿಕನಿಗೆ ಸಿಗಲಿದೆ. ಕಾಂ. ವಿ.ಜಿ.ಕೆ. ನಾಯರ್ ಅವರ ನೇತೃತ್ವದಲ್ಲಿ ಚರ್ಚೆ ನಡೆದು ಸಂಘದ ಪದಾಧಿಕಾರಿಗಳಾದ ಕಾಂ. ನಿತ್ಯಾನಂದಸ್ವಾಮಿ, ಎಂ.ಎಸ್. ಆನಂದರಾವ್, ಎಂ.ಮಲ್ಲಿಕಾರ್ಜುನ, ಹೆಚ್. ಮಲ್ಲೇಶಪ್ಪ ಮತ್ತು ಎಸ್.ಸಿ. ಬಣಕಾರ ಸಹಿ ಹಾಕಿದ್ದಾರೆ. ಇದೇ ಫ್ಯಾಕ್ಟರಿಯ ಗುತ್ತಿಗೆ ಕಾರ್ಮಿಕರ ಬೇಡಿಕೆಗಳ ಮೇಲೆ ಚರ್ಚೆ ಮುಂದುವರಿದಿದೆ. ಈಗಾಗಲೆ ಸಹಿಹಾಕಲಾದ ಒಪ್ಪಂದಕ್ಕೆ ಒಳಪಟ್ಟ ಕಾರ್ಮಿಕರು ತಮ್ಮ ಒಂದು ದಿನದ ಸಂಬಳವನ್ನು ಪಕ್ಷದ ಕಟ್ಟಡ ನಿಧಿಗೆ ನೀಡಿದ್ದಾರೆ.

12 ಗಂಟೆಯೂ 31 ಲಕ್ಷವೂ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಯ ಕೇಂದ್ರ ಸಮಿತಿ ಕಛೇರಿಯಾದ ' ಎ. ಕೆ.ಜಿ. ಭವನ ' ಹೊಸದಿಲ್ಲಿಯಲ್ಲಿ ನಿರ್ಮಾಣವಾಗಲಿದೆ. ಹಿಂದೆಯೇ ಕಟ್ಟಡ ನಿಧಿಗೆ ಕರೆ ನೀಡಲಾಗಿತ್ತು. ಹಣ ಸಂಗ್ರಹವೂ ಆಗಿತ್ತು. ಸರಕಾರದ ವಿಳಂಬನೀತಿಯಿಂದಾಗಿ ಹಲವು ಅಡ್ಡಿ ಆತಂಕಗಳು ಬಂದು ಕಟ್ಟಡ ನಿರ್ಮಾಣ ಕಾರ್ಯ ನಿಗದಿತ ಸಮಯದಲ್ಲಿ ಆಗದೆ ಈಗ ನಿರ್ಮಾಣ ವೆಚ್ಚ ಬಹಳಷ್ಟು ಹೆಚ್ಚಿದೆ. ಆದ್ದರಿಂದ ಇನ್ನು ಹೆಚ್ಚುವರಿಯಾಗಿ ಬೇಕಾಗಲಿರುವ ಮೊತ್ತ ಸಂಗ್ರಹಿಸಲು ಪಕ್ಷ ನೀಡಿದ ಕರೆಯಂತೆ ದೇಶಾದ್ಯಂತ ನಿಧಿ ಸಂಗ್ರಹ ಕಾರ್ಯ ನಡೆಯುತ್ತಿದೆ.

ಕೇರಳದಲ್ಲಿ 20 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಬೇಕೆಂದು ಅಲ್ಲಿನ ರಾಜ್ಯಸಮಿತಿ ಕರೆ ನೀಡಿತ್ತು. ಇದಕ್ಕೆ ಜನರ ಪ್ರತಿಕ್ರಿಯೆ ಸ್ಫೂರ್ತಿದಾಯಕವಾಗಿತ್ತು.

ಇದೇ ಆಗಸ್ಟ್ 19 ರಂದು ಬೆಳಗ್ಗೆ ಏಳು ಗಂಟೆಯಿಂದ ಸಂಜೆ ಏಳು ಗಂಟೆವರೆಗೆ ರಾಜ್ಯಾದ್ಯಂತ ಏಕಕಾಲದಲ್ಲಿ ಜನರನ್ನು ಸಂಪರ್ಕಿಸಲಾಯಿತು. ಪಕ್ಷದ ಕಟ್ಟಡ ನಿಧಿಗೆ ಈ ಅವಧಿಯಲ್ಲಿ ಹರಿದು ಬಂದ ಹಣ ಎಷ್ಟ ಗೊತ್ತೆ?

31 ಲಕ್ಷ ರೂಪಾಯಿಗಳು.

ಈ ವಾರ

* ಈ ವರ್ಷದ ಮೊದಲ ಐದು ತಿಂಗಳಲ್ಲಿ ಅತ್ಯಾಚಾರ ಪ್ರಕರಣಗಳು ದಾಖಲಾಗಿರುವುದರಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ. ಅಲ್ಲಿ ಮೇ ವರೆಗೆ 340 ಪ್ರಕರಣಗಳು ದಾಖಲಾಗಿವೆ. ಆಂಧ್ರಪ್ರದೇಶದಲ್ಲಿ ಮೊದಲ ಎರಡು ತಿಂಗಳಲ್ಲಿ 106 , ಅಸ್ಸಾಮಿನಲ್ಲಿ ಮೂರು ತಿಂಗಳಲ್ಲಿ 96 ಮತ್ತು ತಮಿಳುನಾಡಿನಲ್ಲಿ ನಾಲ್ಕು ತಿಂಗಳಲ್ಲಿ 86 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ.

ಸಚಿವ ಸುಭೋದ್ ಕಾಂತ್ ಸಹಾಯ್ ಲೋಕಸಭೆಯಲ್ಲಿ ಆಗಸ್ಟ್ 16

* ಮಹಿಳೆಯರು ವಾಹನ ಚಲಾಯಿಸುವುದಕ್ಕೆ, ಕೆಲವು ಪ್ರದೇಶಗಳಲ್ಲಿ ಪ್ರವೇಶಕ್ಕೆ ನಿರ್ಬಂಧ ಇರುವಂಥ, ಮಹಿಳೆ ಸೈನ್ಯಕ್ಕೆ ಸೇರುವುದನ್ನು ನಿಷೇಧಿಸುವ ಹೀಗೆ ಮಹಿಳೆಗೆ ಹಲವಾರು ನಿರ್ಬಂಧಗಳಿರುವ ಸೌದಿ ಅರೇಬಿಯಾದಲ್ಲಿ ಈಗ (ಕೊಲ್ಲಿ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ) ಅಮೇರಿಕನ್ ಮಹಿಳಾ ಸೈನ್ಯಾಧಿಕಾರಿಗಳು ಸೈನಿಕರು ಈ ಎಲ್ಲಾ ನಿಬಂಧಗಳನ್ನು ಉಲ್ಲಂಘಿಸುತ್ತಿದ್ದಾರೆ. ಈ ಮಹಿಳೆಯರು ವಿಮಾನ ಚಾಲನೆ, ಕಾರುಗಳ ಚಾಲನೆ ಮತ್ತಿತರ ಕಾರ್ಯಗಳಲ್ಲಿ ತೊಡಗಿದ್ದಾರೆ. ಅನಿರ್ಬಂಧಿತವಾಗಿ ಸಂಚರಿಸುತ್ತಾರೆ.

ಈ ಎಲ್ಲಾ ಚಟುವಟಿಕೆಗಳಿಂದ ಅಲ್ಲಿ ಸಂಘರ್ಷದ ವಾತಾವರಣ ಸೃಷ್ಟಿಯಾಗಿದೆ.

* ಕ್ರಿಮಿನಾಶಕ ಔಷಧಿಯನ್ನೇ ತನ್ನ ಆಹಾರವನ್ನಾಗಿಸಿಕೊಂಡು ಮತ್ತಿಷ್ಟು ಬಲಿಷ್ಟವಾಗಿ ಬೆಳೆದು ಹುಲುಸಾಗಿ ಬಂದ ಬೆಳೆಯನ್ನು ಸರ್ವನಾಶಗೊಳಿಸಲು ಕ್ರಿಮಿಗಳಿವೆ. ರಾಜ್ಯದ ವೈದ್ಯಕೀಯ ಮತ್ತು ಎಂಜನಿಯರಿಂಗ್ ಕಾಲೇಜುಗಳಲ್ಲಿರುವ ಕಾಣಿಕೆ ಶುಲ್ಕದ ಹಾವಳಿಯನ್ನು ರದ್ದುಗೊಳಿಸಿದ ಕಾನೂನು ಜಾರಿಯಲ್ಲಿದ್ದರೂ ಈ ಖಾಸಗಿ ಕಾಲೇಜುಗಳ ವ್ಯವಸ್ಥಾಪಕ ಮಂಡಳಿಗಳು ಕಾಣಿಕೆ ಶುಲ್ಕದ ಜೊತೆಗೆ ಕಾನೂನಿನಲ್ಲಿ ಗೊತ್ತು ಪಡಿಸಲಾಗಿರುವ ಟ್ಯೂಷನ್ ಫೀಜನ್ನು ವಸೂಲಿ ಮಾಡಿ ಇಮ್ಮಡಿ ಲಾಭ ಗಳಿಸುತ್ತಿವೆ.

.... ಈ ಪ್ರವೇಶ ಕಾಣಿಕೆ ಶುಲ್ಕ ಪದ್ಧತಿ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಎಷ್ಟೊಂದು ಆಳವಾಗಿ ಬೇರು ಬಿಟ್ಟಿದೆ ಎಂದರೆ ಇದು ಬರೀ ಉಚ್ಚ ಶಿಕ್ಷಣ ಸಂಸ್ಥೆಗಳಿಗಷ್ಟೇ ಸೀಮಿತವಾಗಿರದೆ ಪ್ರಾಥಮಿಕ ಶಾಲೆಗಳ ಹಂತಕ್ಕೂ ತನ್ನ ಚಂಚು ಪ್ರವೇಶ ಮಾಡಿದೆ.

ಎಸ್.ಜಿ. ಮೈಸೂರು ಮಠ ' ಸಂಯುಕ್ತ ಕರ್ನಾಟಕ ' ಲೇಖನದಲ್ಲಿ ಆಗಸ್ಟ್ 28

* ಪೂರ್ವ ಜರ್ಮನಿಯಲ್ಲಿ ಈಗ 15 ಲಕ್ಷ ನಿರುದ್ಯೋಗಿಗಳಿದ್ದಾರೆ. ನಿರುದ್ಯೋಗಿಗಳು

ಹೊಸದಾಗಿ ರಚಿಸಿಕೊಂಡಿರುವ ಸಂಘದ ಅಧ್ಯಕ್ಷ ಕ್ಲೌಸ್ ಗ್ರೆಹ್ನ್ ಹೇಳಿದ್ದಾರೆ.

ಪೂರ್ವ ಜರ್ಮನಿಯ ಸುಮಾರು 22,000ಕ್ಕೂ ಹೆಚ್ಚು ಜನರು ಪಶ್ಚಿಮ ಜರ್ಮನಿಯ ಎಲ್ಲೆಲ್ಲಿಯೋ ದುಡಿಯುತ್ತಿದ್ದಾರೆ. ಅಲ್ಲದೆ ಪೂರ್ವ ಜರ್ಮನಿಯ 55,000ಪ್ರಜೆಗಳು ಪಶ್ಚಿಮ ಬರ್ಲಿನ್ ಹಾಗೂ ಪ.ಜರ್ಮನಿಯ ಯಾವ್ಯಾವುದೋ ಕಡೆಗಳಲ್ಲಿ ಕ್ರಮವಾಗಿ ದುಡಿಯುತ್ತಿದ್ದಾರೆ.

ಈ ವರ್ಷ ಅಂತ್ಯ ಅಥವಾ ಮುಂದಿನ ವರ್ಷದ ಆರಂಭದ ಹೊತ್ತಿಗೆ ಪೂರ್ವ ಜರ್ಮನಿಯ ನಿರುದ್ಯೋಗಿಗಳ ಸಂಖ್ಯೆ 25 ಲಕ್ಷ ಆಗಬಹುದೆಂದು ಈ ಮುನ್ನ ಅಂದಾಜು ಮಾಡಲಾಗಿತ್ತು.

ಬಾಲಂಗೋಚಿ

* ಪೂರ್ವ ಮತ್ತು ಪಶ್ಚಿಮ ಜರ್ಮನಿ ಏಕೀಕರಣ ಸಾಧ್ಯವಾಗಿರುವಾಗ ಭಾರತ-ಪಾಕಿಸ್ತಾನ ಏಕೆ ಏಕೀಕೃತಗೊಳ್ಳಲು ಸಾಧ್ಯವಿಲ್ಲ? —ಬಿಜೆಪಿ ಮುಖಂಡರೊಬ್ಬರ ಹಳಹಳಿಕೆ

ಅದಕ್ಕೆ 'ವಿಲೀನ ಸಿಮೆಂಟ್'(ಶ್ರೀರಾಮ ಇಟ್ಟಿಗೆ ಇದ್ದಂತೆ) ತಯಾರಿಗೆ ಒಪ್ಪಂದ ಮಾಡಿಕೊಳ್ಳಲು ಅಮೇರಿಕಕ್ಕೆ ಬಿಜೆಪಿ ನಿಯೋಗವೊಂದು ಹೋಗುವ ಸಾಧ್ಯತೆಯಿದೆಯೆಂದು ನಿಟಿಕ್ಟಿವ್ 'ವಿ' ವರದಿ.

ಎ.ಐ.ಡಿ.ಡಬ್ಲ್ಯೂ.ಎ. ಸ್ಥಾಪನಾ ಸಭೆ

ಭಟ್ಕಳ : ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎಐಡಿಡಬ್ಲ್ಯೂಎ)ಯ ಪ್ರಥಮ ಸ್ಥಾಪನಾ ಸಭೆಯು ಭಟ್ಕಳದ ಶಿರಾಲಿಯಲ್ಲಿ ಎಸ್.ಎಫ್.ಐ. ಆಶ್ರಯದಲ್ಲಿ ಇತ್ತೀಚೆಗೆ ನಡೆಯಿತು.

ಉತ್ತರ ಕನ್ನಡ ಜಿಲ್ಲಾ ಎಸ್.ಎಫ್.ಐ. ಅಧ್ಯಕ್ಷ ಕಾಂ। ಸುಭಾಸ ಕೊಪ್ಪಿಕರ

ಪತ್ರಕರ್ತ ಸುರೇಂದ್ರ ರಾಮನ್, ಬ್ಯಾಂಕ್ ಎಂಪ್ಲಾಯಿಸ್ ಫೆಡರೇಷನ್ ಆಫ್ ಇಂಡಿಯಾ (ಬಿಇಎಫ್ಐ)ನ ಕಾಂ। ರಾಮಬಿಲ್ಲವ ಸಂಘಟನೆಗೆ ಶುಭಕೋರಿ ಮಾತನಾಡಿದರು.

ಮಹಿಳಾ ವಿಮೋಚನೆಗಾಗಿ ಅಖಿಲ ಭಾರತ ಮಟ್ಟದಲ್ಲಿ ಹೋರಾಡುತ್ತಿರುವ ಬಲಿಷ್ಟ ಮಹಿಳಾ ಸಂಘಟನೆ ಉತ್ತರ ಕನ್ನಡದಲ್ಲಿ ಪ್ರಥಮವಾಗಿ ಭಟ್ಕಳದಲ್ಲಿ ಪ್ರಾರಂಭವಾದುದು ನಿಜಕ್ಕೂ ಹೆಮ್ಮೆಯ ವಿಷಯವೆಂದು ಎಸ್‌ಎಫ್‌ಐ ಜಿಲ್ಲಾ ಸಮಿತಿ ಸದಸ್ಯ ಕಾಂ। ವಸೀವುಲ್ಲಾ ಶೇಕ್ ತಿಳಿಸಿದರು.

ಪ್ರಾರಂಭದಲ್ಲಿ ಮುಕ್ತಾಶಿರಾಲಿ ಸ್ವಾಗತಿಸಿದರೆ ಶ್ರೀಕಾಂತ ವಂದಿಸಿದರು.

ಸಭೆಯಲ್ಲಿ ಈ ಕೆಳಗಿನಂತೆ ಸಂಘಟನಾ ಸಮಿತಿ ರಚಿಸಲಾಯಿತು.

ಕಾಂ। ಮುಕ್ತಾ ಆರ್. ಶಿರಾಲಿ ಸಂಚಾಲಕಿ) ಗಂಗಾ ಬಾಕಾಡ ಶಾಂತಲಾ. ಡಿ. ಶುಕ್ಲ (ಸಹ ಸಂಚಾಲಕಿಯರು ಮತ್ತು 7 ಜನ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಉಡುಪಿ ತಾಲೂಕು ಸಮಾವೇಶ

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಉಡುಪಿ ತಾಲೂಕು ಘಟಕದ ಸಮಾವೇಶವು ಸೆಪ್ಟಂಬರ್ 2 ರಂದು ಉಡುಪಿಯ ರಾಜ್ಯ ಸರಕಾರಿ ನೌಕರರ ಸಂಘದ ಸಭಾ ಭವನದಲ್ಲಿ ಯಶಸ್ವಿಯಾಗಿ ಜರುಗಿತು. ತಾಲೂಕಿನ ಬೇರೆ ಬೇರೆ ಭಾಗಗಳಿಂದ ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಶ್ರೀಮತಿ ಮಾಲತಿ ಯವರು ಸ್ವಾಗತಿಸಿ ಅಧ್ಯಕ್ಷ ಮಂಡಳಿಯನ್ನು ಸೂಚಿಸಿದರು.

ಸಮಾವೇಶದ ಕಾರ್ಯಕಲಾಪಗಳನ್ನು ಶ್ರೀಮತಿ ಎ. ಶಾವಂತಿ, ಶ್ರೀಮತಿ ಲಲಿತ ಭಂಡಾರಿ, ಶ್ರೀಮತಿ ಗೋಪಿಯವರಿರುವ ಅಧ್ಯಕ್ಷ ಮಂಡಳಿಯು ನಡೆಸಿಕೊಟ್ಟಿತು.

ಮಹಿಳಾ ಸಂಘಟನೆಯ ಬಗ್ಗೆ ಬಹಳ ಕಾಳಜಿ ವಹಿಸಿ ದುಡಿಯುತ್ತಿದ್ದು ಕಳೆದ ಏಪ್ರಿಲ್ ತಿಂಗಳಲ್ಲಿ ನಿಧನರಾದ ಸಿ.ಐ.ಟಿ.ಯು.ವಿನ ಅಗ್ರಗಣ್ಯ ನಾಯಕರಾದ ಬಿ.ಟಿ. ರಣದಿವೆ ಅವರ ನಿಧನಕ್ಕೆ ಮೌನ ಆಚರಿಸಿ ಶ್ರದ್ಧಾಂಜಲಿಅರ್ಪಿಸಲಾಯಿತು.

ಸಮಾವೇಶವನ್ನು ರಾಜ್ಯ ಮಹಿಳಾ ಮುಂದಾಳು ಶ್ರೀಮತಿ ಎಸ್.ಆರ್. ಲೀಲಾವತಿಯವರು ಉದ್ಘಾಟಿಸಿದರು.

ಕಾರ್ಯಕಲಾಪಗಳ ವರದಿಯನ್ನು ಕುಮಾರಿ ವಸಂತಿಯವರುಮಂಡಿಸಿದರು. ಹಲವಾರು ಮಹಿಳಾ ಸಂಗಾತಿಗಳು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು.

ತ್ರಿಪುರದಲ್ಲಿ ಆದಿವಾಸಿ ಮಹಿಳೆಯರ ಮೇಲೆ ನಡೆಸಲಾಗುತ್ತಿರುವ ಕೊಲೆ ಅತ್ಯಾಚಾರಗಳನ್ನು ಖಂಡಿಸುವ, ಗಜ್ವಾಲದ ಸೈಂಟ್ ಮೇರಿ ಕಾನ್ವೆಂಟಿನಲ್ಲಿ ಕನ್ಯಾಸ್ತ್ರೀಯರ ಮೇಲೆ ಬಲಾತ್ಕಾರ ನಡೆಸಿದ ಅಪರಾಧಿಗಳಿಗೆ ಕಠಿಣವಾದ ಶಿಕ್ಷೆ ವಿಧಿಸುವಂತೆ ಒತ್ತಾಯಿಸುವ ಮಹಿಳೆಯರ ರಾಷ್ಟ್ರೀಯ ಆಯೋಗದ ರಚನೆಗೆ ಮಸೂದೆ ಮಂಡಿಸಿರುವುದನ್ನು ಸ್ವಾಗತಿಸುವ ಇವೇ ಮೊದಲಾದ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಉಡುಪಿಯ ಸುಪ್ರಸಿದ್ಧ ನ್ಯಾಯವಾದಿ ಶಿರ್ಡಾಡಿ ವಿಲಿಯಂ ಪಿಂಟೋರವರು ಶುಭ ಕೋರಿ ಮಾತನಾಡಿದರು.

ಮುಂದಿನ ವರ್ಷಕ್ಕೆ ಪದಾಧಿಕಾರಿಗಳಾಗಿ ಶ್ರೀಮತಿ ಎ. ಶಾವಂತಿ (ಅಧ್ಯಕ್ಷೆ) ಶ್ರೀಮತಿ ಲಲಿತ ಭಂಡಾರಿ (ಉಪಾಧ್ಯಕ್ಷೆ) ಶ್ರೀಮತಿ ಮಾಲತಿ (ಕಾರ್ಯದರ್ಶಿ) ಕುಮಾರಿ ವಸಂತಿ (ಜತೆ ಕಾರ್ಯದರ್ಶಿ) ಶ್ರೀಮತಿ ಗೋಪಿ (ಕೋಶಾಧಿಕಾರಿ)ಯಾಗಿ 21 ಮಂದಿಯಿರುವ ಸಮಿತಿಯನ್ನು ಆರಿಸಲಾಯಿತು.

ಸಂಸತ್ತಿನಲ್ಲಿ ...... ಕೃಷ್ಣ ಯಂಡ

ಈ ಕಂಪೆನಿ ನಿವಹಿಸುತ್ತಿರುವ ಕೆಲಸಗಳನ್ನು ಮಾಡಲು ಸರಕಾರ 5ರಿಂದ6 ಕಂಟ್ರಾಕ್ಟರೊಗಳನ್ನು ನೇಮಿಸಿದೆ ಎಂದ ಅವರು ಈ ಬಗ್ಗ ಜಲಸಂಪನ್ಮೂಲಗಳ ಸಚಿವರು ಹೇಳಿಕೆ ನೀಡಬೇಕೆಂದರು.

ಭಾರತ-ಶ್ರೀಲಂಕಾ ಒಪ್ಪಂದ ಜಾರಿಯಾಗದೆ ಶಾಂತಿಪಾಲನಾ ಪಡೆಯನ್ನು ಹಿಂಗೆದಿರುವ ಪರಿಣಾಮವಾಗಿ ಶ್ರೀಲಂಕಾದಲ್ಲಿ ತಮಿಳರ ಹತ್ಯೆ ನಡೆಯುತ್ತಿದೆ ಎಂದು ಶ್ರೀಲಂಕಾದ ಬಗ್ಗೆ ರಾಜ್ಯಸಭೆಯಲ್ಲಿ ನಡೆದ ಚರ್ಚೆಯಲ್ಲಿ ಪಾಲ್ಗೊಂಡ ಎ. ನಲ್ಲಶಿವನ್ ಹೇಳಿಗರು. ಸರಕಾರ ಮತ್ತು ತಮಿಳು ಉಗ್ರಗಾಮಿಗಳ ಮಜುವೆ ಕದನ ವಿರಾಮ ಮತ್ತು ಸ ಹಾರ್ಧತೆಯುತ ಇತ್ಯರ್ಥಕ್ಕಾಗಿ ಭಾರತ ಸರಕಾರ ತಕ್ಷಣವೇ ಕಾರ್ಯಪ್ರವೃತ್ತವಾಗಬೇಕು ಎಂದರು.

ತ್ರಿಪುರಾ ರಾಜ್ಯಸರಕಾರ ಅಲ್ಲಿ ಹಿಂಸಾಚಾರ ನಡೆಸುತ್ತಿದೆ ಎಂದು ರಾಜ್ಯಸಭೆಯಲ್ಲಿ ವಿಶೇಷ ಗೊತ್ತುವಳಿಯೊಂದರ ಮೂಲಕ ವಿಷಯವೆತ್ತಿದ ಸಿಪಿಐ(ಎಂ) ನ ನಾರಾಯಣ ಕೌರ್ ಹೇಳಿದರು. ಈ ಹಿಂಸಾಚಾರಕ್ಕೆ ಇತ್ತೀಚೆಗೆ ಬಲಿಯಾದವರು ಡಿವೈಎಫ್ಐನ ಒಬ್ಬ ಕಾರ್ಯಕರ್ತಎಂದರು. ತಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಕಾಂಗ್ರೆಟಿಯುಜೆಎಸ್(ರುಪ್ಪ)ಕೂಟದ ಕಾರುಬಾರುಗಳನ್ನು ಪ್ರಸ್ತಾಪಿಸಿದಾಗ ಕಾಮ್ರೇಡ್ ನಾರಾಯಣ ಕೌರ್ ದು:ಖ ತಡೆಯಲಾಗದೆ ಅತ್ತುಬಿಟ್ಟರು. ಹಲವಾರು ಇತರ ಸಂಗಾತಿಗಳು ಸದನದಲ್ಲಿ ಅವರನ್ನು ಸಮಾಧಾನ ಪಡಿಸಿದರು.

ತಲೆ ತಿರುಕನ ಹೇಳಿಕೆ ಬಗ್ಗೆ.....

ವಿಶ್ವ ಸಂಸ್ಥೆಯ ಆಶ್ರಯದಲ್ಲಿ ನಡೆಯುವ ಜನಮತಗಣನೆಯ ಆಧಾರದಲ್ಲಿ ಸ್ವತಂತ್ರ ಖಲಿಸ್ತಾನ ರಚಿಸಬೇಕೆಂದು ಒತ್ತಾಯಿಸಿ ಅಕಾಲಿದಳ(ಮಾನ್‌ಬಣ) ಅಧ್ಯಕ್ಷ ಸಿಮ್ರಾನ್ ಜಿತ್ ಸಿಂಗ್ ಮಾನ್ ನೀಡಿದ್ದ ಹೇಳಿಕೆಯೊಂದನ್ನು ಸಂಸತ್ತಿನಲ್ಲಿ ಖಂಡಿಸಲಾಯಿತು. ಈ ಹೇಳಿಕೆ ಪ್ರಜಾಪ್ರಭುತ್ವಕ್ಕೆ ಇನ್ನಷ್ಟು ಸವಾಲಾಗಿದೆ ಎಂದು ಆ.31 ರಂದು ಲೋಕಸಭೆಯಲ್ಲಿ ಸೈಫುದ್ದೀನ್ ಚೌಧರಿ ವಿಶ್ಲೇಷಿಸಿದರು. ಅಮೇರಿಕಾಗ ರಾಯಭಾರಿ ಆಗಸ್ಟ್ 6ರಂದು ಪಂಜಾಬ್‌ಗೆ ಭೇಟಿನೀಡಿದ್ದು ಮತ್ತು ಖಲಿಸ್ತಾನ್ ರಚನೆಯಲ್ಲಿ ನೆರವಾಗುವಂತೆ ಸಹಾಯ ಕೋರಿ ಅಖಿಲ ಭಾರತ ಸಿಖ್ ವಿದ್ಯಾರ್ಥಿ ಫೆಡರೇಶನ್ ಅವರಿಗೆ ಮನವಿ ನೀಡಿದ್ದ ಬಗ್ಗೆ ಅವರು ಸದನದ ಗಮನ ಸೆಳೆದರು. ಅಮೇರಿಕ ರಾಯಭಾರಿಯ ಪಂಜಾಬ್ ಭೇಟಿಯ ಉದ್ದೇಶದ ಬಗ್ಗೆ ವಿವರವಾಗಿ ತಿಳಿಸಬೇಕೆಂದು ಅವರು ಸರಕಾರವನ್ನು ಕೋರಿದರು.

ಪ್ರಜೆಯೊಬ್ಬ; ದೇಶವೆರಡು

ಟೆನಿಕಾಂ ಆಯೋಗದ ಅಧ್ಯಕ್ಷರಾದ ಸ್ಯಾಂ ಪಿತ್ರೋಡಾ ಅವರು ಎರಡು ದೇಶಗಳ ಪ್ರಜೆ! ಹೌದು ! ಇದು ಆಶ್ಚರ್ಯದ ವಿಷಯವೇನಲ್ಲ. ಅವರು ಅಮೇರಿಕ ಮತ್ತು ಭಾರತದ ಪೌರತ್ವ ಹೊಂದಿದ್ದು ಈ ಬಗ್ಗೆ ತನಿಖೆ ನಡೆಸಬೇಕೆಂದು ಆ.31 ರಂದು ರಾಜ್ಯಸಭೆಯಲ್ಲಿ ಸಿಪಿಐ(ಎಂ) ಸದಸ್ಯ ಎಂ.ಎ.ಬೇಬಿ ಸರಕಾರವನ್ನು ಒತ್ತಾಯಿಸಿದರು. ಇದು ಸದನದಲ್ಲಿ ಭಾರಿ ಕೋಲಾಹಲ ಎಬ್ಬಿಸಿತಲ್ಲದೆ ಅನೇಕ ಇತರ ಪಕ್ಷಗಳ ಸದಸ್ಯರೂ ಬೇಬಿಯವರನ್ನು ಬೆಂಬಲಿಸಿದರು.